

## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ

# ಮಹಾಕುಂಭದಲ್ಲಿ ಪವಿತ್ರ ಸ್ನಾನ.

ಫೆಬ್ರುವರಿ 14 ರ ಬೆಳಿಗ್ಗೆ ಹರಿಹರದ ಸಿದ್ಧಾರೂಢ ಮಠದ ಜಗದ್ಗುರು ಶ್ರೀ ಪ್ರಭುಲಿಂಗ ಮಹಾ ಸ್ವಾಮೀಜಿ ನಾವಿರುವಲ್ಲಿಗೆ ಬಂದರು. ಓಂಕಾರಾಶ್ರಮದ ಟೆಂಟ್ ತೆರವಾಗುತ್ತಿತ್ತು. ಸೆಕ್ಟರ್ 18 ರಲ್ಲಿರುವ ವಿಶ್ವ ಹಿಂದೂ ಪರಿಷತ್ ನ ಟೆಂಟ್ಗೆ ಬಂದೆವು. ಮೂರೂ ನದಿಗಳು ಕೂಡುವ ಸಂಗಮಕ್ಕೆ ಬಂದೆವು. ಇದು ಪವಿತ್ರ. ಜೀವಾತ್ಮ ಜಗತ್ತು ಪರಮಾತ್ಮನಲ್ಲಿ ಒಂದಾಗಿ ಬೆರೆಯುವುದು, ಈಡಾ ಪಿಂಗಳಾ ನಾಡಿಗಳು ಸುಷುಮ್ನಾ ನಾಡಿಯಲ್ಲಿ ಒಂದಾಗುವುದು ಹೀಗೆ ಹಲವು ಆಧ್ಯಾತ್ಮಿಕ ಸಾಂಕೇತಿಕ ಅರ್ಥ ಸಂಗಮ. ಪ್ರಭುಲಿಂಗ ಸ್ವಾಮೀಜಿ, ಕೆ. ಚಂದ್ರಾಚಾರಿ, ಪ್ರದೀಪ, ಮನೋಹರ ಸ್ವಾಮಿ ಸಂಗಮದಲ್ಲಿ ಮಿಂದೆದ್ದು ಸೂರ್ಯನಿಗೆ ಅರ್ಘ್ಯ ನೀಡಿ ಪ್ರಾರ್ಥಿಸಿದೆವು. ಸಿದ್ಧಾರೂಢರ ವಿಗ್ರಹವನ್ನು ಮುಳುಗಿಸಿ ಎತ್ತಿ ಸಿದ್ಧಾರೂಢರ ಮಂಗಲ ಹಾಡಿದೆವು. ಬಟ್ಟೆ ಬದಲಿಸಿ ಭಸ್ಮ ಧರಿಸಿ ಕ್ಷಣ ಧ್ಯಾನ ಮಾಡಿ ಕಣ್ತೆರೆದೊಡನೆ ಭಕ್ತನೊಬ್ಬ ತಿಂಡಿಪದಾರ್ಥ ನೀಡಿದ. ಅಲ್ಲಲ್ಲಿ ಆಹಾರವೀಯುವ ಭಗವಂತನನ್ನು ನೆನೆಯುತ್ತ ಅದನ್ನು ಸ್ವೀಕರಿಸಿದೆವು. ದಾರಿಯಲ್ಲಿ ಗೆಣಸಿನಂತೆ ಹೋಲುವ ಹತ್ತಾರು ಕಿಲೋ ತೂಕದ ಕಂದ ವಿಶೇಷವನ್ನು ಕಂಡು ತುಂಡು ಕೊಂಡು ಸವಿದೆವು. ಋಷಿ ಮುನಿಗಳು ಗೆಡ್ಡೆ ಗೆಣಸು ಕಂದಮೂಲ ಹಣ್ಣು ಹಂಪಲು ತಿಂದು ಬದುಕುತ್ತಿದ್ದರೆಂಬ ಮಾತು ಇನ್ನಷ್ಟು ಅರ್ಥವಾಯಿತು.

# ಮಾಜಿ ಪ್ರಧಾನಿ ದೇವೇಗೌಡರು ಮೋದಿಯ ಚಿಯರ್ ಲೀಡರ್

## ನೀರಾವರಿ ಯೋಜನೆಗಳ ಕುರಿತು ಸಂಸತ್‌ನಲ್ಲಿ ದೇವೇಗೌಡರು ಸಭೆಯ ಗಮನಸೆಳೆದ ವಿಚಾರವಾಗಿ ಸಿಎಂ ಸುದೀರ್ಘವಾದ ಪ್ರತಿಕ್ರಿಯೆ

• ಉದಯವಾಹಿನಿ ಬೆಂಗಳೂರು

ರಾಜ್ಯದ ನೀರಾವರಿ ಯೋಜನೆಗಳ ಕುರಿತು ಸಂಸತ್‌ನಲ್ಲಿ ದೇವೇಗೌಡರು ಸಭೆಯ ಗಮನಸೆಳೆದ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಸುದೀರ್ಘವಾದ ಪ್ರತಿಕ್ರಿಯೆ ನೀಡಿದ್ದಾರೆ. ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿರುವ ಸಿದ್ದರಾಮಯ್ಯ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ ರಾಜ್ಯದ ನೀರಾವರಿ ಯೋಜನೆಗಳಿಗೆ ಸಹಾಯ ಮಾಡುವಂತೆ ದೇವೇಗೌಡರಿಗೆ ಮನವಿ ಮಾಡಿದ್ದಾರೆ.

ನೀರಾವರಿ ವಿಚಾರದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯದ ವಿರುದ್ಧ ಪಕ್ಷಾತೀತವಾಗಿ ಹೋರಾಡಲು ಸಿದ್ಧ ಎಂಬ ಮಾಜಿ ಹೆಚ್.ಡಿ.ದೇವೇಗೌಡರ ಹೇಳಿಕೆಯನ್ನು ನಾನು ಸಂಪೂರ್ಣ ಸ್ವಾಗತಿಸುತ್ತೇನೆ. ವೈಯಕ್ತಿಕವಾಗಿ ಇದು ನನ್ನ ಅಭಿಪ್ರಾಯವಾಗಿದ್ದು, ನೆಲ-ಜಲ-ಭಾಷೆ ವಿಚಾರದಲ್ಲಿ ನಾನು ಸದಾ ಕನ್ನಡಿಗನಾಗಿ ನಡೆದುಕೊಂಡಿದ್ದೇನೆಯೇ ಹೊರತು ರಾಜಕಾರಣಿಯಾಗಿ ಅಲ್ಲ ಎನ್ನುವುದನ್ನು ಹಿರಿಯರಾದ ದೇವೇಗೌಡರ ಗಮನಕ್ಕೆ ತರಬಯಸುತ್ತೇನೆ. ಹತ್ತು ದಿನಗಳ ಅವಧಿಯಲ್ಲಿ 15,000 ಕ್ಯುಸೆಕ್ಸ್ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಬೇಕೆಂದು 2016ರ ಸೆಪ್ಟೆಂಬರ್ ತಿಂಗಳಲ್ಲಿ ಸುಪ್ರೀಂ ಕೋರ್ಟ್ ಆದೇಶ ನೀಡಿದಾಗ ಉದ್ಭವವಾದ ಬಿಕ್ಕಟ್ಟಿನ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ನಾನು ನಿಮ್ಮ ಮನೆಗೆ ಬಂದು ಕೈಹಿಡಿದು ಕರೆದುಕೊಂಡು ಬಂದು ಸರ್ವಪಕ್ಷಗಳ ಸಭೆ ನಡೆಸಿದ್ದು ನಿಮಗೆ ನೆನಪಿರಬಹುದೆಂದು ಭಾವಿಸಿದ್ದೇನೆ. ಹಿಂದೆಲ್ಲ ರಾಜ್ಯದ ಹಿತಾಸಕ್ತಿಯ ರಕ್ಷಣೆಯ ಪ್ರಶ್ನೆ ಎದುರಾದಾಗ ಒಬ್ಬ ಮುತ್ಸದ್ದಿಯಾಗಿ ಇದಕ್ಕಿಂತಲೂ ಮುಖ್ಯವಾಗಿ ಒಬ್ಬ ಹೆಮ್ಮೆಯ ಕನ್ನಡಿಗನಾಗಿ ರಾಜ್ಯಕ್ಕೆ ನ್ಯಾಯ ಕೊಡಲು ನೀವು ಹೋರಾಟ ನಡೆಸಿದ್ದನ್ನು ರಾಜ್ಯದ ಜನರು ಗಮನಿಸಿದ್ದಾರೆ. ಆದರೆ ಇತ್ತೀಚೆಗೆ ನೀವು ಮತ್ತು ನಿಮ್ಮ ಪಕ್ಷ ಕೇಂದ್ರ ಸರ್ಕಾರದ ವಕ್ತಾರರಂತೆ ಪಕ್ಷಪಾತಿಯಾಗಿ ವರ್ತಿಸುತ್ತಿರುವುದನ್ನು ಕೂಡಾ ನನ್ನನ್ನೂ ಸೇರಿದಂತೆ ಏಳುಕೋಟಿ ಕನ್ನಡಿಗರು ಗಮನಿಸುತ್ತಿದ್ದಾರೆ. ಕೇಂದ್ರ ಸಂಪುಟದಲ್ಲಿ ಮಗನನ್ನು ಸಚಿವನನ್ನಾಗಿ ಮಾಡಲು ಗೌಡರು ಇಷ್ಟೊಂದು ರಾಜಿ ಮಾಡಿಕೊಳ್ಳುವ ಅಗತ್ಯ ಇತ್ತಾ? ಎಂದು ಜನ ಪ್ರಶ್ನಿಸುತ್ತಿದ್ದಾರೆ ಮಹದಾಯಿ ಜಲಾನಯನ ಪ್ರದೇಶದ ಕಳಸಾ ನಾಲೆ ಯೋಜನೆಯ ರೂ.995.30 ಕೋಟಿ ವೆಚ್ಚದ ವಿಸ್ತೃತ ಯೋಜನಾ ವರದಿ (ಡಿಪಿಆರ್ )ಗೆ 2023ರ ಮಾರ್ಚ್‌ನಲ್ಲಿಯೇ ಅನುಮೋದನೆ ನೀಡಲಾಗಿದೆ. ಬಂಡೂರಿ ನಾಲೆ ತಿರುವು ಯೋಜನೆಗೆ ಅಗತ್ಯವಿರುವ 28 ಹೆಕ್ಟೇರ್ ಅರಣ್ಯ ಪ್ರದೇಶದ ಸ್ವಾಧೀನಕ್ಕಾಗಿ 2024ರ ಆಗಸ್ಟ್‌ನಲ್ಲಿಯೇ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಈ ಬೇಡಿಕೆಗೆ ಸಂಬಂಧಿಸಿದ ಇತರ ಪ್ರಕ್ರಿಯೆಗಳನ್ನು ರಾಜ್ಯ ಸರ್ಕಾರ ಸಂಪೂರ್ಣಗೊಳಿಸಲಾಗಿದ್ದು ಈ ನದಿ ತಿರುವು ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡುವುದಷ್ಟೇ ಬಾಕಿ ಉಳಿದಿದೆ. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡಿದರೆ ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಮತ್ತು ದಾವಣಗೆರೆಯ ಬರಪೀಡಿತ ಪ್ರದೇಶಗಳಿಗೆ ವರದಾನವಾಗಲಿದೆ. ಈ ಘೋಷಣೆಯ ಪ್ರಸ್ತಾವಕ್ಕೆ ಸಾರ್ವಜನಿಕ ಹೂಡಿಕೆ ಸಮಿತಿ ಈಗಾಗಲೇ ಅಂಗೀಕಾರ ನೀಡಿದೆ. ಆದರೆ ಕೇಂದ್ರ ಸರ್ಕಾರ ಮೀನಮೇಷ ಎಣಿಸುತ್ತಾ ಕೂತಿದೆ. ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆ ಮತ್ತು 400 ಮೆಗಾವಾಟ್ ವಿದ್ಯುತ್ ಉತ್ಪಾದನೆಗಾಗಿಯೇ ಮೇಕೆದಾಟು ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯ ವಿವರಗಳೆಲ್ಲ ನಿಮಗೆ ಬಾಯಿಪಾಠದಲ್ಲಿರಬಹುದು. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮತಿ ದೊರಕಿಸಿಕೊಟ್ಟರೆ ಬೆಂಗಳೂರು ನಿವಾಸಿಗಳು ಸದಾ ನಿಮಗೆ ಋಣಿಯಾಗಿರುತ್ತಾರೆ.

### ಸರ್ಕಾರದ ಸಂಪೂರ್ಣ ಬೆಂಬಲ

ದೈಹಿಕವಾಗಿ ನೀವು ಸ್ವಲ್ಪ ಕುಗ್ಗಿದಂತೆ ಕಂಡರೂ ಮಾನಸಿಕವಾಗಿ ನೀವಿನ್ನೂ ದೃಢವಾಗಿದ್ದೀರಿ. ದಯವಿಟ್ಟು ಈಗಲಾದರೂ ಪಕ್ಷ ರಾಜಕಾರಣವನ್ನು ಮೀರಿ ಒಬ್ಬ ಮುತ್ಸದ್ಧಿ ನಾಯಕನ ರೀತಿಯಲ್ಲಿ ಕನ್ನಡ-ಕನ್ನಡಿಗ-ಕರ್ನಾಟಕದ ಹಿತರಕ್ಷಣೆಗೆ ಮುಂದಾಗಬೇಕೆಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ನಿಟ್ಟಿನಲ್ಲಿ ನೀವು ಮಾಡುವ ಪ್ರಯತ್ನಕ್ಕೆ ನಮ್ಮ ಸರ್ಕಾರದ ಸಂಪೂರ್ಣ ಬೆಂಬಲ ಇದೆ. ಏಳು ಕೋಟಿ ಕನ್ನಡಿಗರೂ ನಿಮ್ಮ ಜೊತೆಯಲ್ಲಿ ಇರುತ್ತಾರೆ ಎಂಬ ಭರವಸೆಯೂ ನನಗಿದೆ



ಕರ್ನಾಟಕ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯಗಳ ಸರಮಾಲೆಯನ್ನು ಸದ್ಯ ನೀರಾವರಿ ಕ್ಷೇತ್ರಕ್ಕಷ್ಟೇ ಸೀಮಿತಗೊಳಿಸುತ್ತಿದ್ದೇನೆ. ಇನ್ನು ತೆರಿಗೆ ಹಂಚಿಕೆ, ಪ್ರಕೃತಿ ವಿಕೋಪ ಪರಿಹಾರ, ಕುಡಿಯುವ ನೀರು ಪೂರೈಕೆ, ರೈಲ್ವೆ ಯೋಜನೆಗಳ ವಿಚಾರದಲ್ಲಿಯೂ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕರ್ನಾಟಕವನ್ನು ಶತ್ರು ರಾಜ್ಯದಂತೆ ನಡೆಸಿಕೊಳ್ಳುತ್ತಿದೆ. ಈ ವಿಚಾರಗಳು ಕೂಡಾ ನಿಮಗೆ ಗೊತ್ತಿರುವುದರಿಂದ ಸಂಸತ್‌ನಲ್ಲಿ ಈ ಬಗ್ಗೆ ನೀವು ದನಿ ಎತ್ತುತ್ತೀರಿ ಎಂದು ರಾಜ್ಯದ ಜನರು ನಿರೀಕ್ಷಿಸಿದ್ದರು.




400 ಮೆಗಾವಾಟ್ ವಿದ್ಯುತ್ ಉತ್ಪಾದನೆ

# ವಿಭಿನ್ನ ಸಂಗೀತ, ನೃತ್ಯ ಕಾರ್ಯಕ್ರಮ

• ಉದಯವಾಹಿನಿ ಬೆಂಗಳೂರು

ನೃತ್ಯ ದಿಶಾ ಟ್ರಸ್ಟ್ ವತಿಯಿಂದ ಫೆಬ್ರವರಿ 19, ಬುಧವಾರ ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಮಲ್ಲತ್ತಹಳ್ಳಿ ಕಲಾಗ್ರಾಮದ ಸಮುಚ್ಚಯ ರಂಗಮಂದಿರದಲ್ಲಿ ನೃತ್ಯ ಸಂಭ್ರಮ ಎಂಬ ಶೀರ್ಷಿಕೆಯಲ್ಲಿ ವಿಭಿನ್ನ ಸಂಗೀತ ಮತ್ತು ನೃತ್ಯ ಕಾರ್ಯಕ್ರಮವನ್ನು ಟ್ರಸ್ಟಿನ ಸಂಸ್ಥಾಪಕ ನಿರ್ದೇಶಕರೂ ಹಾಗೂ



ಗುರುಗಳೂ ಆದ 'ಕಲಾಭೂಷಿಣಿ' ಡಾ|| ದರ್ಶಿನಿ ಮಂಜುನಾಥ್ ಆಯೋಜಿಸಿದ್ದಾರೆ. ಮುಖ್ಯ ಅತಿಥಿಗಳು ಗುರು.ವಿದುಷಿ ಶ್ರೀಮತಿ ಲತಾ ಕೆ. ಶಂಕರ್ (ಸಂಸ್ಥಾಪಕ ನಿರ್ದೇಶಕರು, ಕಲಾಮಯಿ ನೃತ್ಯ ಶಾಲೆ), ಶ್ರೀಮತಿ ಎಂ.ವಿ. ಅರುಂಧತಿ (ಹಿರಿಯ ಸಹಾಯಕ ನಿರ್ದೇಶಕರು, ನಗರ ಯೋಜನೆ, ಕರ್ನಾಟಕ ಸರ್ಕಾರ) ಮತ್ತು ಶ್ರೀ ಎಂ.ವಿ. ರಂಗಸ್ವಾಮಿ (ಮಾಜಿ ಜಿಲ್ಲಾ ಉಸ್ತುವಾರಿ ಸದಸ್ಯರು, ಹಾಸನ). ಸಹಕಾರ : ಸಂಸ್ಕೃತಿ ಸಚಿವಾಲಯ (ಭಾರತ ಸರ್ಕಾರ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ).

# ಕೈ ಪಾಳಯ ಸೇರಿದ ಶಿವರಾಮೇಗೌಡ, ಬ್ರಿಜೇಶ್ ಕಾಳಪ್ಪ

• ಉದಯವಾಹಿನಿ ಬೆಂಗಳೂರು

ಕಾಂಗ್ರೆಸ್ ಪಕ್ಷದಲ್ಲಿ ಘರ್ ವಾಪಸಾತಿ ನಡೆಯುತ್ತಿದ್ದು ಶಾಸಕ ಶಿವರಾಮೇಗೌಡ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಇವರೊಂದಿಗೆ ಕಾಂಗ್ರೆಸ್ ಬಿಟ್ಟು ಆಮ್ ಆದಿ ಪಾರ್ಟಿ ಸೇರಿದ್ದ ಬ್ರಿಜೇಶ್ ಕಾಳಪ್ಪ ಕೂಡ ಕಾಂಗ್ರೆಸ್‌ಗೆ ವಾಪಸ್ ಆಗಿದ್ದಾರೆ ನಾಗಮಂಗಲ ಶಾಸಕರಾಗಿರುವ ಎಲ್ ಆರ್ ಶಿವರಾಮೇಗೌಡ ಬಿಜೆಪಿ ಪಕ್ಷ ಬಿಟ್ಟು ಪುತ್ರ ಚೇತನ್ ಗೌಡರೊಂದಿಗೆ ಮರಳಿ ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡಿದ್ದಾರೆ ಇವರೊಂದಿಗೆ ಅಪಾರ ಸಂಖ್ಯೆಯ ಬೆಂಬಲಿಗರು ಕೂಡ ಕೈಪಕ್ಷ ಸೇರಿದ್ದಾರೆ. ಕಳೆದ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ತೊರೆದು ಎಎಪಿ ಪಕ್ಷ ಸೇರಿದ್ದ ಬ್ರಿಜೇಶ್ ಕಾಳಪ್ಪ ಕೂಡಾ ಕಾಂಗ್ರೆಸ್ ಕೈ ಹಿಡಿದಿದ್ದಾರೆ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಶಿವರಾಮೇಗೌಡ ಹಾಗೂ ಬ್ರಿಜೇಶ್ ಕಾಳಪ್ಪ ರನ್ನು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಪಕ್ಷದ ಬಾವುಟ ನೀಡಿ ಸ್ವಾಗತಿಸಿದ್ರು. ದೇಶದಲ್ಲಿ ಅಭಿವೃದ್ಧಿ ಮಾಡುವ ಪಕ್ಷವೇನಾದರೂ ಇದ್ದರೆ ಅದು ಕಾಂಗ್ರೆಸ್ ಮಾತ್ರ ಎಂಬುದನ್ನು ಮನಗಂಡಿರುವ ನಾಯಕರು ಕಾಂಗ್ರೆಸ್ ಪಕ್ಷದ ಕೈಹಿಡಿದಿದ್ದಾರೆ ಎಂದು ಇದೇ ವೇಳೆ ಡಿ.ಕೆ ಶಿವಕುಮಾರ್ ಹೇಳಿದ್ರು



ಉದಯವಾಹಿನಿ ಚಿತ್ರ

# ನಿಖಿಲ್‌ಗೆ ಜೆಡಿಎಸ್ ರಾಜ್ಯಾಧ್ಯಕ್ಷ ಪಟ್ಟ ಮೇ ನಲ್ಲಿ ಅಧಿಕೃತ ಘೋಷಣೆ

• ಉದಯವಾಹಿನಿ ಬೆಂಗಳೂರು

ಜೆಡಿಎಸ್ ರಾಜ್ಯಾಧ್ಯಕ್ಷ ಹುದ್ದೆಗೆ ನಿಖಿಲ್ಕುಮಾರಸ್ವಾಮಿ ಆಯ್ಕೆ ಬಹುತೇಕ ಖಚಿತವಾಗಿದೆ. ಜೆಡಿಎಸ್ ನಿಂದ ದೊಡ್ಡ ಸಮಾವೇಶ ನಡೆಸಲು ತೀರ್ಮಾನಿಸಲಾಗಿದ್ದು, ಅಲ್ಲಿಯೇ ಅಧಿಕೃತವಾಗಿ ಹೆಸರು ಘೋಷಣೆಯಾಗಲಿದೆ.

ಮೇ ತಿಂಗಳಲ್ಲಿ ಮೈಸೂರು, ಮಂಡ್ಯ ಅಥವಾ ತುಮಕೂರಲ್ಲಿ ಬೃಹತ್ ಸಮಾವೇಶ ನಡೆಯಲಿದ್ದು, ಅಲ್ಲಿಯೇ ನಿಖಿಲ್ ಕುಮಾರಸ್ವಾಮಿ ಹೆಸರನ್ನು ಅಧಿಕೃತವಾಗಿ ಘೋಷಿಸುವ ಸಾಧ್ಯತೆ ಇದೆ.



ಉದಯವಾಹಿನಿ ಚಿತ್ರ

ಕೇಂದ್ರ ಸಚಿವ ಕುಮಾರಸ್ವಾಮಿ ಈಗಾಗಲೇ ಪಕ್ಷದ ಪದಾಧಿಕಾರಿಗಳು ಹಾಗೂ ಮುಖಂಡರ ಜತೆ ಒಂದು ಸುತ್ತಿನ ಸಮಾಲೋಚನೆ ನಡೆಸಿದ್ದು, ಮಾರ್ಚ್ 6 ರಂದು ಮತ್ತೊಂದು ಸುತ್ತಿನ ಮೀಟಿಂಗ್ ನಡೆಸಲಿದ್ದಾರೆ. ತಾಲ್ಲೂಕು, ಜಿಲ್ಲಾ ಪಂಚಾಯ್ತಿ ಎಲೆಕ್ಷನ್ ಸಂಬಂಧವೂ ಸುದೀರ್ಘ ಚರ್ಚೆ ನಡೆಸಲು ದಳಪತಿಗಳು ತೀರ್ಮಾನಿಸಿದ್ದಾರೆ. ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡುವ ಸಲುವಾಗಿ ಸಮಾವೇಶ ಆಯೋಜನೆಗೆ ದಳಪತಿಗಳ ತೀರ್ಮಾನಿಸಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್ ಪಕ್ಷವನ್ನು ಸದೃಢವಾಗಿ ಕಟ್ಟಬೇಕು ಅನ್ನೋ ಸದುದ್ದೇಶದಿಂದ ನಿಖಿಲ್ ಗೆ ಪಟ್ಟ ಕಟ್ಟಲು ದಳಪತಿಗಳು ತೀರ್ಮಾನಿಸಿದ್ದಾರೆ. ಒಕ್ಕಲಿಗ ಜಾತಿ ಸಮೀಕರಣಕ್ಕೆ ಹೆಚ್ಚು ಒತ್ತು ನೀಡುವ ಸಲುವಾಗಿ ನಿಖಿಲ್ ಕುಮಾರಸ್ವಾಮಿಯನ್ನು ಫೀಲ್ಡ್ ಗೆ ಇಳಿಸಲಾಗುತ್ತಿದೆ.

# ಬೆಚ್ಚಿ ಬೀಳಿಸೋ ಘಟನೆ: ಪತ್ನಿಯನ್ನೇ ಕಟ್ಟಡದಿಂದ ಕೆಳಗೆ ತಳ್ಳಿ ಪತಿಯೇ ಹತ್ಯೆ

• ಉದಯವಾಹಿನಿ ಬೆಂಗಳೂರು


ನಗರದಲ್ಲಿ ಬೆಚ್ಚಿ ಬೀಳಿಸೋ ಘಟನೆ ಎನ್ನುವಂತೆ ಪತಿಯೊಬ್ಬ ತನ್ನ ಪತ್ನಿಯನ್ನೇ ಕಟ್ಟಡದಿಂದ ಕೆಳಗೆ ತಳ್ಳಿ ಹತ್ಯೆಗೈದಿದ್ದಾರೆ. ಬೆಂಗಳೂರಿನ ಆನೇಕಲ್ ತಾಲ್ಲೂಕಿನ ಚೌಡದೇನಹಳ್ಳಿಯಲ್ಲಿ ಪತ್ನಿಯನ್ನೇ ಕಟ್ಟಡದಿಂದ ಕೆಳಗೆ ತಳ್ಳಿ ಪಾಪಿ ಪತಿಯೊಬ್ಬ ಹತ್ಯೆಗೈದಿರುವಂತ ಘಟನೆ ನಡೆದಿದೆ. ಪತಿ-ಪತ್ನಿಯರ ನಡುವೆ ಕ್ಷುಲ್ಲಕ ಕಾರಣಕ್ಕಾಗಿ ಜಗಳ ಉಂಟಾಗಿತ್ತು. ಈ ಜಗಳ ತಾರಕಕ್ಕೆ ಏರಿದಾಗ ಪತಿ, ಪತ್ನಿಯನ್ನು ಕಟ್ಟಡದ ಮೇಲಿನಿಂದ ಕೆಳಗೆ ತಳ್ಳಿದ್ದಾನೆ. ಈ ಘಟನೆಯಲ್ಲಿ ಪತ್ನಿ ಗಂಭೀರವಾಗಿ ಗಾಯಗೊಂಡಿದ್ದಾಳೆ. ಆಕೆಯನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯದಲ್ಲಿ ಸಾವನ್ನಪ್ಪಿರುವುದಾಗಿ ತಿಳಿದು ಬಂದಿದೆ. ಈ ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದಂತ ಸರ್ಜಾಪುರ ಠಾಣೆಯ ಪೊಲೀಸರು ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ರೈತ ಮುಖಂಡ ಕುರುಬೂರು ಶಾಂತಕುಮಾರ್ ಏರ್ ಆಂಬುಲೆನ್ಸ್ ಮೂಲಕ ಆಗಮನ

• ಉದಯವಾಹಿನಿ ಬೆಂಗಳೂರು

ಪಂಜಾಬಿನ ಪಟಿಯಾಲ ಬಳಿ ಸಂಭವಿಸಿದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿರುವ ರೈತ ಮುಖಂಡ ಕುರುಬೂರು ಶಾಂತಕುಮಾರ್ ಅವರನ್ನು ಏರ್ ಆಂಬುಲೆನ್ಸ್ ಮೂಲಕ ಬೆಂಗಳೂರಿಗೆ ಕರೆ ತರಲಾಗಿದೆ.

ಚಿಕಿತ್ಸೆಗಾಗಿ ಶಾಂತಕುಮಾರ್ ಅವರನ್ನು ಇದೀಗ ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಶಾಂತಕುಮಾರ್ ಅವರು ಶೀಘ್ರ ಗುಣಮುಖರಾಗಲಿ ಎಂದು ಮುಖ್ಯಮಂತ್ರಿ



ಉದಯವಾಹಿನಿ ಚಿತ್ರ

ಸಿದ್ದರಾಮಯ್ಯ ಅವರು ಹಾರೈಸಿದ್ದಾರೆ. ಮೂರು ದಿನಗಳ ಹಿಂದೆ ಸಂಭವಿಸಿದ ಅಪಘಾತದಲ್ಲಿ ಶಾಂತಕುಮಾರ್ ಅವರು ಗಾಯಗೊಂಡು ಪಟಿಯಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ವಿಷಯ ತಿಳಿದ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏರ್‌ಆಂ ಬುಲೆನ್ಸ್ ಮೂಲಕ ಶಾಂತಕುಮಾರ್ ಅವರನ್ನು ಬೆಂಗಳೂರಿಗೆ ಕರೆತರುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು ಈ ಮಧ್ಯೆ, ದೆಹಲಿ ನಿವಾಸಿ ಆಯುಕ್ತರಾದ ಇಂಕೊಂಗ್ಲ ಜಮೀರ್ ಅವರು ಪಂಜಾಬ್ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಪಟಿಯಾಲದ ಆಸ್ಪತ್ರೆ ವೈದ್ಯರ ಜೊತೆ ಸತತ ಸಂಪರ್ಕದಲ್ಲಿದ್ದರು.

ಕರೆತರುವಂತೆ ಅಧಿಕಾರಿಗಳಿಗೆ ಸೂಚನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಅಧಿಕಾರಿಗಳು ನಿನ್ನೆ ಏರ್ ಆಂಬುಲೆನ್ಸ್ ಸಜ್ಜುಗೊಳಿಸಿದ್ದರು. ಇಬ್ಬರು ಸಹಾಯಕರು ಹಾಗೂ ವೈದ್ಯರ ತಂಡದೊಂದಿಗೆ ಇಂದು ಶಾಂತಕುಮಾರ್ ಅವರನ್ನು ಬೆಂಗಳೂರಿಗೆ ಕರೆತರಲಾಗಿದೆ.

# ರಾಜ್ಯದಲ್ಲಿ ಕೆಜಿ..ಕೆಜಿ ಚಿನ್ನಾಭರಣ ಕದ್ದ ಖದೀಮರು ರಾಜಸ್ಥಾನದಲ್ಲಿ ಅರೆಸ್ಟ್!

• ಉದಯವಾಹಿನಿ ಬೆಂಗಳೂರು

2.5 ಕೆ.ಜಿಗೂ ಅಧಿಕ ಚಿನ್ನಾಭರಣ ಕದ್ದು ಪರಾರಿಯಾಗಿದ್ದ ಇಬ್ಬರು ಹಾಲ್ ಮಾರ್ಕ್ ಸೆಂಟರ್ ಕೆಲಸಗಾರರನ್ನು ಪೊಲೀಸರು ರಾಜಸ್ಥಾನದಲ್ಲಿ ಬಂಧಿಸಿದ್ದಾರೆ.

ಹಾಲ್‌ಮಾರ್ಕ್ ಹಾಕಲು ವಿವಿಧ ಚಿನ್ನದಂಗಡಿಗಳಿಂದ ಸೆಂಟರ್ ಬಂದಿದ್ದ ಚಿನ್ನಾಭರಣಗಳನ್ನು ಕಳವು ಮಾಡಿದ್ದ ರಾಜಸ್ಥಾನ ಮೂಲದ ಮಹಬೀರ್ ಬುರ್ಜರ್ ಹಾಗೂ ಮಣೀಶ್ ಪ್ರಜಾಪತ್ ಎಂಬುವವರನ್ನು ಹಲಸೂರು ಗೇಟ್ ಪೊಲೀಸರು ಅರೆಸ್ಟ್ ಮಾಡಿದ್ದಾರೆ. ಕಬ್ಬನ್ ಪೇಟೆಯಲ್ಲಿರುವ ಹಾಲ್‌ಮಾರ್ಕ್ ಸೆಂಟರ್‌ನಲ್ಲಿ ಆರೋಪಿಗಳು ಕೆಲಸ ಮಾಡುತ್ತಿದ್ದರು. ಹಾಲ್‌ಮಾರ್ಕ್ ಹಾಕಿಸಲು ನಗರದ ವಿವಿಧ ಚಿನ್ನದಂಗಡಿಗಳಿಂದ ಸೆಂಟರ್‌ಗೆ ಬರುತ್ತಿದ್ದ ಚಿನ್ನಾಭರಣಗಳನ್ನು ದೋಚಿ ಜ.25 ರಂದು ಪರಾರಿಯಾಗಿದ್ದರು. ಈ ಕುರಿತು ಹಾಲ್‌ಮಾರ್ಕ್ ಸೆಂಟರ್ ಮಾಲೀಕರು ನೀಡಿದ್ದ ದೂರಿನನ್ವಯ ತನಿಖೆ ಮಾಡಿರುವ ಪೊಲೀಸರು ಕಳ್ಳರನ್ನು ಬಂಧಿಸಿದ್ದಾರೆ. ಕದ್ದ ಮಾಲನ್ನು ರಾಜಸ್ಥಾನದ ವಿವಿಧ ಜಿಲ್ಲೆಗಳಲ್ಲಿ ಮಾರಾಟ ಮಾಡಲಾಗಿದ್ದು, ಅದನ್ನು ವಶಕ್ಕೆ ಪಡೆಯಲು ಕ್ರಮ ಕೈಗೊಂಡಿದ್ದೇವೆ ಎಂದು ಬೆಂಗಳೂರು ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಹೆಚ್.ಟಿ ಅವರು ತಿಳಿಸಿದ್ದಾರೆ.

# 84624.5 ಕೋಟಿ ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಕಲೆಕ್ಷನ್..!

• ಉದಯವಾಹಿನಿ ಬೆಂಗಳೂರು

ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಈವರೆಗೆ ರೂ.84624.05 ಕೋಟಿಯನ್ನು ರಾಜ್ಯ ಸರ್ಕಾರ ವಾಣಿಜ್ಯ ತೆರಿಗೆಗಳ ಸಂಗ್ರಹಿಸಿದೆ. ರಾಜ್ಯದಲ್ಲಿ ಡಿಸೆಂಬರ್ ತಿಂಗಳಿಗಿಂತ ಜನವರಿಯಲ್ಲಿ ಹೆಚ್ಚು ಸಂಗ್ರಹವಾಗಿದೆ. ಡಿಸೆಂಬರ್‌ನಲ್ಲಿ 8185.69 ಕೋಟಿ ರೂ. ತೆರಿಗೆಯ ಸಂಗ್ರಹವಾಗಿತ್ತು. ಜನವರಿ ತಿಂಗಳಲ್ಲಿ ರೂ.8865.81 ಕೋಟಿ ತೆರಿಗೆ ಸಂಗ್ರಹವಾಗಿದೆ ಎಂದು ವಾಣಿಜ್ಯ ತೆರಿಗೆಗಳ ಇಲಾಖೆಯ ಮಾಹಿತಿ ನೀಡಿದೆ.

ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಇದುವರೆಗೆ 84624.05 ಕೋಟಿ ರೂ. ಸಂಗ್ರಹವಾಗಿದೆ. ಡಿಸೆಂಬರ್ ತಿಂಗಳಿಗಿಂತ ಜನವರಿಯಲ್ಲಿ ಹೆಚ್ಚು ಸಂಗ್ರಹವಾಗಿದೆ.

ಡಿಸೆಂಬರ್‌ಗಿಂತ ರೂ।680.12 ಕೋಟಿಯಷ್ಟು ಅಧಿಕವಾಗಿದೆ.

ಅಕ್ಟೋಬರ್ ಮತ್ತು ನವೆಂಬರ್ ತಿಂಗಳ ಗಮನಿಸುವುದಾದರೆ ರೂ.9 ಸಾವಿರ ಕೋಟಿಗೂ ಹೆಚ್ಚು ತೆರಿಗೆ ಸಂಗ್ರಹವಾಗಿತ್ತು. ಸರಕು ಮತ್ತು ಸೇವಾ ತೆರಿಗೆ ಜನವರಿ ತಿಂಗಳಲ್ಲಿ ರೂ.6579.05, ಕರ್ನಾಟಕ ಮಾರಾಟ ತೆರಿಗೆ ರೂ.2188.15 ಹಾಗೂ ರೂ.98.61 ಕೋಟಿ ವೃತ್ತಿ ತೆರಿಗೆ ಸಂಗ್ರಹಿಸಲಾಗಿದೆ. ಕಳೆದ 10 ತಿಂಗಳಲ್ಲಿ ರೂ.64017.29 ಕೋಟಿ ಸರಕು ಮತ್ತು ಸೇವಾ ತೆರಿಗೆ, ಕರ್ನಾಟಕ ಮಾರಾಟ ತೆರಿಗೆ ರೂ.19472.16 ಕೋಟಿ, ವೃತ್ತಿ ತೆರಿಗೆ ರೂ.1134.60 ಕೋಟಿ ಸಂಗ್ರಹವಾಗಿದೆ. ಕಳೆದ ಆರ್ಥಿಕ ಸಾಲಿನಲ್ಲಿ ಈ 3 ತೆರಿಗೆಗಳು ಸೇರಿ ಒಟ್ಟು ರೂ.94363.27 ಕೋಟಿ ಸಂಗ್ರಹಿಸಲಾಗಿತ್ತು. ಕಳೆದ ವರ್ಷಕ್ಕಿಂತಲೂ ಈ ಬಾರಿ ಹೆಚ್ಚು ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ ಎಂದು ವರದಿಯಾಗಿದೆ.

ಈ ಬಾರಿ ಹೆಚ್ಚು ತೆರಿಗೆ ಸಂಗ್ರಹ



# 2,500 ಮರ ಕಡಿಯಲು ಹೈಕೋರ್ಟ್ ಅನುಮತಿ

• ಉದಯವಾಹಿನಿ ಬೆಂಗಳೂರು

ಭಾರತೀಯ ವಾಯುಪಡೆಯ ಕಮಾಂಡ್ ಆಸ್ಪತ್ರೆಗೆ ಸೇರಿದ ಸ್ಥಳದಲ್ಲಿ ಹೊಸದಾಗಿ ಬಹುಮಹಡಿ ಮಾದರಿ ಆಸ್ಪತ್ರೆಯ ನಿರ್ಮಾಣಕ್ಕಾಗಿ ಹಾಗೂ ಬೆಂಗಳೂರು ಉಪನಗರ ರೈಲು ಯೋಜನೆ(ಬಿಎಸ್‌ಆರ್‌ಪಿ)ಗಾಗಿ ಸುಮಾರು 2,500 ಮರಗಳ ಕಡಿಯುವುದಕ್ಕಾಗಿ ಹೈಕೋರ್ಟ್ ನಿನ್ನೆ ಅನುಮತಿ ನೀಡಿದೆ.

ಕರ್ನಾಟಕ ಮರ ಕಡಿತಲೆ ನಿಷೇಧ ಕಾಯಿದೆಯಲ್ಲಿ ಇರುವ ಹಲವು ನಿಯಮಗಳನ್ನು ಸೂಕ್ತ ರೀತಿಯಲ್ಲಿ ಅನುಸರಿಸಲು ನಿರ್ದೇಶನ ನೀಡುವಂತೆ ಕೋರಿ ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್ ಮತ್ತು ದತ್ತಾತ್ರೇಯ ಟಿ ದೇವರು ಎಂಬವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಪೀಠ, ಕಮಾಂಡ್ ಆಸ್ಪತ್ರೆಗಾಗಿ ಮರ ತಜ್ಞರ ಸಮಿತಿ(ಟಿಇಸಿ)ಯ ಶಿಫಾರಸಿನ ಮೇರೆಗೆ 530 ಮರಗಳು ಮತ್ತು (ಬಿಎಸ್‌ಆರ್‌ಪಿ)ಗಾಗಿ ಅಂಬೇಡ್ಕರ್ ನಗರದಿಂದ ಮುದ್ದನಹಳ್ಳಿಯವರೆಗಿನ ಮಾರ್ಗದಲ್ಲಿ 1988 ಮರಗಳ ಕಡಿಯಲು ಅನುಮತಿಸಿತು.

ಕಮಾಂಡ್ ಆಸ್ಪತ್ರೆಗಾಗಿ 736 ಮರಗಳನ್ನು ಕಡಿಯಲು ಅನುಮತಿ ನೀಡುವಂತೆ ರಕ್ಷಣಾ ಎಸ್ಟೇಟ್ ಅಧಿಕಾರಿ ಅನುಮತಿ ಕೋರಿದ್ದರು. ಈ ಸಂಬಂಧ ಪರಿಶೀಲನೆ ನಡೆಸಿದ್ದ ಟಿಇಸಿ 530 ಮರಗಳ ಕಡಿಯಲು ಅನುಮತಿ ನೀಡಿದೆ. ಎಂಟು ಮರಗಳನ್ನು ಸ್ಥಳಾಂತರಕ್ಕೆ ಶಿಫಾರಸು ಮಾಡಿದ್ದು 211 ಮರಗಳ ಕಡಿಯಲು ಅನುಮತಿ ನೀಡಲು ನಿರಾಕರಿಸಿದೆ. ಟಿಇಸಿ ನೀಡಿದ ವರದಿಯಂತೆ ನ್ಯಾಯಪೀಠ ಆದೇಶಿಸಿದೆ. ಕಮಾಂಡ್ ಆಸ್ಪತ್ರೆಗೆ 530 ಮರಗಳನ್ನು ಕಡಿಯುವುದಕ್ಕೆ ಪರ್ಯಾಯವಾಗಿ ಪ್ರತಿ ಮರಕ್ಕೂ 10ರಂತೆ ಅಂದರೆ 5,300 ಗಿಡಗಳನ್ನು ನೆಡಬೇಕಾಗಿದೆ.

ವಾಯುಪಡೆ ಜಾಗಗಳಾದ ಜಾಲಹಳ್ಳಿ ಯಲಹಂಕದಲ್ಲಿ ಈಗಾಗಲೇ ಗಿಡಗಳನ್ನು ನೆಟ್ಟಿದೆ.

ಹೀಗಾಗಿ ಕಮಾಂಡ್ ಆಸ್ಪತ್ರೆಯ ಆವರಣದಲ್ಲಿ ಮರ ಕಡಿಯುವುದಕ್ಕೆ ಪರಿಹಾರವಾಗಿ ಪರ್ಯಾಯ ಸ್ಥಳಗಳಲ್ಲಿ ಅರಣ್ಯೀಕರಣ ಮಾಡುವುದಕ್ಕೆ ಮುಂದಾಗಿರುವುದರಿಂದ ಆ ಸ್ಥಳದಲ್ಲಿ ಮರ ಕಡಿಯಲು ಅನುಮತಿ ನೀಡಬಾರದು ಎಂಬ ಅರ್ಜಿದಾರರ ಮನವಿಯನ್ನು ನ್ಯಾಯಪೀಠ ತಳ್ಳಿ ಹಾಕಿದೆ.



# ನಟ ದರ್ಶನ್ ಹುಟ್ಟುಹಬ್ಬಕ್ಕೆ ಹಾಕಲಾಗಿದ್ದ ಬ್ಯಾನರ್ ತೆರವು

• ಉದಯವಾಹಿನಿ ಬೆಂಗಳೂರು

ನಟ ದರ್ಶನ್ 48ನೇ ವಸಂತಕ್ಕೆ ಕಾಲಿಟ್ಟಿದ್ದು, ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬದ ಶುಭ ಕೋರಿ ಹಾಕಲಾಗಿದ್ದ ಬೃಹತ್ ಬ್ಯಾನರ್ ಗಳನ್ನು ನಗರಸಭೆ ತೆರವುಗೊಳಿಸಿದ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಡೆದಿದೆ.

ಬೆಂ.ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನ ಕೆಇಬಿ ವೃತದಲ್ಲಿ ನಟ ದರ್ಶನ್ ಅವರ ಜನ್ಮ ದಿನದ ಪ್ರಯುಕ್ತ ಶುಭ ಕೋರಿ ಅಭಿಮಾನಿಗಳು ಬೃಹತ್ ಬ್ಯಾನರ್ ಗಳನ್ನು ಹಾಕಲಾಗಿತ್ತು. ಆದರೆ ಇದೀಗ ಏಕಾಏಕಿ ನಗರಸಭೆ ಸಿಬ್ಬಂದಿಗಳು ತೆರವುಗೊಳಿಸಿದ್ದಾರೆ. ಬ್ಯಾನರ್ ಅಳವಡಿಕೆಗೆ ಯಾವುದೇ ಪರ್ಮಿಷನ್ ಕೇಳದೆ ಬ್ಯಾನರ್ ಅಳವಡಿಸಿದ ಹಿನ್ನಲೆ ಶುಭಾಶಯ ಬ್ಯಾನರ್ ತೆರವು ಮಾಡಲಾಗಿದೆ ಎಂದು ಸಿಬ್ಬಂದಿಗಳು ತಿಳಿಸಿದ್ದಾರೆ.

ಸದ್ಯ ನಗರಸಭೆಯ ಈ ಕಾರ್ಯಕ್ಕೆ ದರ್ಶನ್ ಅಭಿಮಾನಿಗಳು ಸಿಡಿಮಿಡಿಗೊಂಡಿದ್ದಾರೆ.



# ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧರಾಗುವಂತೆ ಕರೆ ನೀಡಿದ ಡಿಕೆಶಿ



• ಉದಯವಾಹಿನಿ ಬೆಂಗಳೂರು

ಯಾವುದೇ ಕ್ಷಣದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಬಹುದು. ಹೀಗಾಗಿ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಸಜ್ಜಾಗಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಕರೆ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ವಿಚಾರವಾಗಿ ನ್ಯಾಯಾಲಯದಿಂದ ಸದ್ಯದಲ್ಲೇ ಸೂಚನೆ ಬರುವ ಸಾಧ್ಯತೆ ಇದೆ. ಇನ್ನು ಬೆಂಗಳೂರು ನಗರ ಪಾಲಿಕೆ ಚುನಾವಣೆಯನ್ನು ನಡೆಸಬೇಕಾಗಿದ್ದು, ಗ್ರೇಟರ್ ಬೆಂಗಳೂರು ವಿಚಾರವಾಗಿ ಅಭಿಪ್ರಾಯ ಸಂಗ್ರಹಕ್ಕೆ ಮುಂದಾಗಿದ್ದೇವೆ. ಯಾವುದೇ ಕ್ಷಣದಲ್ಲಿ ಈ ಚುನಾವಣೆಗಳು ಘೋಷಣೆಯಾಗಬಹುದು. ಇದಕ್ಕೆ ನಾವೆಲ್ಲರೂ ಸಿದ್ಧತೆ ಮಾಡಿಕೊಳ್ಳಬೇಕು ಎಂದರು. ಈ ಚುನಾವಣೆಗಳ ಸಿದ್ಧತೆಗಾಗಿ ಕಾರ್ಯಾಧ್ಯಕ್ಷರ ನೇತೃತ್ವದಲ್ಲಿ ಉಪಾಧ್ಯಕ್ಷರುಗಳನ್ನು ಸೇರಿಸಿಕೊಂಡು ವಿಭಾಗವಾರು ಸಮಿತಿ ರಚಿಸಲಿದ್ದೇವೆ. ಈ ಸಮಿತಿ ಮಾರ್ಚ್ ಒಳಗಾಗಿ ರಾಜ್ಯ ಪ್ರವಾಸ ಮಾಡಿ ಎಲ್ಲಾ ಕಡೆ ಸಮನ್ವಯತೆ ಸಾಧಿಸಿ ತಯಾರಿ ಮಾಡಿಕೊಳ್ಳಬೇಕು. ಎಲ್ಲೆಲ್ಲಿ ನಾಯಕರ ಮಧ್ಯೆ ಹೊಂದಾಣಿಕೆ ಸಾಧಿಸಿ, ಶೇ.50ರಷ್ಟು ಮಹಿಳಾ ಅಭ್ಯರ್ಥಿಗಳನ್ನು ತಯಾರು ಮಾಡುವ ಬಗ್ಗೆ ವರದಿ ಸಲ್ಲಿಸಬೇಕು ಎಂದು ತಿಳಿಸಿದರು.

# ಗ್ರಾಮ ಆಡಳಿತಾಧಿಕಾರಿ, ಸಹಾಯಕರಿಗೆ ಸಚಿವ ಗುಡ್ ನ್ಯೂಸ್

## ಸರ್ಕಾರಿ ಯೋಜನೆಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸುವಲ್ಲಿ, ಫೌತಿ ಖಾತೆ ನೀಡಲು ಆಧಾರ್ ಸೀಡಿಂಗ್ ಪಾತ್ರ, ಮಹತ್ವ

• ಉದಯವಾಹಿನಿ ಬೆಂಗಳೂರು

ರಾಜ್ಯದ ಗ್ರಾಮ ಆಡಳಿತಾಧಿಕಾರಿ, ಗ್ರಾಮ ಸಹಾಯಕರಿಗೆ ಸಚಿವ ಕೃಷ್ಣ ಬೈರೇಗೌಡ ಅವರು ಗುಡ್ ನ್ಯೂಸ್ ಒಂದನ್ನು ನೀಡಿದ್ದಾರೆ. ಅದೇ ಆಧಾರ್ ಜೋಡಣೆಯಲ್ಲಿ ಶ್ರಮಿಸಿದ ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಗ್ರಾಮ ಸಹಾಯಕರಿಗೆ ಸಂಭಾವನೆ ನೀಡುವುದಾಗಿ ಘೋಷಿಸಿದ್ದಾರೆ. ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವಂತ ಅವರು, ಪಹಣಿಗಳ ಜೊತೆ ಆಧಾರ್ ಜೋಡಣೆ (ಆಧಾರ್ ಸೀಡಿಂಗ್) ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿಯ ಯೋಜನೆ. ಅಕ್ರಮ ನೋಂದಣಿಗಳ ತಡೆ, ರೈತರಿಗೆ ಸೂಕ್ತ ಸಮಯದಲ್ಲಿ ಅಗತ್ಯ ನೆರವು ನೀಡಲು, ಸರ್ಕಾರಿ ಯೋಜನೆಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸುವಲ್ಲಿ ಹಾಗೂ ಫೌತಿ ಖಾತೆ ನೀಡಲು ಆಧಾರ್ ಸೀಡಿಂಗ್ ಪಾತ್ರ ಮಹತ್ವವಾದದ್ದು. ಇದೇ ಕಾರಣಕ್ಕೆ ಕಂದಾಯ ಇಲಾಖೆಯ ಜವಾಬ್ದಾರಿ ನನ್ನ ಹೆಗಲಿಗೆ ಬಿದ್ದ ತಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಆಧಾರ್ ಸೀಡಿಂಗ್ ಗುರಿ ನೀಡಲಾಗಿತ್ತು. ಆದರೆ, ಫೀಲ್ಡಿಗಿಳಿದು ಈ ಕೆಲಸವನ್ನು ಸಾಧ್ಯವಾಗಿಸಿದ್ದು ಮಾತ್ರ ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಗ್ರಾಮ ಸಹಾಯಕರು ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ 28/01/2025 ರಂದು DILRMP (Digital India Land Records Modernization Programme) State Level Review & Monitoring Committee ಸಭೆ ನಡೆಸಿ, ಪಹಣಿಗಳಿಗೆ ಆಧಾರ್ ಜೋಡಣೆ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸಿರುವ ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಗ್ರಾಮ ಸಹಾಯಕರಿಗೆ ಪ್ರತಿ ಒಂದು ಆಧಾರ್ ಜೋಡಣೆಗೆ, ತಲಾ ಒಂದು ರೂಪಾಯಿಯಂತೆ (Rs. 1/- ಸಂಭಾವನೆಯನ್ನು ನೀಡಬೇಕು ಎಂಬ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ. ಭೂ ಸುರಕ್ಷಾ ಯೋಜನೆಯ ಅಡಿಯಲ್ಲಿ ಈಗಾಗಲೇ ಮೂಲಕ ಬಿಡುಗಡೆಗೊಳಿಸಲಾದ ಅನುದಾನದಲ್ಲಿ ಜಿಲ್ಲಾಧಿಕಾರಿಗಳ ಖಾತೆಯಿಂದ(Child Account) 4,45,67,634 ಜೋಡಣೆಯಲ್ಲಿ ಮಹತ್ವದ ಪಾತ್ರ ವಹಿಸಿದ ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಗ್ರಾಮ ಸಹಾಯಕರ ನೀಡಲು ನಿರ್ಧರಿಸಲಾಗಿದೆ. ಅಲ್ಲದೆ, ಈ ಸಂಭಾವನೆಯ ಪಾವತಿ ಕುರಿತು ಕೆಲ ಮಾರ್ಗಸೂಚಿಗಳನ್ನು ಅಳವಡಿಸಿದ್ದು, ಅದರಂತೆ ಕ್ರಮವಹಿಸಲು ಸೂಚಿಸಲಾಗಿದೆ. ಆಧಾರ್ ಜೋಡಣೆ ಕಾರ್ಯವನ್ನು ನಿರ್ವಹಿಸಿರುವ ಗ್ರಾಮ ಆಡಳಿತ ಅಧಿಕಾರಿ ಹಾಗೂ ಗ್ರಾಮ ಸಹಾಯಕರ ವಿವರವನ್ನು ತಹಶೀಲ್ದಾರರಿಂದ ಪಡೆದು, ಸದರಿ ಮಾಹಿತಿಯನ್ನು ಕಟ್ಟುನಿಟ್ಟಾಗಿ ಪರಿಶೀಲಿಸಿ, ಕಾರ್ಯನಿರ್ವಹಿಸಿದ ಅವಧಿಗೆ ತಕ್ಕಂತೆ ಮಾತ್ರ ಸಂಭಾವನೆಯನ್ನು ಪಾವತಿ ಮಾಡಲು ಕ್ರಮವಹಿಸತಕ್ಕದ್ದು.



ಉದಯವಾಹಿನಿ ಚಿತ್ರ

ಪತ್ರಿಕಾ ಹೇಳಿಕೆ ಬಿಡುಗಡೆ

ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಗ್ರಾಮ ಸಹಾಯಕರ ಶ್ರಮ ಮತ್ತು ಪ್ರಾಮಾಣಿಕ ಕೆಲಸದ ಪರಿಣಾಮ ದಿನಾಂಕ:-31/01/2025 ರವರೆಗೆ ಒಟ್ಟು 2,22,83,817 ಪಹಣಿಗಳಿಗೆ ಆಧಾರ್ ಜೋಡಣೆ ಮಾಡಲಾಗಿದೆ. ಇದು ನಿಜಕ್ಕೂ ಶ್ಲಾಘನೀಯ ಕೆಲಸವಾಗಿರುತ್ತದೆ. ಈ ಕೆಲಸವನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಹಲವು ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಗ್ರಾಮ ಸಹಾಯಕರು ತಮ್ಮ ಜೇಬಿನಿಂದ ಹಣ ಖರ್ಚು ಮಾಡಿದ್ದಾರೆ. ಹೀಗಾಗಿ ಇಂತಹ ಪ್ರಾಮಾಣಿಕ ಅಧಿಕಾರಿಗಳ ಬಗ್ಗೆ ಕಾಳಜಿ ವಹಿಸಬೇಕಾದದ್ದು ಮತ್ತು ಅವರ ಕೆಲಸವನ್ನು ಗುರಿತಿಸಿ ಪ್ರಶಂಶಿಸಬೇಕಾದ ಬಾದ್ಯತೆ-ಜವಾಬ್ದಾರಿ ಸರ್ಕಾರದ ಮೇಲಿದೆ ಎಂದು ತಿಳಿಸಿದ್ದಾರೆ.

ಗ್ರಾಮ ಆಡಳಿತ ಅಧಿಕಾರಿ ಹಾಗೂ ಗ್ರಾಮ ಸಹಾಯಕರ ಬ್ಯಾಂಕ್ ಅಕೌಂಟ್ ವಿವರಗಳನ್ನು ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದು, ಪತ್ರದೊಂದಿಗೆ ಲಗತ್ತಿಸಲಾದ ಬಳಕೆದಾರರ ಕೈಪಿಡಿಯನ್ವಯ (User Manual) ಅನುದಾನ ಬಿಡುಗಡೆ ಮತ್ತು ಪಾವತಿ ವಿಷಯದ ಕುರಿತು ದಿನಾಂಕ: 21.02.2025 ರೊಳಗಾಗಿ ತಪ್ಪದೇ ಕ್ರಮವಹಿಸತಕ್ಕದ್ದು ಅಂತ ಹೇಳಿದ್ದಾರೆ.

ತಲಾ ರೂಪಾಯಿ ಒಂದರಂತೆ ಅನುದಾನವನ್ನು PFMS ತಂತ್ರಾಂಶದ Aadhar linkage with RoR component ಬಿಡುಗಡೆ ಮಾಡಲು ಮತ್ತು ಸದರಿ ಅನುದಾನದ ಬಿಡುಗಡೆ ಹಾಗೂ ಪಾವತಿಯ ವಿಷಯದಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದೆ.

# ಆರ್ಥಿಕ ವೃದ್ಧಿಯಲ್ಲಿ ಶಿಕ್ಷಣದ ಕೊಡುಗೆ ಅಪಾರ

## • 'ಶಿಕ್ಷಣ ಶ್ರೀನಿಧಿ' ಅಭಿನಂದನಾ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪರಮೇಶ್ವರ ಹೇಳಿಕೆ

• ಉದಯವಾಹಿನಿ ತುಮಕೂರು

ಪ್ರಸ್ತುತ ನಮ್ಮ ದೇಶ ಆರ್ಥಿಕವಾಗಿ ಶೀಘ್ರಗತಿಯಲ್ಲಿ ಅಭಿವೃದ್ಧಿಯಾಗುತ್ತಿದೆ. ಇದಕ್ಕೆ ಶಿಕ್ಷಣ ಕ್ಷೇತ್ರದ ಕೊಡುಗೆ ಅಪಾರ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಹಮ್ಮಿಕೊಂಡಿದ್ದ ವಿದ್ಯಾವಾಹಿನಿ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಜಯಣ್ಣ ಅವರ ಅಭಿನಂದನಾ ಸಮಾರಂಭ, 'ಶಿಕ್ಷಣ ಶ್ರೀನಿಧಿ' ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು. ರಾಷ್ಟ್ರದಲ್ಲಿ ಎಲ್ಲರಿಗೂ ವಿದ್ಯೆ ಸಿಗುವಂತೆ ಮಾಡಿದ್ದರಿಂದ ಸುಧಾರಣೆ ಸಾಧ್ಯವಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಕೆ.ಬಿ.ಜಯಣ್ಣ ಕೊಡುಗೆ ಅಪಾರ.

ತುಮಕೂರು ಶೈಕ್ಷಣಿಕ ನಗರವಾಗುವಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ ಮಹನೀಯರ ಕನಸಿದೆ ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಜಲ ಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, 'ಜಿಲ್ಲೆಗೆ ಹೆಚ್ಚಿನ ಸೌಲಭ್ಯ ಕಲ್ಪಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇನೆ.



ಉದಯವಾಹಿನಿ ಚಿತ್ರ

ಕೆ.ಬಿ.ಜಯಣ್ಣ, 'ಸಂಸ್ಥೆಯ ಮೇಲೆ ವಿಶ್ವಾಸದಿಂದ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುವ ಪೋಷಕರು ಸಂಸ್ಥೆಯನ್ನು ಬೆಳೆಸಿದವರು. ಈ ಅಭಿನಂದನೆಗಾಗಿ ಎಲ್ಲರಿಗೂ ಆಭಾರಿಯಾಗಿದ್ದೇನೆ ಎಂದು ತಿಳಿಸಿದರು. ಸರ್ವೋದಯ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಜಿ.ಸೀತಾರಾಂ, ಹರಿಕಥಾ ವಿದ್ವಾನ್ ಲಕ್ಷ್ಮಣ್.ಸ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎಸ್.ಸಿದ್ದಲಿಂಗಪ್ಪ, ಪತ್ರಕರ್ತರಾದ ಎಸ್.ನಾಗಣ್ಣ,.ಚಿ.ನಿ.ಪುರುಷೋತ್ತಮ್ ಅವರನ್ನು ಸನ್ಮಾನಿಸಲಾಯಿತು.

**ಕೆ.ಬಿ.ಜಯಣ್ಣ ಕೊಡುಗೆ ಅಪಾರ**


ಸಹಕಾರ ಸಚಿವ ಕೆ.ಎನ್.ರಾಜಣ್ಣ, ಶಾಸಕರಾದ ಬಿ.ಸುರೇಶ್‌ಗೌಡ, ಜಿ.ಬಿ.ಜೋತಿಗಣೇಶ್, ಮಾಜಿ ಸಂಸದ ಜಿ.ಎಸ್.ಬಸವರಾಜು, ವಿಧಾನ ಪರಿಷತ್ ಸದಸ್ಯ ಚಿದಾನಂದ ಎಂ.ಗೌಡ, ಮಾಜಿ ಸದಸ್ಯರಾದ ಎಚ್.ಎಸ್.ಶಿವಶಂಕರ್, ಡಾ.ಎಂ. ಆರ್.ಹುಲಿನಾಯ್ಕರ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಸೋಮಶೇಖರ್, ವಿದ್ಯಾವಾಹಿನಿ ಸಮೂಹ ಸಂಸ್ಥೆಯ ಕಾರ್ಯದರ್ಶಿ ಎನ್.ಬಿ.ಪ್ರದೀಪ್ ಕುಮಾರ್ ಇತರರು ಹಾಜರಿದ್ದರು.

**ಪರಮೇಶ್ವರ್ ಸ್ಪಷ್ಟನೆ**

ದಲಿತ ಸಮಾವೇಶದ ಬಗ್ಗೆ ತಮಗೆ ತಿಳಿದಿಲ್ಲವೆಂದೂ, ಆದರೆ ಈ ಹಿಂದೆ ತಾವು ದಲಿತ ಸಮಾವೇಶ ಮಾಡಲು ಹೊರಟಿದ್ದು ಹೈಕಮಾಂಡ್ ಸೂಚನೆ ಮೇರೆಗೆ ಮುಂದೂಡಲಾಗಿದೆ ಎಂದೂ ಹೇಳಿದರು. ಚುನಾವಣೆ ಪೂರ್ವದಲ್ಲಿ ಚಿತ್ರದುರ್ಗದಲ್ಲಿ ಎಸ್ಸಿ, ಎಸ್ಟಿ ಸಮಾವೇಶ ಮಾಡಲಾಗಿತ್ತು. ಅದರ ಕೆಲ ನಿರ್ಣಯಗಳು ಅನುಷ್ಠಾನಗೊಂಡಿದ್ದು, ಇನ್ನೂ ಕೆಲವು ಆಗಿಲ್ಲ. ಆ ಬಗ್ಗೆ ಚರ್ಚಿಸಲು ಸಮಾವೇಶಕ್ಕೆ ಸಿದ್ಧರಾಗಿದ್ದೆವು, ಆದರೆ ರಾಜಕೀಯ ಕಾರಣಕ್ಕೆ ಸದ್ಯಕ್ಕೆ ಬೇಡ ಎಂದು ಹೈಕಮಾಂಡ್ ಸೂಚಿಸಿತ್ತು ಎಂದು ಪರಮೇಶ್ವರ್ ಹೇಳಿದರು. ಸಿಎಂ ಬದಲಾವಣೆ ಕುರಿತ ಪ್ರಶ್ನೆಗೆ ಉತ್ತರಿಸಲು ಅವರು ನಿರಾಕರಿಸಿದರು.

ರಾಷ್ಟ್ರ ಮಟ್ಟದ ಅಭಿವೃದ್ಧಿ ಯೋಜನೆಗಳ ಜತೆಗೆ ಜಿಲ್ಲೆಗೆ ಒತ್ತು ನೀಡಲಾಗುತ್ತಿದೆ. ಕೆ.ಬಿ.ಜಯಣ್ಣ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉನ್ನತ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಸಾಕಷ್ಟು ಶ್ರಮ ವಹಿಸಿದ್ದಾರೆ. ಅವರ ನಡೆ-ನುಡಿ ಎಲ್ಲರಿಗೂ ಆದರ್ಶವಾಗಲಿ' ಎಂದು ಆಶಿಸಿದರು. ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, 'ಜಯಣ್ಣ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲದೇ ಸಮಾಜ ಸೇವಕರಾಗಿ ಗುರುತಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ವಿದ್ಯಾವಾಹಿನಿ ಸಂಸ್ಥೆ ಎಲ್ಲಾ ರೀತಿಯಿಂದ ಅತ್ಯುತ್ತಮ ಅವಕಾಶ ಕಲ್ಪಿಸುತ್ತಿದೆ. ಈ ಕಾರ್ಯ ಸಮರ್ಪಕವಾಗಿ ಮುಂದುವರಿಸಿಕೊಂಡು ಹೋಗುವಲ್ಲಿ ಪ್ರದೀಪ್ ಕುಮಾರ್ ಶ್ರಮಿಸುತ್ತಿದ್ದಾರೆ -ಜಿ.ಪರಮೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ

## ಮಿನಿ ನ್ಯೂಸ್


ಉದಯವಾಹಿನಿ ಚಿತ್ರ

ಬ್ರಹ್ಮತೇಜ ಪ್ರಶಸ್ತಿ ಪಡೆದ ಮೈಸೂರಿನ ಶ್ರೀ ಕೃಷ್ಣಕುಮಾರ್ ಹಾಗೂ ಅವರ ಮಾತೃಶ್ರೀರವರಿಗೆ ಈ ದಿನ ಮಂಡ್ಯ ನಗರದಲ್ಲಿ ಬ್ರಾಹ್ಮಣ ಯುವ ಸೇವಾ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು ಟ್ರಸ್ಟ್‌ನ ಅಧ್ಯಕ್ಷರಾದ ರಾಧಾಕೃಷ್ಣನ್, ಕಾರ್ಯದರ್ಶಿಗಳಾದ ಕೆ ಆರ್ ಬಾಲಾಜಿ, ಉಪಾಧ್ಯಕ್ಷರಾದ ವಿಶ್ವನಾಥ್. ಬಿ ಎನ್, ನಿರ್ದೇಶಕರುಗಳಾದ ಎನ್. ಗೋಪಿನಾಥ್, ರವಿಶಂಕರ್, ಲಕ್ಷ್ಮೀನಾರಾಯಣ್ , ಬಾಲಾಜಿ ಇದ್ದರು.

## ವೃದ್ಧೆಯನ್ನು ವಂಚಿಸುತ್ತಿದ್ದವನ ಬಂಧನ

• ಉದಯವಾಹಿನಿ ಕುಣಿಗಲ್

ವೃದ್ಧೆಯರನ್ನು ನಂಬಿಸಿ ಚಿನ್ನಾಭರಣ ದೋಚುತ್ತಿದ್ದ ಆರೋಪಿಯನ್ನು ಕುಣಿಗಲ್ ಪೊಲೀಸರು ಬಂಧಿಸಿ, 70 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದಿದ್ದಾರೆ. ಬಂಧಿತನನ್ನು ಹುಣಸೂರಿನ ಸಂಪತ್ತು ಎಂದು ಗುರುತಿಸಲಾಗಿದೆ. ಬಸ್‌ಗಾಗಿ ಕಾಯುತ್ತಿದ್ದ ವೃದ್ಧೆಯೊಂದಿಗೆ ವಿಶ್ವಾಸ ಬೆಳೆಸಿ ಸರ್ಕಾರದ ಯೋಜನೆಗಳ ಹಣವನ್ನು ಖಾತೆಗೆ ವರ್ಗಾವಣೆ ಮಾಡುವುದಾಗಿ ನಂಬಿಸಿ ಬ್ಯಾಂಕ್ ಬಳಿ ಕರೆದುಕೊಂಡು ಹೋಗಿ ಮೈ ಮೇಲೆ ಚಿನ್ನಾಭರಣಗಳಿದ್ದರೆ ಹಣ ವರ್ಗಾವಣೆ ಮಾಡುವುದಿಲ್ಲ ಎಂದು ತಿಳಿಸಿ ಕಿವಿಯಲ್ಲಿ ಧರಿಸಿದ ಓಲೆಗಳನ್ನು ಪಡೆದು ಬ್ಯಾಂಕ್ ಒಳಗೆ ಹೋಗುವ ನೆಪದಲ್ಲಿ ಪರಾರಿಯಾಗುತ್ತಿದ್ದನು.

ಆರೋಪಿಯ ವಿಚಾರಣೆಯ ಸಮಯದಲ್ಲಿ ಕುಣಿಗಲ್ ಬಸ್ ನಿಲ್ದಾಣದಲ್ಲಿ ಮೂವರು, ಜಕ್ಕನಹಳ್ಳಿ, ನಂಜನಗೂಡು ಬಸ್ ನಿಲ್ದಾಣಗಳಲ್ಲಿ ಚಿನ್ನಾಭರಣ ದೋಚಿದ ಒಟ್ಟು ಆರು ಪ್ರಕರಣ ಬೆಳಕಿಗೆ ಬಂದಿವೆ. ಆರೋಪಿಯನ್ನು ಡಿವೈಎಸ್ಪಿ ಓಂಪ್ರಕಾಶ್ ನೇತೃತ್ವದಲ್ಲಿ ಸಿಪಿಐ ನವೀನ್ ಗೌಡ, ಪಿಎಸ್‌ಐ ಕೃಷ್ಣಕುಮಾರ್, ಯತೀಶ್, ನಟರಾಜು, ಮಂಜುನಾಥ್, ಯೋಗೀಶ್, ಹನುಮಂತ ಬಂಧಿಸಿದ್ದಾರೆ.

## ಸಾವಿರಾರು ಕೋಟಿ ರೂ. ಖರ್ಚಾದರೂ ಅವಳಿ ಜಿಲ್ಲೆಗೆ ಹನಿ ನೀರಿಲ್ಲ

• ಉದಯವಾಹಿನಿ ಕೋಲಾರ

ಅರೆ ಸಂಸ್ಕರಿತ ಕೆ.ಸಿ.ವ್ಯಾಲಿ ಹಾಗೂ ಎಚ್.ಎನ್.ವ್ಯಾಲಿ ನೀರಿನಿಂದ ಮುಂದೆ ಅಪಾಯ ಕಟ್ಟಿಟ್ಟ ಬುತ್ತಿಯಾಗಿದ್ದು, ಸರ್ಕಾರ ಮೂರನೇ ಹಂತದ ಶುದ್ಧೀಕರಣವನ್ನು ಮರೆತಂತಿದೆ. ಈ ವಿಚಾರ ಹಾಗೂ ಶಾಶ್ವತ ನೀರಾವರಿ ಯೋಜನೆಗಾಗಿ ಹೋರಾಟ ಮುಂದುವರಿಯಲಿದೆ ಎಂದು ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್.ಆಂಜನೇಯರೆಡ್ಡಿ ತಿಳಿಸಿದರು. ಅವಳಿ ವ್ಯಾಲಿಯಲ್ಲಿ ಅಪಾಯ ವಿಶೇಷ ವರದಿಗೆ ರಾಜ್ಯ ಸರ್ಕಾರದ ಕರ್ನಾಟಕ ಮಾಧ್ಯಮ ಅಕಾಡೆಮಿ ದತ್ತಿ ಪ್ರಶಸ್ತಿ ಬಂದ ಸಂಬಂಧ ಪ್ರಜಾವಾಣಿ ಜಿಲ್ಲಾ ವರದಿಗಾರ ಕೆ.ಓಂಕಾರಮೂರ್ತಿ ಅವರಿಗೆ ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಶಾಶ್ವತ ನೀರಾವರಿ ಹೋರಾಟ ಸಮಿತಿ ಮತ್ತು ಯುವಶಕ್ತಿ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎತ್ತಿನಹೊಳೆ ಯೋಜನೆಗೆ ರಾಜ್ಯ ಸರ್ಕಾರ ಈಗಾಗಲೇ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿದ್ದು, ಅದೊಂದು ಬಿಳಿ ಆನೆ ಆಗಿ ಪರಿಣಮಿಸಿದೆ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೆ ಈವರೆಗೆ ಹನಿ ನೀರು ಕೂಡ ಬರಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅವಳಿ ವ್ಯಾಲಿಗಳ ನೀರಿನಿಂದ ಎರಡೂ ಜಿಲ್ಲೆಗಳಲ್ಲಿ ಉಂಟಾಗಿರುವ ಸಮಸ್ಯೆಗಳ ಕುರಿತ ವರದಿಗೆ ರಾಜ್ಯ ಸರ್ಕಾರದ ಪ್ರಶಸ್ತಿ ಬಂದಿದೆ. ಇದು ನಮ್ಮ ಹೋರಾಟಕ್ಕೆ ಲಭಿಸಿದ ಗೌರವವೂ ಆಗಿದೆ. ಈಗಾಗಲೇ ಉಭಯ ಜಿಲ್ಲೆಗಳ ಅಂತರ್ಜಲ ವಿಷಯುಕ್ತವಾಗಿದೆ. ಅದನ್ನೇ ನಾವು ಹೇಳುತ್ತಿಲ್ಲ ಬದಲಾಗಿ ವಿಜ್ಞಾನಿಗಳು ನೀಡಿರುವ ವಿವಿಧ ವರದಿಗಳು ದೃಢಪಡಿಸಿವೆ. ಯಥೇಚ್ಛವಾಗಿ ಯುರೇನಿಯಂ ಸೇರಿದಂತೆ ವಿವಿಧ ಲೋಹಾಂಶಗಳು ಅಡಗಿವೆ. ವಿಧಿ ಇಲ್ಲದೆ ನಾವೆಲ್ಲಾ ಇನ್ನೂ ಅದೇ ನೀರು ಕುಡಿಯುತ್ತಿದ್ದೇವೆ ಎಂದರು.

ಕೆ.ಸಿ.ವ್ಯಾಲಿ ನೀರನ್ನು ಸದ್ಯ ಕೇವಲ ಎರಡು ಹಂತಗಳಲ್ಲಿ ಸಂಸ್ಕರಣೆ ಮಾಡಿ ಹರಿಸಲಾಗುತ್ತಿದೆ. ಮೂರನೇ ಹಂತದ ಶುದ್ಧೀಕರಣ ಮಾಡಿ ಎಂದು ಹೋರಾಟ ಮಾಡಿದರೆ ಬೇರೆ ವಿಚಾರಗಳನ್ನು ತಿಳಿಸುತ್ತಾ ಜನರ ದಾರಿ ತಪ್ಪಿಸಲಾಗುತ್ತಿದೆ. ಹೀಗೆಯೇ ಮುಂದುವರಿದರೆ ಮುಂದೆ ಹಲವಾರು ಕಾಯಿಲೆ ಬರುತ್ತವೆ, ಹೊಸ ಆಸ್ಪತ್ರೆಗಳನ್ನು ತೆರೆಯಬೇಕಾಗುತ್ತದೆ ಎಂದು ಎಚ್ಚರಿಸಿದರು.

## ಮುಟ್ಟಾದ ಹೆಣ್ಣು ಊರೇ ಬಿಡಬೇಕು
# ಛೇ ಇನ್ನೂ ನಿಂತಿಲ್ಲ ಅನಿಷ್ಟ ಪದ್ಧತಿ

• ಉದಯವಾಹಿನಿ ಮಂಡ್ಯ

ಹೆಣ್ಣಾಗಿ ಹುಟ್ಟಿದ್ದೇ ತಪ್ಪಾ.. ಎಂಬುವಂತೆ, ಮುಟ್ಟಾದರೆ ಸಾಕು ಅಂಥವರು ಊರೇ ಬಿಡಬೇಕು ಎಂಬ ಫರ್ಮಾನು ಹೊರಡಿಸಿ ಈ ಗ್ರಾಮದಲ್ಲಿ ಇನ್ನೂ ಅನಿಷ್ಟ ಪದ್ಧತಿಯನ್ನು ಆಚರಿಸಲಾಗುತ್ತಿದೆ ಎಂಬ ಆರೋಪವಿದೆ.

ಜಿಲ್ಲೆಯ ಮಳವಳ್ಳಿ ತಾಲೂಕಿನ ಗುಂಡಾಪುರದ ಬೆಟ್ಟದರಸಮ್ಮ ಜಾತ್ರೆಯ ಸಂದರ್ಭದಲ್ಲಿ ಇಂತಹ ಅನಿಷ್ಟ ಪದ್ಧತಿಯನ್ನು ಆಚರಿಸಲಾಗುತ್ತಿದೆಯಂತೆ. ಈ ಬಗ್ಗೆ ಅನೇಕ ಮಹಿಳಾ ಪರ ಹೋರಾಟಗಾರರು ಕಳವಳ ವ್ಯಕ್ತಪಡಿಸಿದ್ದಾರೆ. ಊರ ಜಾತ್ರೆಯ ಸಂದರ್ಭದಲ್ಲಿ ಯಾವುದೇ ಹೆಣ್ಣಿಗೆ ಮುಟ್ಟಾದರೆ ಗ್ರಾಮವೇ ತೊರೆಯಬೇಕು ಎಂದು ಗ್ರಾಮದ ಬೆಟ್ಟದರಸಮ್ಮ ದೇವಸ್ಥಾನದಿಂದ ರಾತ್ರಿ ಡಂಗುರ ಸಾರಲಾಗುತ್ತದೆ. ಕಳೆದ 75 ವರ್ಷಗಳಿಂದ ಈ ಅನಿಷ್ಟ ಆಚರಣೆಯು ಗ್ರಾಮದಲ್ಲಿ ಬೇರು ಬಿಟ್ಟಿದೆ. ಮುಟ್ಟಾದ ಮಹಿಳೆಯರು ಊರನ್ನೇ ತೊರೆಯಬೇಕು. ಊರಾಚೆಗೆ ಹೊಲದಲ್ಲಿ ಒಬ್ಬಂಟಿಯಾಗಿ ಕಾಲ ಕಳೆಯಬೇಕಂತೆ. ಕೆಲವರು ಊರಾಚೆಗೆ ಹೋಗುವ ಅನಿವಾರ್ಯತೆ ಬರಬಾರದು ಎಂದು ಮುಟ್ಟು ಮುಂದೂಡಲು ಮಾತ್ರೆ ತೆಗೆದುಕೊಳ್ಳುತ್ತಾರೆ. ಅದರಿಂದ ಗರ್ಭಕೋಶ ಸೇರಿದಂತೆ ಆರೋಗ್ಯದ ಮೇಲೂ ಇತರೆ ದುಷ್ಪರಿಣಾಮ ಬೀರಿದೆ ಎಂದು ಕೆಲ ಮಹಿಳೆಯರು ನೋವು ತೋಡಿಕೊಂಡಿದ್ದಾರೆ. ಮಾರ್ಚ್ ತಿಂಗಳಲ್ಲಿ ನಡೆಯುವ ಈ ಜಾತ್ರೆಯು ಸಮೀಪಿಸುತ್ತಿದ್ದಂತೆ ಈ ಅನಿಷ್ಟ ಆಚರಣೆ ಪ್ರತಿವರ್ಷ ಮುನ್ನೆಲೆಗೆ ಬರುತ್ತಿದೆ.


ಉದಯವಾಹಿನಿ ಚಿತ್ರ

ಮುಟ್ಟಾದಾಗ ಊರಾಚೆಗೆ ರಾಗಿಕಣದಲ್ಲಿ ಗುಡಿಸಲು ಮಾಡುತ್ತೇವೆ. ಮಗುವಿಗೆ.. ತಾಯಿಗೆ ಬೇರೆ ಬೇರೆ ಗುಡಿಸಲಲ್ಲಿ ಇರಿಸುತ್ತೇವೆ. ಒಂಟಿಯಾಗಿಯೇ ಇರಬೇಕು. ಇಂತಹ ಹಲವು ಘಟನೆ ನೋಡಿರುವುದಾಗಿ ವೃದ್ಧೆಯೋರ್ವರು ತಮ್ಮ ಅನುಭವಗಗಳನ್ನು ಹೇಳಿಕೊಂಡಿದ್ದಾರೆ.

ಇನ್ನು ಈ ಹಿಂದಿನಿಂದಲೂ ಈ ಆಚರಣೆ ಗ್ರಾಮದಲ್ಲಿದೆ. ನಾವು ಯಾರಿಗೂ ಬಲವಂತ ಮಾಡಲ್ಲ. ಅವರವರ ಭಕ್ತಿಗೆ ಬಿಟ್ಟದ್ದು ಎಂದು ದೇಗುಲದ ಅರ್ಚಕರೋರ್ವರು ಹೇಳಿದ್ದಾರೆ. ಒಟ್ಟಾರೆ ಇಂತಹ ಮೂಢನಂಬಿಕೆ ಆಚರಣೆಯಿಂದ ಇಡೀ ನಾಗರೀಕ ಸಮಾಜವೇ ತಲೆ ತಗ್ಗಿಸುವಂತಾಗಿದೆ.

## ಗ್ರಾಮಾಡಳಿತ ಅಧಿಕಾರಿಗಳ ಬೇಡಿಕೆ ಈಡೇರಿಕೆಗೆ ಆಗ್ರಹ

• ಉದಯವಾಹಿನಿ ಮುಳಬಾಗಲು

ಗ್ರಾಮಾಡಳಿತ ಅಧಿಕಾರಿಗಳ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಈಡೇರಿಸಿ ಸ್ಥಗಿತಗೊಂಡಿರುವ ಗ್ರಾಮೀಣ ಸೇವೆಗಳಿಗೆ ಮುಕ್ತಿ ನೀಡಬೇಕೆಂದು ರೈತಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಕಂದಾಯ ಸಚಿವರನ್ನು ಆಗ್ರಹಿಸಿದರು.

ತಾಲ್ಲೂಕು ಕಚೇರಿ ಮುಂದೆ ವಿವಿಧ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಗ್ರಾಮಾಡಳಿತ ಅಧಿಕಾರಿಗಳು ನಡೆಸುತ್ತಿರುವ ಮುಷ್ಕರಕ್ಕೆ ರೈತಸಂಘದಿಂದ ಬೆಂಬಲ ನೀಡಿ ಮಾತನಾಡಿದ ಅವರು, ಗ್ರಾಮಾಡಳಿತ ಅಧಿಕಾರಿಗಳಿಗೆ ಮೂಲಭೂತ ಸೌಕರ್ಯಗಳಾದ ಸುಸಜ್ಜಿತವಾದ ಕಚೇರಿ, ಪಿಠೋಪಕರಣಗಳು, ಗುಣಮಟ್ಟದ ಮೊಬೈಲ್ ಫೋನ್, ಸಿಮ್, ಡೇಟಾ, ಲ್ಯಾಪ್ ಟಾಪ್, ಪ್ರಿಂಟರ್ ಮತ್ತಿತರ ಎಲ್ಲಾ ಸೌಲಭ್ಯಗಳನ್ನು ನೀಡದೆ ಕಂದಾಯ ಸಚಿವರು ವಾರಕ್ಕೊಂದು ಆದೇಶವನ್ನು ಮಾಡುವ ಮುಖಾಂತರ ಗ್ರಾಮಾಡಳಿತ ಅಧಿಕಾರಿಗಳ ಮೇಲೆ ಒತ್ತಡ ಹಾಕಿ ಮಾನಸಿಕವಾಗಿ, ದೈಹಿಕವಾಗಿ ಅಧಿಕಾರಿಗಳ ಮೇಲೆ ನಿರಂತರ ದಬ್ಬಾಳಿಕೆ ಒತ್ತಡ ನಿಲ್ಲಬೇಕೆಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

**ಸರ್ಕಾರದ ವಿರುದ್ಧ ಹೋರಾಟ**

21 ತಂತ್ರಾಂಶಗಳನ್ನು ಏಕಕಾಲದಲ್ಲಿ ನಿರ್ವಹಿಸುವ ಜೊತೆಗೆ ಆಧಾರ್ ಸೀಡ್ ಎಂಬ ಅವೈಜ್ಞಾನಿಕ ಕಂದಾಯ ಮಂತ್ರಿಗಳ ಆದೇಶ ಜಿಲ್ಲೆಯ ಯಾವುದೇ ಹಳ್ಳಿಯಲ್ಲಿದ್ದರೂ ಆ ರೈತರ ಆಧಾರ್ ಮತ್ತಿತರ ದಾಖಲೆಗಳನ್ನು ಪರಿಶೀಲಿಸಬಹುದು. ಆದರೆ, ಬೆಂಗಳೂರಿನ ವ್ಯಕ್ತಿಗಳು ಜಿಲ್ಲೆಯಲ್ಲಿ ಕೃಷಿ ಜಮೀನು ಖರೀದಿ ಮಾಡಿ ವಾಸ ಬೆಂಗಳೂರಿನಲ್ಲಿದ್ದರೆ ಆ ವ್ಯಕ್ತಿಗಳನ್ನು ಕಂದಾಯ ಅಧಿಕಾರಿಗಳು ಹುಡುಕಿಕೊಂಡು ಹೋಗಬೇಕಾದರೆ ಅವರಿಗೆ ಯಾವುದೇ ಸರ್ಕಾರದಿಂದ ವೇತನ ಭತ್ಯ ನೀಡುವುದಿಲ್ಲ. ಅದೂ ಸಹ ಅವೈಜ್ಞಾನಿಕವಾಗಿದೆ.

24 ಗಂಟೆಯಲ್ಲಿ ಗ್ರಾಮ ಆಡಳಿತಾಧಿಕಾರಿಗಳ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲವಾದರೆ ಗ್ರಾಮೀಣ ಪ್ರದೇಶದ ಎಲ್ಲಾ ರಸ್ತೆಗಳನ್ನು ಜಾನುವಾರುಗಳ ಸಮೇತ ಬಂದ್ ಮಾಡಿ ಸರ್ಕಾರದ ವಿರುದ್ಧ ಹೋರಾಟ ರೂಪಿಸಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆಯ ಜೊತೆಗೆ ಮನವಿ ಮಾಡಿದರು.

ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ್, ಬಂಗಾರಿ ಮಂಜು, ರಾಜ್ಯ ಪ್ರಧಾನ ಕಾರ್ಯದರ್ಶಿ ಪಾರುಖಪಾಷ, ಜುಬೇರ್ ಪಾಷ, ಶ್ರೀನಿವಾಸ್, ರಾಜೇಶ, ಬಾಸ್ಕರ್ ಮುಂತಾದವರಿದ್ದರು.

**ಸಿಬ್ಬಂದಿ ಕೊರತೆ**

ಸಿಬ್ಬಂದಿ ಕೊರತೆಯ ಮಧ್ಯೆಯೂ ನಿರಂತರವಾಗಿ ರೈತರಿಗೆ ಅನುಕೂಲಕರವಾದ ಪಿ ನಂಬರ್ ದುರಸ್ಥಿ, ಇ-ಖಾತಾ, ಬೆಳೆಹಾನಿ, ಮಳೆಹಾನಿ ಮತ್ತಿತರ ಸಮಸ್ಯೆಗಳು ಎದುರಾದಾಗ ತಮ್ಮ ಕುಟುಂಬಗಳನ್ನು ಬಿಟ್ಟು ನಿರಂತರವಾಗಿ ಒತ್ತಡ ಹೆಚ್ಚಾಗಿ ಆರೋಗ್ಯ ಹದಗೆಟ್ಟು ಪ್ರಾಣಹಾನಿಯು ಸಂಭವಿಸುತ್ತಿರುವ ಉದಾಹರಣೆಗಳಿದ್ದರೂ ಸರ್ಕಾರ ಮಾತ್ರ ಯಾವುದೇ ಸೌಲಭ್ಯಗಳನ್ನು ನೀಡದೆ ವಂಚನೆ ಮಾಡುತ್ತಿದ್ದಾರೆಂದು ಅಸಮಧಾನ ವ್ಯಕ್ತಪಡಿಸಿದರು.

## ಆಡಳಿತದಲ್ಲಿ ಕನ್ನಡ ಬಳಕೆ ಕಡ್ಡಾಯವಾಗಬೇಕು: ಪುರುಷೋತ್ತಮ

• ಉದಯವಾಹಿನಿ ಮೈಸೂರು

ಕನ್ನಡ ಭಾಷೆಯನ್ನು ಆಡಳಿತದಲ್ಲಿ ಕಡ್ಡಾಯವಾಗಿ ಬಳಕೆ ಮಾಡುವ ಮೂಲಕ ಕನ್ನಡವನ್ನು ಉಳಿಸಿ ಬೆಳೆಸಬೇಕಾದ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕನ್ನಡವನ್ನು ಆಡಳಿತದಲ್ಲಿ ಅನುಷ್ಠಾನಕ್ಕೆ ತರಲು ಸರ್ಕಾರಗಳು ಹಲವು ಆದೇಶ ಹೊರಡಿಸಿವೆ.

2000 ವರ್ಷಗಳ ಇತಿಹಾಸ ಇರುವ ಭಾಷೆ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ, 19519 ಮಾತೃ ಭಾಷೆಗಳು ಭಾರತದಲ್ಲಿವೆ. ಹಲವು ಭಾಷೆಗಳು ನಶಿಸಿ ಹೋಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು. ಕನ್ನಡದಲ್ಲಿ ಹೆಚ್ಚು ಕೃತಿಗಳನ್ನು ರಚನೆ ಮಾಡಿದವರು ಕುವೆಂಪು. ಮೈಸೂರು ಸಾಹಿತಿಗಳ ತವರೂರು. ಬೇರೆ ಭಾಷೆಗಳನ್ನು ಕಲಿಯಿರಿ ಆದರೆ, ಕನ್ನಡವನ್ನು ಹೆಚ್ಚು ಬಳಕೆ ಮಾಡಬೇಕು. ಕನ್ನಡ ಬಳಕೆಗೆ 3000 ಆದೇಶ ಮಾಡಲಾಗಿದೆ. ಕೇವಲ ಆದೇಶಗಳಿಂದ ಬಾಷೆ ಉಳಿಸಲು ಸಾಧ್ಯವಿಲ್ಲ. ಕನ್ನಡವನ್ನು ಬಳಕೆ ಮಾಡುವ ಮೂಲಕ ಉಳಿಸಬೇಕು ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ ಮಾತನಾಡಿ, ಸರ್ಕಾರದ ಇಲಾಖೆಗಳ ಅಂತರ್ಜಾಲ ಪುಟ ಕನ್ನಡದಲ್ಲಿ ಇರಬೇಕು. ಜಿಲ್ಲೆಯ ಅಂಗಡಿ ಮುಂಗಟ್ಟುಗಳ ಬೋರ್ಡುಗಳು ಶೇ.60ರಷ್ಟು ಕನ್ನಡದಲ್ಲಿ ಇರಬೇಕು. ಸರ್ಕಾರಿ ಇಲಾಖೆಗಳ ಕಡತಗಳಲ್ಲಿ ಕನ್ನಡ ಬಳಕೆ ಮಾಡಬೇಕು. ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ ಮಕ್ಕಳು ಅನುತ್ತೀರ್ಣ ಆಗುತ್ತಿರುವ ಬಗ್ಗೆ ವರದಿ ಇದ್ದು, ಕನ್ನಡ ಭಾಷೆಗೆ ಹೆಚ್ಚಿನ ಒತ್ತು ನೀಡಿ ಬೋಧನೆ ಮಾಡಬೇಕು ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾರಾ ಸುದರ್ಶನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ ಇರುವ ನಾಮಫಲಕಗಳು ಕನ್ನಡದಲ್ಲಿ ಇವೆ. ಆದರೆ ಕೆಲವು ಕಡೆ 60:40 ರೇಶಿಯೋ ಇಲ್ಲ ಎಂಬ ಬಗ್ಗೆ ಪರಿಶೀಲನೆ ನಡೆಸಲಾಗುವುದು. ಪರವಾನಗಿ ರಿನಿವಲ್‌ಗೆ ಬಂದಾಗ ಈ ಬಗ್ಗೆ ಷರತ್ತು ವಿಧಿಸಿ ಅನುಷ್ಠಾನ ಮಾಡಲಾಗುವುದು -ಜಿ.ಲಕ್ಷ್ಮೀಕಾಂತ ರೆಡ್ಡಿ , ಜಿಲ್ಲಾಧಿಕಾರಿ

## ಗ್ರಾಮಕ್ಕೆ ಮೂಲಭೂತ ಸೌಲಭ್ಯ ಕಲ್ಪಿಸುವಂತೆ ಆಗ್ರಹ

• ಉದಯವಾಹಿನಿ ಹನೂರು

ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯತ್ ವ್ಯಾಪ್ತಿಯ ಗೊರಸಾಣೆ ಗ್ರಾಮಕ್ಕೆ ಮೂಲಭೂತ ಸೌಕರ್ಯ ಕಲ್ಪಿಸುವಂತೆ ಗಿರಿಜನ ಕಾಲೋನಿಯ ಸರ್ಕಲ್ ಅಧ್ಯಕ್ಷ ಗಿರಿಯ ಒತ್ತಾಯಿಸಿದ್ದಾರೆ. ಮಾಧ್ಯಮದವರ ಜೊತೆ ಮಾತನಾಡಿ ಹೆಲಿಫ್ಯಾಡ್ ನಿಂದ ಗೋರಸಣೆ ಗ್ರಾಮಕ್ಕೆ ಎರಡು ಕಿಲೋಮೀಟರ್ ಅಂತರವಿದ್ದು, ರಸ್ತೆ ತುಂಬಾ ಹದಗೆಟ್ಟಿದೆ. ಡಂಬರು ರಸ್ತೆ ಕೇವಲ ಹೆಲಿಪ್ಯಾಡ್ ವರಗೆ ಮಾತ್ರ ಹಾಕಿದ್ದಾರೆ.

ಗೋರಸಣೆ ಹಾಗೂ ಕೊಂಗನೂರು ಗ್ರಾಮದಲ್ಲಿ ಸುಮಾರು 1000 ಕ್ಕೂ ಹೆಚ್ಚು ಜನಸಂಖ್ಯೆ ಇದ್ದು, ರಸ್ತೆ, ಚರಂಡಿ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿಲ್ಲ. ತೊಂಬೆಗಳಿದ್ದರು ಕುಡಿಯುವ ನೀರು ಇಲ್ಲ.ಕೊಳಚೆ ನೀರು ಕುಡಿಯುವ ಪರಿಸ್ಥಿತಿ ಎದುರಾಗಿದೆ. ಪಿ.ಡಿ.ಒ ಅವರಿಗೆ ಕುಡಿಯುವ ನೀರು ಕಲ್ಪಿಸುವಂತೆ ಮನವಿ ಕೂಡ ಸಲ್ಲಿಸಲಾಯಿತು. ಕಾಡು ಪ್ರಾಣಿಗಳ ಹಾವಳಿ ತುಂಬಾ ಹೆಚ್ಚಾಗಿದ್ದು, ವರ್ಷಕ್ಕೆ ಒಂದೇ ಬೆಳೆ ಅದನ್ನು ಕೂಡ ಕಾಡು ಪ್ರಾಣಿಗಳು ನಾಶ ಮಾಡುತ್ತಿದೆ. ಅರಣ್ಯ ಇಲಾಖೆ ಅಧಿ ಕಾರಿಗಳು ಕಾಡುಪ್ರಾಣಿಗಳ ಹಾವಳಿಗೆ ಕಡಿವಾಣ ಹಾಕಿ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು. ಮಲೆ ಮಹದೇಶ್ವರ ಬೆಟ್ಟದ ಪ್ರಾಧಿ ಕಾರಾದ ವತಿಯಿಂದ ಸ್ಥಳೀಯ ಯುವಕ, ಯುವತಿಯರಿಗೆ ಪ್ರಧಿಕಾರದಲ್ಲಿ ಉದ್ಯೋಗ ನೀಡಬೇಕು. ಸ್ಥಳೀಯರಿಗೆ ಮೊದಲು ಅವಕಾಶ ನೀಡಿ ಅನಂತರ ಬೇರೆಯವರಿಗೆ ಉದ್ಯೋಗ ನೀಡಬೇಕು. ಪ್ರಧಿಕಾರದ ಕಾರ್ಯದರ್ಶಿ ಎ.ಇ ರಘು ಹಾಗೂ ಸ್ಥಳೀಯ ಶಾಸಕಕರಿಗೆ ಮನವಿ ಕೂಡ ಸಲ್ಲಿಸಿದ್ದೇವೆ. ಒಟ್ಟಿನಲ್ಲಿ ನಮಗೆ ರಸ್ತೆ, ಕುಡಿಯುವ ನೀರು ಹಾಗೂ ಯುವಕ- ಯುವತಿಯರಿಗೆ ಉದ್ಯೋಗ ನೀಡಬೇಕು ಇಂದು ಒತ್ತಾಯಿಸುತ್ತೇನೆ ಎಂದು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ


**ಕಾಡು ಪ್ರಾಣಿಗಳ ಹಾವಳಿ**

## ಕರಿಘಟ್ಟದಲ್ಲಿ ವೆಂಕಟರಮಣಸ್ವಾಮಿ ರಥೋತ್ಸವ

• ಉದಯವಾಹಿನಿ ಶ್ರೀರಂಗಪಟ್ಟಣ

ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಕರಿಘಟ್ಟದಲ್ಲಿ ವೆಂಕಟರಮಣಸ್ವಾಮಿ ದೇವರ ರಥೋತ್ಸವ ಸಂಭ್ರಮದಿಂದ ನಡೆಯಿತು. ಮಧ್ಯಾಹ್ನ 2ಕ್ಕೆ ರಥೋತ್ಸವ ಆರಂಭವಾಯಿತು. ವೆಂಕಟರಮಣಸ್ವಾಮಿ ದೇವರ ಉತ್ಸವ ಮೂರ್ತಿಯನ್ನು ಕಾಷ್ಠ ರಥದಲ್ಲಿ ಪ್ರತಿಷ್ಠಾಪಿಸಿದ ಬಳಿಕ ಭಕ್ತರು ಭಕ್ತಿ, ಭಾವದಿಂದ ದೇವಾಲಯದ ಸುತ್ತ ರಥವನ್ನು ಎಳೆದರು.

ರಥವನ್ನು ಎಳೆಯುವಾಗ ವೆಂಕಟರಮಣ.... ಗೋವಿಂದಾ..... ಶ್ರೀನಿವಾಸ.... ಎಂಬ ಘೋಷಣೆಗಳು ಕೇಳಿ ಬಂದವು. ಸರ್ವಾಲಂಕೃತ ರಥಕ್ಕೆ ಭಕ್ತರು ಹಣ್ಣು, ದವನ ಎಸೆದರು. ರಥ ಸಾಗಿದ ಮಾರ್ಗದ ಉದ್ದಕ್ಕೂ ಈಡುಗಾಯಿ ಮತ್ತು ಕರ್ಪೂರದ ಸೇವೆ ಸಲ್ಲಿಸಿದರು. ಮಂಗಳ ವಾದ್ಯ ಸಹಿತ ನಡೆದ ರಥೋತ್ಸವವನ್ನು ನೂರಾರು ಮಂದಿ ಕಣ್ತುಂಬಿಕೊಂಡರು.


ಉದಯವಾಹಿನಿ ಚಿತ್ರ

ಇದಕ್ಕೂ ಮುನ್ನ ವೆಂಕಟರಮಣಸ್ವಾಮಿ ದೇಗುಲದಲ್ಲಿ ಮೂಲ ದೇವರನ್ನು ಬಗೆ ಬಗೆಯ ಹೂ, ಹಣ್ಣುಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ದೇವಾಲಯದ ಪ್ರಧಾನ ಅರ್ಚಕ ಶ್ರೀನಿವಾಸ್ ಅವರ ನೇತೃತ್ವದಲ್ಲಿ ಪಂಚಾಮೃತ ಅಭಿಷೇಕ, ಅರ್ಚನೆ, ಮಹಾ ಆರತಿಗಳು ಜರುಗಿದವು.

ಹರಕೆ ಹೊತ್ತವರು ದೇವಾಲಯದ ಸುತ್ತ ಉರುಳು ಸೇವೆ ನಡೆಸಿದರು.ದೇಗುಲದ ಆವರಣ ಮತ್ತು ಮೆಟ್ಟಿಲುಗಳ ಗೆರಡೂ ಕಡೆ ಇರುವ ಅರವಟ್ಟಿಗೆಗಳಲ್ಲಿ ಹಣ್ಣು, ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸುತ್ತಿದ್ದ ದೃಶ್ಯ ಕಂಡು ಬಂತು.

ಶಥ ಅಲ್ಲಲ್ಲಿ ಅನ್ನ ಸಂತರ್ಪಣೆ ಕೂಡ ನಡೆಯಿತು. ಶ್ರೀನಿವಾಸ ಅಗ್ರಹಾರ, ಕೆ.ಶೆಟ್ಟಿಹಳ್ಳಿ, ಗಂಜಾಂ, ಬಾಬುರಾಯನಕೊಪ್ಪಲು, ಗರುಡನ ಉಕ್ಕಡ, ಮರಳಾಗಾಲ, ಚಿನ್ನಾಯಕನಹಳ್ಳಿ ಗ್ರಾಮಗಳ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ಬೆಂಗಳೂರು, ಮೈಸೂರು, ಹಾಸನ, ತುಮಕೂರು, ರಾಮನಗರ ಮಂಡ್ಯ ಇತರ ಕಡೆಗಳಿಂದಲೂ ಆಗಮಿಸಿದ್ದರು.

## ಗ್ರಾಮ ಆಡಳಿತ ಅಧಿಕಾರಿಗಳ ಮುಷ್ಕರ ಸ್ಥಳಕ್ಕೆ ಶಾಸಕ ಭೇಟಿ

• ಉದಯವಾಹಿನಿ ಗೌರಿಬಿದನೂರು

ನಗರದ ತಾಲ್ಲೂಕು ಆಡಳಿತ ಕಚೇರಿ ಆವರಣದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರದ ಸ್ಥಳಕ್ಕೆ ಶಾಸಕ ಕೆ.ಎಚ್. ಪುಟ್ಟಸ್ವಾಮಿಗೌಡ ಶನಿವಾರ ಭೇಟಿ ನೀಡಿದರು. ಗ್ರಾಮ ಆಡಳಿತ ಅಧಿಕಾರಿಗಳ ಸಮಸ್ಯೆಗಳನ್ನು ಆಲಿಸಿ, ಮಾತನಾಡಿದ ಅವರು, ನಿಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದು. ಬಗೆಹರಿಸಲು ಪ್ರಯತ್ನಿಸುತ್ತೇನೆ. ಗ್ರಾಮಗಳಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಉತ್ತಮ ಸೇವೆಗಳನ್ನು ನೀಡಬೇಕು' ಎಂದರು.ರೈತ ಸಂಘ ಮತ್ತು ಹಸಿರು ಸೇನೆ, ತಾಲ್ಲೂಕು ಅಧ್ಯಕ್ಷ ಲೋಕೇಶ್ ಗೌಡ ಮಾತನಾಡಿ, ಸರ್ಕಾರ ಕೂಡಲೇ ಗ್ರಾಮ ಆಡಳಿತ ಅಧಿಕಾರಿಗಳ ಅಂತರ್ ಜಿಲ್ಲಾ ವರ್ಗಾವಣೆ, ಪದೋನ್ನತಿ ಸೇರಿದಂತೆ ಎಲ್ಲ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದರು.

## ತಮ್ಮನ ಕೊಲೆಗೆ ಅಣ್ಣನ ಸುಪಾರಿ

• ಉದಯವಾಹಿನಿ ಮಂಡ್ಯ

ತಮ್ಮನ ಕೊಲೆಗೆ ಅಣ್ಣನೇ ಸುಪಾರಿ ಕೊಟ್ಟು ತಣ್ಣಗೆ ಕುಂಭಮೇಳಕ್ಕೆ ಹೋಗಿದ್ದ ಆಘಾತಕಾರಿ ಘಟನೆ ಮಂಡ್ಯದಲ್ಲಿ ನಡೆದಿದೆ. ಈ ಘಟನೆಗೆ ಸಂಬಂಧಪಟ್ಟಂತೆ ಇದೀಗ ಮಂಡ್ಯ ಮಪಲೀಸರು 8 ಮಂದಿ ಆರೋಪಿಗಳನ್ನು ಅರೆಸ್ಟ್ ಮಾಡಿದ್ದಾರೆ. ಮದ್ದೂರು ತಾಲ್ಲೂಕಿನ ಲಕ್ಷ್ಮೀಗೌಡನದೊಡ್ಡಿ ಗ್ರಾಮದ ಕೃಷ್ಣ ಗೌಡ ಅವರ ಕೊಲೆ ಪ್ರಕರಣವನ್ನು ಭೇದಿಸಿರುವ ಪೊಲೀಸರು ಸುಪಾರಿ ವಿಚಾರವನ್ನು ಹೊರಗೆಡವಿದ್ದಾರೆ. ತಮ್ಮನ ಹತ್ಯೆಗೆ ಸುಪಾರಿ ಕೊಟ್ಟ ಅಣ್ಣ ಹತ್ಯೆಗೆ ನಾಲ್ಕು ದಿನಗಳಿರುವಂತೆಯೇ ಪ್ರಯಾಗರಾಜ್ ಕುಂಭಮೇಳಕ್ಕೆ ಮತ್ತೂಬ್ಬ ಆರೋಪಿಯ ಜತೆ ತೆರಳಿದ್ದ. ಫೆ. 11ರಂದು ಕೃಷ್ಣಗೌಡ ಎಂಬಾತನ ಹತ್ಯೆ ನಡೆದಿತ್ತು. ಪ್ರಕರಣದ ಸಂಬಂಧ ಆರೋಪಿ ಮಳವಳ್ಳಿ ತಾಲ್ಲೂಕಿನ ಚಂದ್ರಶೇಖರ್ ಎನ್.ಎಸ್. ಎಂಬಾತನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಸುಪಾರಿ ವಿಚಾರ ಬೆಳಕಿಗೆ ಬಂದಿದೆ.

# ರಾಮನಗರ ಜಿಲ್ಲೆ ಮರುನಾಮಕರಣ ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ

## ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ 100 ಎಕರೆ ಪ್ರದೇಶದಲ್ಲಿ ಬಡವರಿಗೆ ನಿವೇಶನ ಹಂಚುವ ಕೆಲಸ: ಡಿಕೆಶಿ

• ಉದಯವಾಹಿನಿ ಕನಕಪುರ

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡದಂತೆ ಎಚ್.ಡಿ. ಕುಮಾರಸ್ವಾಮಿ ಕೇಂದ್ರ ಸರ್ಕಾರಕ್ಕೆ ತಕರಾರು ಸಲ್ಲಿಸಿದ್ದಾರೆ. ಯಾರು ಏನೇ ಮಾಡಲಿ ಬೆಂಗಳೂರು ದಕ್ಷಿಣ ಜಿಲ್ಲೆಯಾಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಕನಕಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರ ಪದಗ್ರಹಣ ಹಾಗೂ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ಬೆಂಗಳೂರು ದಕ್ಷಿಣ ಜಿಲ್ಲೆಯಾಗಿ ಮರುನಾಮಕರಣ ಮಡುತ್ತಿರುವುದು ಕುಮಾರಸ್ವಾಮಿ ಅವರಿಗೆ ತಡೆದುಕೊಳ್ಳಲು ಆಗುತ್ತಿಲ್ಲ ಎಂದರು. ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ 100 ಎಕರೆ ಪ್ರದೇಶದಲ್ಲಿ ಬಡವರಿಗೆ ನಿವೇಶನ ಹಂಚುವ ಕೆಲಸ ಮಾಡಬೇಕು. ಈ ಜವಾಬ್ದಾರಿಯನ್ನು ಕಾಂಗ್ರೆಸ್ ಮೂವರು ಶಾಸಕರು ತೆಗೆದುಕೊಳ್ಳಬೇಕು. ಸರ್ಕಾರಿ ಜಮೀನು ಅಥವಾ ಖಾಸಗಿ ಜಮೀನು ಖರೀದಿ ಮಾಡಿ ಆ ಕೆಲಸ ಮಾಡಲೇಬೇಕು ನಮ್ಮ ಕಾಲ ಇಂತಹ ಕೆಲಸ ಆಯಿತು ಎಂದು ನಾವು ಕುಮಾರಸ್ವಾಮಿ ಅವರಿಗೆ ಹೇಳಬೇಕಿದೆ. ಅದಕ್ಕೂ ಹೆಚ್ಚಾಗಿ ವಿರೋಧ ಪಕ್ಷದವರಿಗೆ ತೋರಿಸುವುದಕ್ಕಿಂತ ನಮ್ಮ ಆತ್ಮಸಾಕ್ಷಿಗೆ ತೃಪ್ತಿಯಾಗುವಂತೆ ಕೆಲಸ ಮಾಡಬೇಕು' ಎಂದರು.

**ಭಿನ್ನಾಭಿಪ್ರಾಯ ಬೇಡ:** 'ಕಾಂಗ್ರೆಸ್ ಕಾರ್ಯಕರ್ತರು ಸ್ಥಳೀಯ ಮಟ್ಟದಲ್ಲಿರುವ ಭಿನ್ನಾಭಿಪ್ರಾಯ ಸರಿಪಡಿಸಿಕೊಳ್ಳಬೇಕು ನಿಮ್ಮ ನಿಮ್ಮಲ್ಲಿರುವ ಕೋಪ, ಭಿನ್ನಾಭಿಪ್ರಾಯದಿಂದ ಲೋಕಸಭೆ ಚುನಾವಣೆಯಲ್ಲಿ ಸುರೇಶ್‌ಗೆ ಸೋಲಾಗಿದೆ. ನನ್ನ ಹಾಗೂ ಯೋಗೇಶ್ವರ್ ಮಧ್ಯೆ ಎಷ್ಟೇ ಜಗಳವಿದ್ದರೂ ಪಕ್ಷ ಮುಖ್ಯ ಎಂದು ಎಲ್ಲವನ್ನೂ ಮರೆತು ಚುನಾವಣೆಯಲ್ಲಿ ಕೆಲಸ ಮಾಡಿದೆವು' ಎಂದು ಶಿವಕುಮಾರ್ ಹೇಳಿದರು. ಜಿಲ್ಲೆ ಉಸ್ತುವಾರಿ ರಾಮಲಿಂಗ ರೆಡ್ಡಿ, ಮಾಜಿ ಸಂಸದ ಡಿ.ಕೆ.ಸುರೇಶ್ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಎಸ್. ರವಿ ಭಾಗವಹಿಸಿದ್ದರು.

'ಅಭಿವೃದ್ಧಿ ವಿಚಾರವಾಗಿ ಯಾರೂ ನನ್ನನ್ನು ಭೇಟಿ ಮಾಡುತ್ತಿಲ್ಲ. ಅಭಿವೃದ್ಧಿ ವಿಚಾರದಲ್ಲಿ ರಾಜ್ಯ ಸತ್ತು ಹೋಗಿದೆ' ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆ ಕುರಿತು ಇಲ್ಲಿ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. 'ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಬಾರದು ಎಂದು ಆಕ್ಷೇಪ ಮಾಡಿದ್ದೀರಿ. ನಿಮ್ಮಂತೆ ನಾವು ದ್ವೇಷ ರಾಜಕಾರಣ ಮಾಡುವುದಿಲ್ಲ. ನಿಮಗೆ ಎಲ್ಲಾ ರೀತಿಯ ಸಹಕಾರ ನೀಡುತ್ತೇವೆ.

ಕೇಂದ್ರ ಸಚಿವ ರಾಜನಾಥ್ ಸಿಂಗ್ ಅವರು ರಾಜ್ಯಕ್ಕೆ ಬಂದಾಗ ಏನು ಹೇಳಿದ್ದಾರೆ ಎಂಬುದನ್ನು ತಲೆಯಲ್ಲಿ ಇಟ್ಟುಕೊಳ್ಳಿ' ಎಂದು ತಿರುಗೇಟು ನೀಡಿದರು. 'ಒಂದೇ ದಿನದಲ್ಲಿ ಮೇಕೆದಾಟು ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಸಹಿ ಹಾಕಿಸುವುದಾಗಿ ಹೇಳಿದಿರಲ್ಲಾ, ಇನ್ನೂ ಏಕೆ ಮಾಡಿಸಿಲ್ಲಾ..? ನಮ್ಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ ಚರ್ಚೆ ಮಾಡಿಲ್ಲವೇ? ನಿಮಗೆ ದ್ವೇಷದ ರಾಜಕಾರಣ ಮುಖ್ಯವೇ ಹೊರತು ರಾಜ್ಯದ ಅಭಿವೃದ್ಧಿಯಲ್ಲ' ಎಂದು ಟೀಕಿಸಿದರು.


ಉದಯವಾಹಿನಿ ಚಿತ್ರ

**ದ್ವೇಷದಿಂದ ಯಾರೂ ಏನೂ ಸಾಧನೆ: ಮಾಡಿಲ್ಲ**

ದ್ವೇಷದಿಂದ ಯಾರೂ ಏನೂ ಸಾಧನೆ ಮಾಡಿಲ್ಲ. ದೊಡ್ಡ ದೊಡ್ಡ ಚಕ್ರವರ್ತಿಗಳೇ ಕೆಳಗೆ ಬಿದ್ದಿದ್ದಾರೆ. ರಾಜಕಾರಣದಲ್ಲಿ ಯಾರೂ ಶಾಶ್ವತವಲ್ಲ, ಅಧಿಕಾರವಿದ್ದಾಗ ದ್ವೇಷ ಬಿಟ್ಟು ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡಬೇಕು' ಎಂದರು. ಡಿಕೆಶಿ ಮುಖ್ಯಮಂತ್ರಿ ಆಗದಂತೆ ಕಾಂಗ್ರೆಸ್‌ನಲ್ಲಿ ಪಿತೂರಿ, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಲು ಕಾಂಗ್ರೆಸ್‌ನ ಕೆಲ ಸಚಿವರು ಹಠಕ್ಕೆ ಬಿದ್ದಿದ್ದಾರೆ ಎಂದು ತುರುವೇಕೆರೆ ಜೆಡಿಎಸ್ ಶಾಸಕ ಎಂ.ಟಿ.ಕೃಷ್ಣಪ್ಪ ತರಾಟೆಗೆ ತೆಗೆದುಕೊಂಡಿದ್ದಾರೆ. ಕಾಂಗ್ರೆಸ್‌ನಲ್ಲಿ ಒಕ್ಕಲಿಗ ಸಮುದಾಯದ ನಾಯಕರನ್ನು ಮೂಲೆಗುಂಪು ಮಾಡುವ ಹುನ್ನಾರ ಶುರುವಾಗಿದೆ. ರಾಜ್ಯದಲ್ಲಿ ಇದು ಕೆಟ್ಟ ರಾಜಕೀಯಕ್ಕೆ ಮುನ್ನುಡಿಯಾಗಲಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದ್ದಾರೆ. 'ಒಂದೊಮ್ಮೆ ಒಕ್ಕಲಿಗ ಸಮುದಾಯಕ್ಕೆ ಅನ್ಯಾಯವಾದಲ್ಲಿ ಎಲ್ಲಾ ನಾಯಕರೂ ಪಕ್ಷಬೇಧ ಮರೆತು ಸಂಘಟಿತರಾಗಿ ಹೋರಾಟ ಮಾಡೋಣ' ಎಂದರು.

ಎಚ್.ಡಿ. ಕುಮಾರಸ್ವಾಮಿ ಅವರಿಗೆ ಅಭಿವೃದ್ಧಿಗಿಂತ ದ್ವೇಷ ರಾಜಕಾರಣವೇ ಹೆಚ್ಚಾಗಿದೆ. ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಅಂತ ನಾವು ಹೆಸರು ಬದಲಾವಣೆ ಮಾಡಲು ಮುಂದಾಗಿರುವುದರ ವಿರುದ್ಧ ಕೇಂದ್ರದಲ್ಲಿ ಹೋಗಿ ತಕರಾರು ಮಾಡುತ್ತಿದ್ದಾರೆ. ನಿಮಗೆ ಕೇಂದ್ರದಲ್ಲಿ ಮಂತ್ರಿಗಿರಿ ಕೊಟ್ಟಿದ್ದಾರಲ್ಲ, ನೀವು ಏನು ಅಭಿವೃದ್ಧಿ ಮಾಡಿದ್ದೀರಿ ಹೇಳಿ...? -ಡಿಕೆಶಿ, ಉಪ ಮುಖ್ಯಮಂತ್ರಿ

**ಎಷ್ಟೇ ಜಗಳವಿದ್ದರೂ ಪಕ್ಷ ಮುಖ್ಯ**

ಅಂತರಾಳದಿಂದ... EDITORIAL

# ದ್ವಿಪಕ್ಷೀಯ ಬಂಧ ಹೊಸ ಎತ್ತರಕ್ಕೆ



ವಿಶ್ವದ ಹಳೆಯ ಪ್ರಜಾಪ್ರಭುತ್ವ ಮತ್ತು ವಿಶ್ವದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಾದ ಅಮೆರಿಕ ಹಾಗೂ ಭಾರತದ ನಡುವಿನ ದ್ವಿಪಕ್ಷೀಯ ಬಂಧ ಹಲವು ಅನುಮಾನಗಳ ಕಾರ್ಮೋಡವನ್ನು ಚದುರಿ ಹೊಸ ಎತ್ತರಕ್ಕೆ ತಲುಪಿದೆ. ಫ್ರಾನ್ಸ್ ಪ್ರವಾಸ ಮುಗಿಸಿ ಅಮೆರಿಕಗೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿಯವರಿಗೆ ಅಲ್ಲಿ ದೊರೆತ ಸ್ವಾಗತ. ಅನಿವಾಸಿ ಭಾರತೀಯರ ಉತ್ಸಾಹ ಉಭಯ ದೇಶಗಳ ಸ್ನೇಹಸಂಬಂಧ ಹಾದಿಯನ್ನು ಮತ್ತಷ್ಟು ವಿಸ್ತಾರಗೊಳಿಸಿದೆ.

ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವಿನ ಮಾತುಕತೆಯು, ಎರಡೂ ರಾಷ್ಟ್ರಗಳ ಬಾಂಧವ್ಯವನ್ನು ವೃದ್ಧಿಸುವ ದಿಕ್ಸೂಚಿಯಾಗಿದೆ. ರಕ್ಷಣಾ ವ್ಯವಸ್ಥೆಯ ಬಲವರ್ಧನೆ, ವಾಣಿಜ್ಯ–ವ್ಯಾಪಾರ ಹೆಚ್ಚಳ, ಇಂಧನ, ಮೂಲಸೌಕರ್ಯ ಮತ್ತು ತಂತ್ರಜ್ಞಾನ ವೃದ್ಧಿ ಸೇರಿದಂತೆ ಹಲವು ಮಹತ್ವದ ವಿಷಯಗಳ ಕುರಿತು ಫಲಪ್ರದ ಚರ್ಚೆ ನಡೆದಿದೆ.

**ಮಿಲಿಟರಿ ಕ್ಷೇತ್ರದ ಬಲವರ್ಧನೆಯ ಭಾಗವಾಗಿ ಅಮೆರಿಕದ ಅತ್ಯಾಧುನಿಕ ಎಫ್–35 ಯುದ್ಧ ವಿಮಾನಗಳನ್ನು ಭಾರತಕ್ಕೆ ಒದಗಿಸಲಾಗುವುದು, ರಕ್ಷಣಾ, ಇಂಧನ ಕ್ಷೇತ್ರದಲ್ಲಿ ಸಹಕಾರವನ್ನು ವಿಸ್ತರಿಸಲಾಗುವುದು ಎಂದು ಟ್ರಂಪ್ ಘೋಷಿಸಿದ್ದಾರೆ. ಮಾತ್ರವಲ್ಲ, 'ಭಾರತ–ಮಧ್ಯಪ್ರಾಚ್ಯ–ಯೂರೋಪ್ ಕಾರಿಡಾರ್ ನಿರ್ಮಿಸಲು ಬದ್ಧ ಎಂದಿದ್ದಾರೆ. ಭಾರತದಲ್ಲಿ ಕ್ಯಾಂಪಸ್‌ಗಳನ್ನು ಸ್ಥಾಪಿಸುವಂತೆ ಪ್ರಧಾನಿ ಮೋದಿ ಅಮೆರಿಕದ ವಿಶ್ವವಿದ್ಯಾಲಯಗಳಿಗೆ ಕರೆ ನೀಡಿದ್ದಾರೆ. 'ಭಾರತ ಮತ್ತು ಅಮೆರಿಕ ನಡುವಿನ ಸಹಕಾರವು ಉಭಯ ರಾಷ್ಟ್ರಗಳ ಪ್ರಗತಿಯ ಜತೆಗೆ ಉತ್ತಮ ಜಗತ್ತನ್ನು ರೂಪಿಸಲಿದ್ದು, ಸಮೃದ್ಧಿಯತ್ತ ಸಾಗಲಿದ್ದೇವೆ. ತಂತ್ರಜ್ಞಾನ ಹಂಚಿಕೆಯ ವಿಷಯದಲ್ಲಿ ಜಂಟಿಯಾಗಿ ಮುನ್ನಡೆಯುತ್ತೇವೆ' ಎಂದು ಮೋದಿ ಹೇಳಿದ್ದಾರೆ. ಭಾರತಕ್ಕೆ ಭೇಟಿ ನೀಡುವಂತೆ ಟ್ರಂಪ್ ಅವರಿಗೆ ಆಹ್ವಾನ ನೀಡಿದ್ದಾರೆ.**


ಮುಖ್ಯವಾಗಿ, ಭಯೋತ್ಪಾದನೆ ವಿರುದ್ಧ ಸಮರವನ್ನು ಇನ್ನಷ್ಟು ತೀವ್ರಗೊಳಿಸಲು, ಅದಕ್ಕಾಗಿ ಪರಸ್ಪರ ಸಹಕಾರ ನೀಡಲು ಎರಡೂ ರಾಷ್ಟ್ರಗಳು ಒಮ್ಮತಕ್ಕೆ ಬಂದಿವೆ.

ಮುಂಬೈನಲ್ಲಿ 2008ರ ನವೆಂಬರ್ 26ರಂದು ನಡೆದಿದ್ದ ಭೀಕರ ಭಯೋತ್ಪಾದಕ ದಾಳಿಯ ಆರೋಪಿ ತಹವುರ್ ರಾಣಾನನ್ನು ಭಾರತಕ್ಕೆ ಗಡಿಪಾರು ಮಾಡಲು ಅಮೆರಿಕ ಒಪ್ಪಿಗೆ ಸೂಚಿಸಿದ್ದು, ಪಾಕಿಸ್ತಾನಕ್ಕೆ ಕಠಿಣ ಸಂದೇಶ ರವಾನೆಯಾದಂತಾಗಿದೆ.

ಡೊನಾಲ್ಡ್ ಟ್ರಂಪ್ ಎರಡನೇ ಅವಧಿಗೆ ಅಧ್ಯಕ್ಷರಾಗುತ್ತಿದ್ದಂತೆ ತೆಗೆದುಕೊಂಡ ಕಠಿಣ ನಿರ್ಧಾರಗಳು, ದಿಢೀರನೆ ಅನುಸರಿಸಿದ ನಿಲುವುಗಳ ಪರಿಣಾಮ ಮುಂದೇನು ಎಂಬ ಪ್ರಶ್ನೆ ಉದ್ಭವವಾಗಿತ್ತು. ಅಲ್ಲದೆ, ಇದರಿಂದ ಭಾರತ–ಅಮೆರಿಕ ನಡುವಿನ ಸಂಬಂಧ ಹಳಿ ತಪ್ಪಲಿದೆ ಎಂಬ ಆತಂಕ ಕಾಡಿದ್ದು ಸುಳ್ಳಲ್ಲ. ಆದರೆ, ಮಾತುಕತೆಯ ನಂತರ ಟ್ರಂಪ್ ಹಾಗೂ ಮೋದಿ ಜಂಟಿ ಪತ್ರಿಕಾಗೋಷ್ಠಿಯನ್ನು ನಡೆಸಿ, ಸ್ನೇಹ, ಸಹಕಾರ, ಪರಸ್ಪರ ವಿಶ್ವಾಸ, ನಂಬಿಕೆಯ ಸ್ಪಷ್ಟ ಸಂದೇಶವನ್ನು ರವಾನಿಸುವಲ್ಲಿ ಯಶಸ್ವಿಯಾಗಿದ್ದಾರೆ. ಟ್ರಂಪ್ ಮತ್ತು ಮೋದಿಯವರ ಭೇಟಿ ಮತ್ತು ಸಂಬಂಧಿತ ಬೆಳವಣಿಗೆಗಳ ಮೇಲೆ ಜಾಗತಿಕ ರಾಷ್ಟ್ರಗಳು ಗಮನ ಹರಿಸಿವೆ. ಹಾಗಾಗಿ, ಇದು ಕೇವಲ ಔಪಚಾರಿಕ ಭೇಟಿ ಆಗಿರದೆ, ವರ್ತಮಾನದ ಅನಿವಾರ್ಯತೆಗಳನ್ನು ಅರಿತುಕೊಂಡು, ಕೆಲ ಭಿನ್ನಾಭಿಪ್ರಾಯ ಬದಿಗಿರಿಸಿ ಒಟ್ಟಿಗೆ ಸಾಗುವ ಅಗತ್ಯವನ್ನು ಸಾರಿದೆ. ಹಾಗಾಗಿ, ಮುಂಬರುವ ದಿನಗಳಲ್ಲಿ ಭಾರತ–ಅಮೆರಿಕ ಸ್ನೇಹ ಹಾಗೂ ಬಾಂಧವ್ಯ ಮತ್ತು ಬಲಗೊಳ್ಳುವುದರಲ್ಲಿ, ಆ ಮೂಲಕ ಹಲವು ಕ್ಷೇತ್ರಗಳಲ್ಲಿ ಸಹಕಾರ ಏರ್ಪಡುವುದರಲ್ಲಿ ಅನುಮಾನವಿಲ್ಲ.

# ತಣಿಸು ಬಾ ವರುಣನೇ ಒಳ್ಳೆಯ ಕೃತಿ

• ಉದಯವಾಹಿನಿ, ವಿಶೇಷ




ಶ್ರೀ ಮಿರ್ಲೆಚಂದ್ರಶೇಖರ ರವರು ನನಗೆ ಸುಮಾರು ಹತ್ತು ವರ್ಷಗಳಿಂದ ಚಿರಪರಿಚಿತರು, ಅವರು ಪರಿಚಯವಾಗಿದ್ದು, ಅವರು ಬರೆಯುತ್ತಿದ್ದ ಲೇಖನಗಳ ಮೂಲಕವೇ, ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದಂತೆ ನನ್ನ ಅಭಿಪ್ರಾಯಗಳನ್ನು ಅವರಿಗೆ ಆ ದಿನವೇ ಕರೆಮಾಡಿ ತಿಳಿಸುತ್ತಿದ್ದೆ, ಇದು ನಮ್ಮಿಬ್ಬರ ಸ್ನೇಹಕ್ಕೆ ಕಾರಣವಾಯಿತು. ಕೆಲವು ಸಮಯದ ನಂತರ ಅವರನ್ನು ಮುಖತಃ ಭೇಟಿ ಮಾಡುವಂತಾಯಿತು. ಅವರು ಸರ್ಕಾರಿ ಲೋಕೋಪಯೋಗಿ ಇಲಾಖೆಯಲ್ಲಿ ಇಂಜಿನಿಯರ್ ಆಗಿದ್ದುಕೊಂಡು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ. ಅವರು ಬರೆಯುವ ಲೇಖನಗಳಲ್ಲಿ ಸಮಾಜದ ಮೇಲಿರುವ ಕಳಕಳಿಯನ್ನು ತೋರಿಸುತ್ತದೆ, ನೀರಾವರಿ ಹಾಗೂ ಪರಿಸರದ ಬಗ್ಗೆ ಸ್ವತಃ ಹಲವು ಯೋಜನೆಗಳಲ್ಲಿ ಕಾರ್ಯನಿರ್ವಹಿಸಿ ಅಪಾರ ಜ್ಞಾನವುಳ್ಳವರಾಗಿದ್ದಾರೆ. ಅವರ ಲೇಖನಗಳಲ್ಲಿ ಸ್ಪಷ್ಟವಾದ ಅಂಕಿಅಂಶಗಳು ಒಳಗೊಂಡಿರುತ್ತವೆ. ಅವರ ಬರವಣಿಗೆಯ ಶೈಲಿಯು ಅದ್ಭುತವಾಗಿರುತ್ತದೆ ಹಾಗೂ ಓದುಗರನ್ನು ಲೇಖನದ ಕೊನೆಯವರೆಗೂ ಬೇಜಾರು ಆಗದ ಹಾಗೆ ಕುತೂಹಲದಿಂದ ಇರುವಂತೆ ಹಿಡಿದಿಟ್ಟುಕೊಳ್ಳುತ್ತವೆ.

''ತಣಿಸು ಬಾ ವರುಣನೇ'' ಕೃತಿಯು ಇವರ ಎಂಟನೆ ಕೃತಿ ಹಾಗೂ ಈ ಮೊದಲೇ ಇವರು ಬದುಕೇ ಆಂದೋಲನ ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದರು, ಕವನ ಸಂಕಲನಗಳಲ್ಲಿ ಇದು ಎರಡನೆಯದು. ಇಲ್ಲಿರುವ ಬಹುತೇಕ ಕವಿತೆಗಳನ್ನು ಈ ಮೊದಲೇ ಪತ್ರಿಕೆಗಳಲ್ಲಿ ಪ್ರಕಟವಾದ ಸಂದರ್ಭಗಳಲ್ಲಿ ಓದಿದ್ದೆ, ನಿಜಕ್ಕೂ ಒಂದಕ್ಕಿಂತ ಒಂದು ಉತ್ತಮವಾಗಿವೆ, ಎಲ್ಲವೂ ಸಮಾಜದ ಓರೆಕೋರೆಗಳನ್ನು ಎತ್ತಿ ತೋರಿಸುವ ನಿಟ್ಟಿನಲ್ಲಿ ಸಫಲವಾಗಿವೆ. ಶಾಶ್ವತವಾಗಿ ದಾಖಲೆ ಆಗಲಿ ಎಂಬ ಸದುದ್ದೇಶದಿಂದ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಎಲ್ಲಾ ಲೇಖನಗಳನ್ನು ಒಂದೆಡೆ ಶೇಖರಿಸಿ ಕೃತಿಯ ರೂಪದಲ್ಲಿ ಹೊರತರುತ್ತಿರುವುದು ಬಹಳ ಉತ್ತಮ ಕಾರ್ಯ. ಈ ಕೃತಿಯಲ್ಲಿ ಒಳಗೊಂಡ ಅಷ್ಟೂ ಪದ್ಯ/ಕವಿತೆಗಳು ಎಲ್ಲಿಯೂ ಬೋರಾಗದ ಹಾಗೆ ಓದಿಸಿಕೊಂಡು ಹೋಗುತ್ತವೆ. ಅವರಿಂದ ಇನ್ನೂ ಹಲವು ಕೃತಿಗಳು ರಚನೆ ಆಗಲೆಂದು ಶುಭಹಾರೈಸುತ್ತೇನೆ. ''ತಣಿಸು ಬಾ ವರುಣನೇ'' ಕೃತಿಯಲ್ಲಿರುವ ಕವಿತೆಗಳನ್ನು ಪತ್ರಿಕೆಗಳಲ್ಲಿ ಯಾವಾಗಲೋ ಒಮ್ಮೊಮ್ಮೆ ಸಮಯದ ಅಂತರದಲ್ಲಿ ಓದಿದ್ದರೂ ಮುನ್ನುಡಿಗಾಗಿ ಕೃತಿಯ ರೂಪದಲ್ಲಿ ಒಮ್ಮೆಲೇ ಮೊದಲ ಓದುಗನಾದದ್ದು ನನಗೆ ಹೆಮ್ಮೆ ಎನಿಸುತ್ತದೆ. ಮಿರ್ಲೆಚಂದ್ರಶೇಖರರವರೆ ನಿಮ್ಮ ಸಾಹಿತ್ಯ ಕೃಷಿಯು ಹೀಗೆಯೇ ನಿರಂತರವಾಗಿ ಮುಂದುವರಿಯಲಿ, ನಿಮಗೆ ದೊಡ್ಡದೊಡ್ಡ ಜನಪರ ಕೃತಿಗಳನ್ನು ಬರೆಯುವ ಶಕ್ತಿಯನ್ನು ಸರಸ್ವತಿದೇವಿಯು ದಯಪಾಲಿಸಲಿ. ಪುಸ್ತಕದೊಳಗಿನ ಕವಿತೆಗಳ ವಿಶ್ಲೇಷಣೆಗೆ ಹೋಗುವುದಿಲ್ಲ, ಏಕೆಂದರೆ ಎಂಥಹವರಿಗೂ ಸರಳವಾಗಿ ಅರ್ಥವಾಗುವ ರೀತಿಯಲ್ಲಿ ಇರುವುದರಿಂದ ಓದುಗರಿಗೆ ಮತ್ತೊಮ್ಮೆ ಬಿಡಿಸಿ ಹೇಳುವ ಅವಶ್ಯಕತೆ ಇಲ್ಲ, ಖಂಡಿತ ಇದು ಒಳ್ಳೆಯ ಕೃತಿಯಾಗಿದೆ ಎಂದು ಹಾಗೂ ಅರ್ಥಗರ್ಭಿತ ಮತ್ತು ಸಂದೇಶ ನೀಡುವಂತಿರುವುದರಿಂದ ಓದುಗರಿಗೆ ಮೆಚ್ಚುಗೆ ಆಗುತ್ತವೆ, ನಿಮ್ಮ ಈ ಕಾರ್ಯಕ್ಕೆ ಅಭಿನಂದನೆಗಳು.

**ಶಾಶ್ವತವಾಗಿ ದಾಖಲೆ**

# ಕುಂಭಮೇಳ: ಆತಂಕ ಬೇಡ

• ಉದಯವಾಹಿನಿ ಬೆಂಗಳೂರು

ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದ ಬಗ್ಗೆ ಹಲವು ಸುಳ್ಳು ಸುದ್ದಿ ಹರಡಿದ್ದು ಭಕ್ತರು ಆತಂಕಪಡಬೇಕಿಲ್ಲ ಎಂದು ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ಅಧ್ಯಕ್ಷ ಡಾ ಆರೂಢಭಾರತೀ ಸ್ವಾಮೀಜಿ ಹೇಳಿದ್ದಾರೆ. ಅವರಿಂದು ಮಹಾಕುಂಭ 'ಮೇಳದಲ್ಲಿ ಸ್ನಾನ ಮುಗಿಸಿ ಮಾತನಾಡಿದರು. ಶೌಚದ ಕೊಳೆ ಗಂಗೆ ಸೇರುತ್ತಿದೆ, ಕಾಲ್ತುಳಿತದಿಂದ ಸಾವಿರಾರು ಸಾವು, ನೂರಾರು ಕಿಲೋ ಮೀಟರ್ ರಸ್ತೆ ಜಾಮ್ ಇತ್ಯಾದಿ ಎಲ್ಲಾ ಸುಳ್ಳು. ಒಂದು ಕಾಲ್ತುಳಿತ, ಮೂವತ್ತು ಸಾವು ಹೊರತುಪಡಿಸಿ ದುರ್ಘಟನೆ ನಡೆದಿಲ್ಲ. ನಿರೀಕ್ಷೆಗೂ ಮೀರಿ ಪ್ರತಿ ದಿನ ಕೋಟಿಗೂ ಹೆಚ್ಚು ಜನ ಹರಿದು ಬರುತ್ತಿರುವುದರಿಂದ ಸ್ವಲ್ಪಮಟ್ಟಿಗೆ ಅಡಚಣೆ ಸಹಜ. ಅನೇಕ ಕಡೆ ವಿಸ್ತಾರವಾದ ಸ್ನಾನ ಘಟ್ಟಗಳನ್ನು ನಿರ್ಮಿಸಿದ್ದು ಜನ ಗಂಡು ಹೆಣ್ಣು ಬಡವ ಬಲ್ಲಿದ ಧರ್ಮ ಭಾಷೆ ಭೇದ ಮರೆತು ನಿರಾತಂಕವಾಗಿ ಸ್ನಾನ ಮಾಡಿ ಧನ್ಯತೆ ಹೊಂದುತ್ತಿದ್ದಾರೆ. ಇವರ ಸಂಖ್ಯೆ ಐವತ್ತು ಕೋಟಿ ತಲುಪುತ್ತಿದೆ.



ಉದಯವಾಹಿನಿ ಚಿತ್ರ

ಸತ್ಸಂಗ ವೇದ ಸ್ತೋತ್ರ ಪಠಣ ಭಜನೆ ಕಿವಿಗೆ ಬೀಳುತ್ತದೆ. ಹರ ಹರ ಗಂಗೆ, ಹರ ಹರ ಮಹಾದೇವ, ಜೈ ಸೀತಾರಾಂ ಘೋಷ ಮರುಧ್ವನಿಸುವುದು. ನೋಡಿದಲ್ಲೆಲ್ಲ ಹಗಲು ರಾತ್ರಿ ಸಾಧು ಸಂತ ಭಕ್ತ ಜನಸಾಗರ. ಅಖಾಡಾ ಮಹಾ ಮಂಡಲೇಶ್ವರ ಮಠಾಧೀಶ ಧರ್ಮಸಂಸ್ಥೆಗಳ ಬಿಡಾರ ಅನ್ನ ವಸತಿ ಆಸ್ಪತ್ರೆ ಶೌಚಾಲಯ ಅಗ್ನಿಶಾಮಕ ಪರಿಹಾರ ಕೇಂದ್ರಗಳು. ಅಲ್ಲಲ್ಲಿ ಪೊಲೀಸ್ ಹಾಗೂ ಮೂರೂ ವಿಧ ಸೇನಾ ಸಿಬ್ಬಂದಿ, ಕಟ್ಟುನಿಟ್ಟಿನ ಶಿಸ್ತುಬದ್ಧ ನಿರ್ವಹಣೆ. ಕೇಂದ್ರ ಹಾಗೂ ಉತ್ತರ ಪ್ರದೇಶ ಸರ್ಕಾರಗಳ ವಿಶೇಷ ನಿಗಾ. ಹಿಂದುಗಳು ಇಲ್ಲಿ ಸುರಕ್ಷಿತ ಎಂಬ ವಾತಾವರಣ. ಇದು ವಿಶ್ವದಾಖಲೆ ಮುರಿದ ವಿರಾಟ್ ಹಿಂದೂ ಹಬ್ಬ. ಪ್ರಪಂಚದ ಯಾವ ಧರ್ಮದಲ್ಲೂ ಇಂಥ ಹಬ್ಬ ಇಷ್ಟು ಪ್ರಮಾಣದಲ್ಲಿ ಇಷ್ಟು ಶಿಸ್ತಿನಲ್ಲಿ ನಡೆಯಲು ಸಾಧ್ಯವಿಲ್ಲ. ಈ ಮಹಾಕುಂಭಮೇಳ ಸನಾತನ ಧರ್ಮದ ಸ್ವಾಭಿಮಾನದ ಪ್ರತೀಕ. ಹಿಂದು ಧರ್ಮ ಎಂದೆಂದಿಗೂ ಅಮರ. ವಿಮಾನ ರೇಲ್ವೆ ಬಸ್ ನಿಲ್ದಾಣ ಹಾಗೂ ಕುಂಭ ಸ್ಥಳಗಳ ನಡುವೆ ಸಾರ್ವಜನಿಕ ಸಾರಿಗೆ ಆಟೋ ಟ್ಯಾಕ್ಸಿಗಳ ಕೊರತೆ ಪ್ರಯಾಣಿಕರ ಸುಲಿಗೆಗೆ ಅವಕಾಶ ನೀಡಿದೆ. ಪ್ರಯಾಣಿಕರು ಸಕಾಲದಲ್ಲಿ ರೇಲ್ವೆ ನಿಲ್ದಾಣ ತಲುಪಲಾಗುತ್ತಿಲ್ಲ. ಸಾವಿರ ಸಾವಿರ ಜನ ರೇಲ್ವೆ ನಿಲ್ದಾಣಗಳ ಹೊರ ಬಯಲಲ್ಲಿ ರಾತ್ರಿ ಚಳಿಯಲ್ಲಿ ಮಲಗಿದ್ದು ಕಂಡು ಬಂತು ಎಂದು ಅವರು ನುಡಿದಿದ್ದಾರೆ.

# ನೃತ್ಯಕಲಾವಿದೆ ಚಂದನ ಭರತನಾಟ್ಯ ರಂಗಪ್ರವೇಶ

ವೈ.ಕೆ. ಸಂಧ್ಯಾಶರ್ಮ



• ಉದಯವಾಹಿನಿ, ವಿಶೇಷ



ರಂಗಪ್ರವೇಶ ನಾಟ್ಯಕಲಾವಿದರ ಜೀವನದಲ್ಲಿ ಮರೆಯಲಾರದ ಒಂದು ಚಿರಸ್ಮರಣೀಯ ಘಟ್ಟ. ಹಲವಾರು ವರ್ಷಗಳು ಪರಿಶ್ರಮಿಸಿ ಕಲಿತ ನೃತ್ಯ ಕಲಿಕೆಯ ಅನಾವರಣ. ಅಂಥ ಒಂದು ಸುಮುಹೂರ್ತ ಉದಯೋನ್ಮುಖ ನೃತ್ಯಕಲಾವಿದೆ ಕು. ಎಂ.ಡಿ. ಚಂದನಾಗೆ ಸನ್ನಿಹಿತವಾಗಿದೆ.

ಪ್ರತಿಭಾವಂತ ನಾಟ್ಯಗುರು-ನೃತ್ಯಕಲಾವಿದೆ ಮಂಜುಭೈರವಿ ಪ್ರದೀಪ್ (ನಾಟ್ಯ ಭೈರವಿ ಕಲಾ ಕುಟೀರ) ಅವರ ನುರಿತ ಗರಡಿಯಲ್ಲಿ ತರಬೇತಿಗೊಂಡ ಕಲಾಶಿಲ್ಪವಾಗಿದ್ದು ಇವಳು, ಒಟ್ಟು ಹದಿಮೂರು ವರ್ಷಗಳು ನೃತ್ಯಾಭ್ಯಾಸ ಮಾಡಿದ್ದಾಳೆ.

ಶ್ರೀ ಎನ್. ಧನಂಜಯ ಮತ್ತು ಚೇತನ ಬಂಗಾರಿ ಅವರ ಪುತ್ರಿಯಾದ ಇವಳು, ಕರ್ನಾಟಕ ಸರ್ಕಾರದ ಜ್ಯೂನಿಯರ್, ಸೀನಿಯರ್ ಮತ್ತು ಪ್ರೀ ವಿದ್ವತ್ ನೃತ್ಯಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದು ದೂರದರ್ಶನದಲ್ಲಿ 'ಬಿ' ಗ್ರೇಡ್ ಮಾನ್ಯತೆ ಪಡೆದ ಕಲಾವಿದೆಯಾಗಿದ್ದಾಳೆ. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿಯುತ್ತಿರುವ ಇವಳು ಬಿ.ಎಸ್ಸಿ. ಪದವೀಧರೆ. ನಾಡಿನಾದ್ಯಂತ ಹಲವಾರು ನೃತ್ಯಪ್ರದರ್ಶನಗಳನ್ನು ನೀಡಿ ಪ್ರಸ್ತುತ ಕಲಾರಸಿಕರ ಮುಂದೆ ತನ್ನ ಪ್ರತಿಭಾ ಪ್ರದರ್ಶನ ಮಾಡುವ ಮಟ್ಟಕ್ಕೆ ಹದಗೊಂಡು ಬೆಳೆದಿದ್ದಾಳೆ.

ಇದೇ ತಿಂಗಳ 22 ಶನಿವಾರ 4.30 ಗಂಟೆಗೆ ವಯ್ಯಾಲಿಕಾವಲ್ಲಿನಲ್ಲಿರುವ ಶ್ರೀಕೃಷ್ಣದೇವರಾಯ ಕಲಾಮಂದಿರದಲ್ಲಿ ವಿದ್ಯುಕ್ತವಾಗಿ 'ರಂಗಪ್ರವೇಶ' ಮಾಡಲಿದ್ದಾಳೆ. ಅವಳ ಕಲಾ ಸೊಬಗನ್ನು ಕಣ್ತುಂಬಿಕೊಳ್ಳಲು ಸಮಸ್ತ ಕಲಾಭಿಮಾನಿಗಳಿಗೂ ಸುಸ್ವಾಗತ.

ನವತರುಣಿ ಚಂದನಳಿಗೆ ಬಾಲ್ಯದಿಂದ ನಾಟ್ಯದ ಬಗ್ಗೆ ಒಲವು. ಅವಳ ಮೊದಲ ಗುರು ಶ್ರೀಮತಿ ಆರತಿ. ಅವರಿಂದ ಆರಂಭಿಕ ಹಂತದ ನೃತ್ಯ ತರಬೇತಿ ಪಡೆದ ನಂತರ ಡಾ. ಲಕ್ಷ್ಮೀ ನಾಗೇಶರ 'ಅಜಂತ ಇಂಟರ್ನ್ಯಾಷನಲ್ ಕಲ್ಚುರಲ್ ಸೊಸೈಟಿ' ಸಂಸ್ಥೆಗೆ ಸೇರ್ಪಡೆಯಾಗಿ ಅಲ್ಲಿ ವಿದುಷಿ ಮಂಜು ಭೈರವಿ ಅವರಲ್ಲಿ ಅಂದಿನಿಂದ ಇಂದಿನವರೆಗೂ ನಾಟ್ಯಶಿಕ್ಷಣ ಪಡೆಯುತ್ತಿದ್ದಾಳೆ. ಆಸಕ್ತಿಯಿಂದ ವಿದ್ಯಾರ್ಜಿಸಿ, ಚಂದನ ದೂರದರ್ಶನದಲ್ಲಿ 'ಬಿ' ಗ್ರೇಡ್ ಮಾನ್ಯತೆ ಪಡೆದು, ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯಿಂದ ಸ್ಕಾಲರ್ಷಿಪ್ ಪಡೆದ ವಿಶೇಷ ಅವಳದು. ಚಿತ್ರಕಲೆ–ತಂಜಾವೂರು ಪೇಂಟಿಂಗ್ ಹವ್ಯಾಸವುಳ್ಳ ಚಂದನಾ, ಬಿ.ಪಿ. ಇಂಡಿಯನ್ ಪಬ್ಲಿಕ್ ಸ್ಕೂಲ್ನಲ್ಲಿ ಶಾಲಾಭ್ಯಾಸ ಮಾಡಿ ನಂತರ ಎಂ.ಇ.ಎಸ್. ಕಾಲೇಜಿನಿಂದ ಸೈಕಾಲಜಿ ಮತ್ತು ಪ್ರಾಣಿಶಾಸ್ತ್ರ ವಿಷಯದಲ್ಲಿ ಬಿ.ಎಸ್ಸಿ. ಪದವೀಧರೆಯಾಗಿದ್ದಾಳೆ.

**ಪ್ರತಿಭಾವಂತೆಯ ನೃತ್ಯ ಪ್ರದರ್ಶನ**

ಕಾಲೇಜಿನಲ್ಲಿ ಅನೇಕ ನೃತ್ಯಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಗಳಿಸಿದ ಇವಳು, ಮುಂದೆ ಮನಶ್ಶಾಸ್ತ್ರ ವಿಷಯದಲ್ಲಿ ಎಂ.ಎಸ್ಸಿ ಮಾಡುವ ಗುರಿ ಹೊಂದಿದ್ದಾಳೆ. ಜೊತೆಗೆ ನೃತ್ಯದಲ್ಲಿ ಪೋಸ್ಟ್ ವಿದ್ಯುತ್ ಪರೀಕ್ಷೆಗೆ ತಯಾರಾಗುತ್ತಿದ್ದಾಳೆ ಕೂಡ. ನಾಡಿನಾದ್ಯಂತ ಅನೇಕ ದೇವಾಲಯ– ಪ್ರತಿಷ್ಠಿತ ವೇದಿಕೆಗಳಲ್ಲಿ ನೃತ್ಯಪ್ರದರ್ಶನಗಳನ್ನು ನೀಡುತ್ತಿರುವ ಚಂದನ, ತಿರುಪತಿ ಬ್ರಹ್ಮೋತ್ಸವ, ನೃತ್ಯ ನೀರಾಜನಂ–ಗುರುವಾಯೂರು, ಹಂಪಿ ಉತ್ಸವ, ಮೈಸೂರು ದಸರಾ, ನಂದಿನಿ ಉತ್ಸವ ಕೊಲ್ಲೂರು ಮೂಕಾಂಬಿಕೆ, ಮೇಲುಕೋಟೆ, ಬಪ್ಪನಾಡು ದುರ್ಗ ಪರಮೇಶ್ವರಿ, ಪೊಳಲಿ ರಾಜರಾಜೇಶ್ವರಿ, ವಾಸವಿ ಮುಂತಾದ ದೇವಾಲಯಗಳಲ್ಲಿ ನರ್ತಿಸಿದ್ದಾಳೆ.

ನೃತ್ಯ ಝೇಂಕಾರ, ಕಲ್ಪಶ್ರೀ ಆಲ್ ಇಂಡಿಯಾ ಫೆಸ್ಟಿವಲ್ ಮುಂತಾದೆಡೆ ಅಲ್ಲದೆ ಗಿನ್ನಿಸ್ ರೆಕಾರ್ಡ್ನಲ್ಲೂ ನರ್ತಿಸುವ ಅವಕಾಶ ಪಡೆದಿರುವುದು ಅವಳ ಹೆಮ್ಮೆ.

ಪ್ರತಿಭಾವಂತೆಯಾದ ಚಂದನ, ರಾಷ್ಟ್ರಸಿರಿ, ಕಲ್ಪಶ್ರೀ ನಾಟ್ಯ ಮಯೂರಿ ಮುಂತಾದ ಬಿರುದಾಂಕಿತೆ ಕೂಡ. ರಂಗಪ್ರವೇಶದ ಈ ಸುಸಂದರ್ಭದಲ್ಲಿ ಗುರು–ಶಿಷ್ಯೆಯರಿಬ್ಬರಿಗೂ ಹಾರ್ದಿಕ ಅಭಿನಂದನೆಗಳು.



# ರಾಮಾಯಣ

ದಶರಥ ಕೈಕೇಯಾದೇವಿಯರ ಸಂವಾದ

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ


ಅಂಥವನಿಗೆ ಭಯಂಕರವಾದ ಅರಣ್ಯದಲ್ಲಿ ಹದಿನಾಲ್ಕು ವರುಷಗಳು ವನವಾಸವಾಗಬೇಕೆಂದು ಹೇಗೆ ಬಯಸುತ್ತೀಯೆ ಅದೂ ಅಲ್ಲದೆ ಆತನು ನಿನ್ನ ಸೇವೆಯನ್ನು ಅತ್ಯಂತ ವಿಶ್ವಾಸಪೂರ್ವಕವಾಗಿ ಮಾಡುವಂಥವನು. ಭರತನಿಗಿಂತಲೂ ಅಧಿಕವಾಗಿ ಸೇವಾಸತ್ಕಾರಗಳನ್ನು ಮಾಡುವಂಥವನು, ಹೆತ್ತ ತಾಯಿಯ ಹಾಗೆ ನಿನ್ನನ್ನು ಅತ್ಯಂತ ಭಕ್ತಿಯಿಂದ ಕಾಣುತ್ತ ನಿನ್ನ ಸೇವೆಯನ್ನು ಮಾಡುವವನು. ಈ ವಿಷಯದಲ್ಲಿ ಆತನಿಗಿಂತಲೂ ಅಧಿಕರಾದವರೊಬ್ಬರೂ ಇಲ್ಲ! ಬಹುಮಂದಿ ಸ್ತ್ರೀಯರ ಗೋಷ್ಠಿಯಲ್ಲಾಗಲಿ ಆಶ್ರಿತರಲ್ಲಾಗಲಿ ಆತನಲ್ಲಿ ದುರ್ಗುಣವನ್ನೂ ಅಪವಾದವನ್ನೂ ನುಡಿಯುವವರಿಲ್ಲ. ಆತನು ಅಂತರಂಗ ಶುದ್ಧಿಯಿಂದ ಪ್ರಾಣಿಗಳನ್ನು ಸಂತವಿಟ್ಟುಕೊಂಡು ತನ್ನ ರಾಜ್ಯದಲ್ಲಿರುವ ಸಮಸ್ತ ಪ್ರಜೆಗಳನ್ನೂ ವಿನಯಾದಿಗುಣಗಳಿಂದ ವಶವರ್ತಿಗಳನ್ನಾಗಿ ಮಾಡಿಕೊಂಡಿದ್ದಾನೆ. ಶ್ರೀರಾಮನು ತನ್ನ ಸತ್ತ್ವದಿಂದಲೇ ಸಮಸ್ತ ಲೋಕಗಳನ್ನೂ ಜಯಿಸುವಂಥವನು. ಅನೇಕ ಬಗೆಯ ದಾನಗಳಿಂದ ಬಡವರನ್ನು ರಕ್ಷಿಸುತ್ತಾನೆ.


ಸೇವೆಯಿಂದ ಗುರುಗಳನ್ನು ವಶವರ್ತಿಗಳನ್ನಾಗಿ ಮಾಡಿಕೊಂಡಿದ್ದಾನೆ. ಧನುರ್ವಿದ್ಯಾ ಸಾಮರ್ಥ್ಯದಿಂದ ಯುದ್ಧರಂಗದಲ್ಲಿ ಸಮಸ್ತ ಶತ್ರುಗಳನ್ನೂ ಜಯಿಸುವಂಥವನು. ಆತನಲ್ಲಿ ಸಮಸ್ತ ಸತ್ಪುರುಷರ ಗುಣಗಳಿಗಿಂತಲೂ ಉತ್ತಮವಾದ ಗುಣಗಳು ಇರುವುವು. ಆಡಿದ ಮಾತಿಗೆ ತಪ್ಪಬಾರದೆಂಬ ಸತ್ಯ, ಸತ್ಪಾತ್ರವನ್ನರಿತು ಕೊಡುವ ದಾನ, ತಪಸ್ಸು, ತ್ಯಾಗಗುಣ, ಸಮಸ್ತ ಪ್ರಾಣಿಗಳಲ್ಲಿಯೂ ವಿಶ್ವಾಸ, ಮಿತ್ರತ್ವ, ಇಂದ್ರಿಯನಿಗ್ರಹ, ಋಜುಮಾರ್ಗ, ವಿದ್ಯಾಭ್ಯಾಸ, ಗುರುಸೇವೆ ಮೊದಲಾದ ಉತ್ತಮಗುಣಗಳು ಆತನಲ್ಲಿ ಸ್ವಾಭಾವಿಕವಾಗಿರುವುವು ಕೈಕೇಯಿ, ಹೀಗೇ ಋಜುಮಾರ್ಗಸಂಪನ್ನನಾಗಿ ಸಾಕ್ಷಾತ್ಪರಮಪುರುಷನಿಗೆ ಸಮಾನನಾಗಿ ವಸಿಷ್ಠಾದಿಮಹಾಮುನಿಗಳಿಗೆ ಸಮಾನವಾದ ತೇಜಸ್ಸುಳ್ಳಂಥ ಶ್ರೀರಾಮನಲ್ಲಿ ಹೇಗೆ ದ್ರೋಹವನ್ನೆಣಿಸುತ್ತೀಯೆ ಲೋಕದಲ್ಲಿ ಸಮಸ್ತ ಪ್ರಾಣಿಗಳಿಗೂ ಪ್ರಿಯವಚನಗಳನ್ನು ನುಡಿಯುವ ಅತ್ಯಂತ ಪ್ರಿಯಪುತ್ರನಾದ ಶ್ರೀರಾಮನಿಗೆ, ನಿನಗೋಸ್ಕರ ಹೇಗೆ ನಿಷ್ಠುರವಾಗಿ ನುಡಿಯಲಿ ತ್ಯಾಗಗುಣ, ಕ್ಷಮೆ, ಸತ್ಯ, ಧಮ್ಮ, ಮಾಡಿದ ಉಪಕಾರ ಗಳನ್ನು ಮರೆಯದಂಥ ಕೃತಜ್ಞತೆ, ಪ್ರಾಣಿಹಿಂಸೆ ಮಾಡದಿರುವಂಥ ಭೂತದಯೆ ಇವೇ ಮೊದಲಾದ ಸುಗುಣಗಳುಳ್ಳ ರಘುನಾಥನನ್ನು ವನಕ್ಕೆ ಕಳುಹಿಸಿದೆನಾದರೆ ನನಗೆ ಗತಿಯೇನು! ನಾನು ವೃದ್ಧನು. ನನಗೆ ಆಯುಸ್ಸು ಮುಗಿಯುತ್ತ ಬಂದಿದೆ. ಶೋಚನೀಯನಾಗಿ ಮತ್ತೆ ಮತ್ತೆ ಹಂಬಲಿಸುವ ನನ್ನಲ್ಲಿ ಕರುಣಿಸು. ಈ ವೈರಬುದ್ಧಿಯನ್ನು ಬಿಡು. ನಿನಗೆ ಸಮುದ್ರಪರ್ಯಂತವಾದ ಈ ಭೂಮಿಯಲ್ಲಿರುವ ಸಮಸ್ತ ವಸ್ತುಗಳನ್ನೂ ತರಿಸಿಕೊಡುತ್ತೇನೆ. ಈ ಕೇಡುಬುದ್ಧಿಯನ್ನು ಬಿಡು. ನಿನಗೆ ಕೈ ಮುಗಿಯುತ್ತೇನೆ. ನಿನ್ನ ಪಾದಗಳಿಗೆ ನಮಸ್ಕಾರವನ್ನು ಮಾಡುತ್ತೇನೆ. ಶ್ರೀರಾಮನಲ್ಲಿ

ಮುಂದುವರಿಯುವುದು...

# ಕ್ಯಾಲ್ಸಿಯಂ ನಮ್ಮ ದೇಹಕ್ಕೆ ಬಹಳ ಮುಖ್ಯ

• ಉದಯವಾಹಿನಿ ಬೆಂಗಳೂರು





ಕ್ಯಾಲ್ಸಿಯಂ ನಮ್ಮ ದೇಹಕ್ಕೆ ಬಹಳ ಮುಖ್ಯವಾದ ಖನಿಜವಾಗಿದ್ದು ಇದು ಮೂಳೆಗಳು ಮತ್ತು ಹಲ್ಲುಗಳನ್ನ ಬಲವಾಗಿಡಲು ಸಹಾಯ ಮಾಡುತ್ತದೆ ಮತ್ತು ನಮ್ಮ ರಕ್ತದೊತ್ತಡ, ಸ್ನಾಯುಗಳು, ನರಮಂಡಲದ ಸರಿಯಾದ ಕಾರ್ಯನಿರ್ವಹಣೆಗೆ ಸಹಾಯ ಮಾಡುತ್ತದೆ.



ದೇಹದಲ್ಲಿ ಕ್ಯಾಲ್ಸಿಯಂ ಕೊರತೆಯಿದ್ದರೆ, ಮೂಳೆಗಳು ದುರ್ಬಲವಾಗುತ್ತವೆ ಮತ್ತು ವಿವಿಧ ಆರೋಗ್ಯ ಸಮಸ್ಯೆಗಳನ್ನ ಎದುರಿಸಬೇಕಾಗುತ್ತದೆ. ಆದ್ರೆ, ದೇಹದಿಂದ ಕ್ಯಾಲ್ಸಿಯಂ ತೆಗೆದುಹಾಕುವ ಮತ್ತು ಮೂಳೆಗಳನ್ನ ದುರ್ಬಲಗೊಳಿಸುವ ಕೆಲವು ಆಹಾರಗಳಿವೆ ಎಂದು ನಿಮಗೆ ತಿಳಿದಿದೆಯೇ?

**ತಂಪು ಪಾನೀಯ (ಸೋಡಾ):** ತಂಪು ಪಾನೀಯಗಳು, ವಿಶೇಷವಾಗಿ ತಂಪು ಪಾನೀಯಗಳು ಪ್ರತಿ ಪಾರ್ಟಿ ಈ ಅಥವಾ ಕಾರ್ಯದ ಭಾಗವಾಗುತ್ತವೆ. ಆದಾಗ್ಯೂ, ಅವುಗಳನ್ನ ಹೆಚ್ಚು ಕುಡಿಯುವುದರಿಂದ ದೇಹದಲ್ಲಿ ಕ್ಯಾಲ್ಸಿಯಂ ಕೊರತೆಗೆ ಕಾರಣವಾಗಬಹುದು. ಈ ಪಾನೀಯಗಳಲ್ಲಿ ಫಾಸ್ಪರಿಕ್ ಆಮ್ಲವು ಕಂಡುಬರುತ್ತದೆ, ಇದು ದೇಹದಿಂದ ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಯನ್ನ ತಡೆಯುತ್ತದೆ.

ಪರಿಣಾಮವಾಗಿ, ಮೂಳೆಗಳಲ್ಲಿನ ಕ್ಯಾಲ್ಸಿಯಂ ಕ್ರಮೇಣ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಆದ್ದರಿಂದ, ನಿಮ್ಮ ಮೂಳೆಗಳನ್ನ ಆರೋಗ್ಯಕರವಾಗಿಡಲು ನೀವು ಬಯಸಿದರೆ, ತಂಪು ಪಾನೀಯಗಳ ಸೇವನೆಯನ್ನ ಕಡಿಮೆ ಮಾಡಿ.

**ಕೆಂಪು ಮತ್ತು ಸಂಸ್ಕರಿಸಿದ ಮಾಂಸಗಳು**

**ಕೆಂಪು ಮತ್ತು ಸಂಸ್ಕರಿಸಿದ ಮಾಂಸ.!:** ಕೆಂಪು ಮಾಂಸ (ಸ್ನಾಯು ಮಾಂಸದಂತಹ) ಮತ್ತು ಸಂಸ್ಕರಿಸಿದ ಮಾಂಸಗಳ (ಸಾಸೇಜ್, ಬೇಕನ್, ಹಾಟ್ ಡಾಗ್ ಗಳಂತಹ) ಅತಿಯಾದ ಸೇವನೆಯು ಯೂರಿಕ್ ಆಮ್ಲಕ್ಕೆ ಕಾರಣವಾಗುತ್ತದೆ, ಇದು ಮೂಳೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಈ ವಸ್ತುಗಳು ದೇಹದಲ್ಲಿ ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಯ ಮೇಲೆ ಪರಿಣಾಮ ಬೀರುತ್ತವೆ ಮತ್ತು ಮೂಳೆಗಳನ್ನು ದುರ್ಬಲಗೊಳಿಸುತ್ತವೆ. ಆದ್ದರಿಂದ, ನಿಮ್ಮ ಮೂಳೆಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ನೀವು ಬಯಸಿದರೆ, ನೀವು ಈ ಆಹಾರಗಳ ಸೇವನೆಯನ್ನು ಮಿತಿಗೊಳಿಸಬೇಕು.

**ಕೇಕ್'ಗಳು, ಕ್ಯಾಂಡಿಗಳು ಮತ್ತು ಕುಕೀಗಳು.!:** ಕೇಕ್‌ಗಳು, ಕ್ಯಾಂಡಿಗಳು, ಕುಕೀಗಳಂತಹ ಸಿಹಿ ಮತ್ತು ಸಂಸ್ಕರಿಸಿದ ಆಹಾರಗಳು ಹೆಚ್ಚುವರಿ ಸಕ್ಕರೆ ಮತ್ತು ಸಂಸ್ಕರಿಸಿದ ಕಾರ್ಬೋಹೈಡ್ರೇಟ್'ಗಳನ್ನ ಹೊಂದಿರುತ್ತವೆ, ಇದು ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಗೆ ಅಡ್ಡಿಯಾಗಬಹುದು. ಇದಲ್ಲದೆ, ಈ ಆಹಾರಗಳು ದೇಹದಲ್ಲಿ ಉರಿಯೂತವನ್ನ ಉಂಟು ಮಾಡಬಹುದು. ಇದು ಮೂಳೆಗಳನ್ನ ಮತ್ತಷ್ಟು ದುರ್ಬಲಗೊಳಿಸುತ್ತದೆ. ಆದ್ದರಿಂದ, ಈ ಹೆಚ್ಚಿನ ಸಿಹಿತಿಂಡಿಗಳನ್ನ ನಿಯಮಿತವಾಗಿ ತಿನ್ನುವುದನ್ನ ತಪ್ಪಿಸಿ ಮತ್ತು ಆರೋಗ್ಯಕರ ತಿಂಡಿಗಳನ್ನ ಆರಿಸಿ.

**ಚಹಾ.!:** ಚಹಾವು ಕೆಫೀನ್ ಹೊಂದಿರುತ್ತದೆ, ಇದು ದೇಹವು ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಯನ್ನ ಕಡಿಮೆ ಮಾಡುತ್ತದೆ. ನೀವು ಹೆಚ್ಚು ಚಹಾ ಕುಡಿದರೆ, ಅದು ನಿಮ್ಮ ಮೂಳೆಗಳಿಗೆ ಅಪಾಯಕಾರಿ. ವಿಶೇಷವಾಗಿ ಕೆಫೀನ್ ಅಧಿಕವಾಗಿರುವ ಚಹಾ ಅಥವಾ ಕಾಫಿಯನ್ನ ಸೇವಿಸುವುದರಿಂದ ಮೂಳೆಗಳಿಂದ ಕ್ಯಾಲ್ಸಿಯಂ ತೆಗೆದುಹಾಕುತ್ತದೆ, ಇದರಿಂದಾಗಿ ಮೂಳೆಗಳು ದುರ್ಬಲಗೊಳ್ಳುತ್ತವೆ. ಆದ್ದರಿಂದ, ನಿಮ್ಮ ಚಹಾ ಸೇವನೆಯನ್ನು ಮಿತಿಗೊಳಿಸಿ ಮತ್ತು ಹೆಚ್ಚು ನೀರು ಅಥವಾ ಇತರ ಕ್ಯಾಲ್ಸಿಯಂ ಭರಿತ ಪಾನೀಯಗಳನ್ನ ಕುಡಿಯಿರಿ.

- ತಂಪು ಪಾನೀಯಗಳು
- ಕೆಂಪು ಮತ್ತು ಸಂಸ್ಕರಿಸಿದ ಮಾಂಸಗಳು
- ಕೇಕ್, ಕ್ಯಾಂಡಿ, ಕುಕೀಗಳು
- ಹೆಚ್ಚು ಚಹಾ ಮತ್ತು ಕಾಫಿ
- ಅತಿಯಾದ ಆಲ್ಕೋಹಾಲ್
- ಎಣ್ಣೆ ಮತ್ತು ಕರಿದ ಆಹಾರಗಳು



**ಎಣ್ಣೆಯುಕ್ತ ಪದಾರ್ಥಗಳು.!:** ಸಮೋಸಾ, ಹುರಿದ ಚಿಕನ್, ಪಕೋಡಾಗಳಂತಹ ಎಣ್ಣೆಯುಕ್ತ ಪದಾರ್ಥಗಳು ಮೂಳೆಗಳಿಗೆ ಹಾನಿಕಾರಕ ಇವುಗಳಲ್ಲಿ ಕೊಬ್ಬು ಮತ್ತು ಅಸಮತೋಲಿತ ಕೊಬ್ಬುಗಳು ಹೆಚ್ಚಾಗಿರುತ್ತವೆ, ಇದು ದೇಹದಲ್ಲಿ ಉರಿಯೂತವನ್ನು ಉಂಟುಮಾಡುತ್ತದೆ.

**ಮಾದಕ ಪಾನೀಯ.!**

**ಅತಿಯಾದ ಆಲ್ಕೋಹಾಲ್ ಸೇವನೆಯು ಮೂಳೆಯ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಆಲ್ಕೋಹಾಲ್ ದೇಹದಲ್ಲಿ ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಯನ್ನ ಕಡಿಮೆ ಮಾಡುತ್ತದೆ ಮತ್ತು ಮೂಳೆಗಳನ್ನ ದುರ್ಬಲಗೊಳಿಸುತ್ತದೆ. ಇದು ಮೂಳೆಗಳು ಕ್ಯಾಲ್ಸಿಯಂ ಆಗಲು ಕಾರಣವಾಗುತ್ತದೆ ಮತ್ತು ಮೂಳೆ ಮುರಿತದ ಅಪಾಯವನ್ನ ಹೆಚ್ಚಿಸುತ್ತದೆ. ನಿಮ್ಮ ಮೂಳೆಗಳು ಬಲವಾಗಿರಬೇಕು ಎಂದು ನೀವು ಬಯಸಿದರೆ, ನಿಮ್ಮ ಆಲೋಹಾಲ್ ಸೇವನೆಯನ್ನ ಮಿತಿಗೊಳಿಸಿ.**

ಪರಿಣಾಮವಾಗಿ, ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಯ ಮೇಲೆ ಪರಿಣಾಮ ಬೀರಬಹುದು, ಇದರಿಂದಾಗಿ ಮೂಳೆಗಳು ದುರ್ಬಲವಾಗುತ್ತವೆ. ಈ ಆಹಾರಗಳನ್ನ ಸೀಮಿತ ಪ್ರಮಾಣದಲ್ಲಿ ಸೇವಿಸಿ ಮತ್ತು ಆರೋಗ್ಯಕರ, ಲಘು ಊಟವನ್ನ ಸೇವಿಸಿ. ಕ್ಯಾಲ್ಸಿಯಂ ಮೂಳೆಗಳಿಗೆ ಮುಖ್ಯವಾಗಿದೆ ಮತ್ತು ಅದರ ಸರಿಯಾದ ಹೀರಿಕೊಳ್ಳುವಿಕೆಗೆ ಸಮತೋಲಿತ ಆಹಾರದ ಅಗತ್ಯವಿದೆ. ನಿಮ್ಮ ಮೂಳೆಗಳನ್ನು ಬಲವಾಗಿ ಮತ್ತು ಆರೋಗ್ಯಕರವಾಗಿಡಲು ನೀವು ಬಯಸಿದರೆ, ಈ ಆಹಾರಗಳನ್ನ ಮಿತಿಗೊಳಿಸಿ ಅಥವಾ ಸಂಪೂರ್ಣವಾಗಿ ತಪ್ಪಿಸಿ. ಬದಲಿಗೆ, ಕ್ಯಾಲ್ಸಿಯಂ ಭರಿತ ಆಹಾರಗಳಾದ ಹಾಲು, ಮೊಸರು, ಸೊಪ್ಪು ತರಕಾರಿಗಳು, ತಾಜಾ ಹಣ್ಣುಗಳು, ಬೀಜಗಳು ಮತ್ತು ಕಾಳುಗಳನ್ನು ಸೇವಿಸಿ. ನಿಯಮಿತವಾಗಿ ವ್ಯಾಯಾಮ ಮಾಡುವ ಮೂಲಕ ಮತ್ತು ಮೂಳೆಯನ್ನ ಬಲಪಡಿಸುವ ಅಭ್ಯಾಸವನ್ನ ಬೆಳೆಸಿಕೊಳ್ಳುವ ಮೂಲಕ ನಿಮ್ಮ ಮೂಳೆಗಳನ್ನ ಆರೋಗ್ಯಕರವಾಗಿಡಬಹುದು.

# ಪ್ರಾಮಾಣಿಕತೆ ರೂಡಿಸಿಕೊಳ್ಳಿ: ಲೋಕಾಯುಕ್ತ ನ್ಯಾಯಮೂರ್ತಿ

## • ವಿದ್ಯಾರ್ಥಿ ದೆಸೆಯಿಂದಲೇ ನಿಮ್ಮ ಜೀವನದ ದ್ಯಯೋದ್ದೇಶಗಳ ಬಗ್ಗೆ ನಿಖರತೆ ಇರಲಿ: ಬಿ ಎಸ್ ಪಾಟೀಲ

• ಉದಯವಾಹಿನಿ ಗದಗ

ವಿದ್ಯಾರ್ಥಿ ದೆಸೆಯಿಂದಲೇ ನಿಮ್ಮ ಜೀವನದ ಧ್ಯೇಯೋದ್ದೇಶಗಳ ಬಗ್ಗೆ ನಿಖರತೆ ಇರಲಿ. ನಿಮ್ಮ ಉದ್ದೇಶ ಹಾಗೂ ದ್ಯಯೋದ್ದೇಶಗಳ ಸಾಕಾರಕ್ಕೆ ಈಗಿನಿಂದಲೇ ಪರಿಶ್ರಮ ಹಾಕಬೇಕು, ಜೊತೆಗೆ ಪ್ರಾಮಾಣಿಕತೆಯನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳೋ ಮೂಲಕ ಸಾಧನೆ ನಿಮ್ಮದಾಗಿಸಿಕೊಳ್ಳಿ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ ಎಸ್ ಪಾಟೀಲ ಅವರು ಹೇಳಿದರು.

**ದೈನಂದಿನ ಕರ್ತವ್ಯದಲ್ಲಿ ಪ್ರಾಮಾಣಿಕತೆ**

ಗದಗ ನಾಗಾವಿಯಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಜರುಗಿದ ಉತ್ತಮ ಆಡಳಿತದಲ್ಲಿ ಲೋಕಾಯುಕ್ತ ಪಾತ್ರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಉತ್ತಮ ಆಡಳಿತ ನೀಡುವ ಸದುದ್ದೇಶದಿಂದ ಯುವ ಪೀಳಿಗೆ ಸಾರ್ವಜನಿಕ ಸೇವೆಗೆ ಆಗಮಿಸಬೇಕು ದೈನಂದಿನ ಕರ್ತವ್ಯದಲ್ಲಿ ಪ್ರಾಮಾಣಿಕತೆ ಅಳವಡಿಸಿಕೊಳ್ಳುವ ಮೂಲಕ ಸಾಧನೆ ಮಾಡುವ ಹುಮ್ಮಸ್ಸು ನಿಮ್ಮದಾಗಿಸಿಕೊಳ್ಳಬೇಕು ನಿಮ್ಮ ವಿಚಾರಧಾರೆಗಳು ಗುಣಮಟ್ಟದಿಂದ ಹಾಗೂ ಮೇಲ್ಸ ತರದ ವಿಚಾರಗಳಿಂದ ಕೂಡಿರಬೇಕು ಅವುಗಳ ಸಾಕಾರಕ್ಕೆ ಕಠಿಣ ಪರಿಶ್ರಮ ತೆಗೆದುಕೊಳ್ಳಬೇಕು ಆಗ ಮಾತ್ರ ಜೀವನದಲ್ಲಿ ಸಾಧನೆ ನಿಮ್ಮದಾಗಲಿದೆ ನೀವು ಒಬ್ಬ ಮಾದರಿ ಆಡಳಿತ ನಿಮ್ಮದಾಗಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಹಳ್ಳಿಗಳ ಅಭಿವೃದ್ಧಿಯಿಂದ ಮಾತ್ರ ದೇಶದ ಅಭಿವೃದ್ಧಿ. ಹುಟ್ಟಿ ಬೆಳೆದ ಹಳ್ಳಿಗಳಿಗೆ ತೆರಳಿ ಅಭಿವೃದ್ಧಿ ಕಾರ್ಯ ಮಾಡುವ ಗುಣ ಅಧಿಕಾರಿ ವರ್ಗ ಪ್ರಾಮಾಣಿಕವಾಗಿ ಬೆಳೆಸಿಕೊಂಡಾಗ ಅಭಿವೃದ್ಧಿ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು. ಅಧಿಕಾರಿಗಳಾದವರು ತಾವು ಹುಟ್ಟಿ ಬೆಳೆದು ಬಂದ ಗ್ರಾಮಗಳಿಗೆ ತೆರಳಿ ಅಲ್ಲಿನ ಪರಿಸ್ಥಿತಿ ಅವಲೋಕಿಸಿ ಹಳ್ಳಿಗಳ ಪ್ರಗತಿಗೆ ಮನಸ್ಸು ಮಾಡಬೇಕು ಎಂದರು.

ಸರ್ಕಾರ ಸ್ವಚ್ಛತೆಗೆ ಒತ್ತುಕೊಟ್ಟು ಕಾರ್ಯನಿರ್ವಹಿಸುತ್ತಿದೆ ಸಾರ್ವಜನಿಕರು ಸ್ವಚ್ಛತೆಯಡೆಗೆ ಜಾಗೃತಿರಾಗಿಸಬೇಕು. ಶೌಚಾಲಯ ನಿರ್ಮಿಸುತ್ತಿದೆ ಅದನ್ನು ದಿನನಿತ್ಯ ಬಳಸುವ ಮನೋಭಾವನೆ ಮೂಡುವಂತೆ ಬದಲಾವಣೆಯಾಗಬೇಕು ಎಂದರು. ಜಿಲ್ಲಾ ಪಂಚಾಯತಿಯಿಂದ ಶೌಚಾಲಯಗಳ ಅವ್ಯವಸ್ಥೆಗಳ ಕುರಿತು ಸ್ವಯಂ ಪ್ರಕರಣ ದಾಖಲಿಸುವ ಮೂಲಕ ಗ್ರಾಮೀಣಾಭಿವೃದ್ಧಿಗೆ ಇರುವ ಎಲ್ಲಾ ಕ್ರಮಗಳನ್ನು ಲೋಕಾಯುಕ್ತ ಇಲಾಖೆ ಕೈಗೊಳ್ಳುತ್ತಿದೆ ಎಂದು ತಿಳಿಸಿದರು.

ಬೆಂಗಳೂರಿನ ಬಿಬಿಎಂಪಿಯ 8 ಪ್ರಾದೇಶಿಕ ಕೇಂದ್ರಗಳಲ್ಲಿಯೂ ಕಸವಿಲೇವಾರಿ ಅವ್ಯವಸ್ಥೆ ಕುರಿತು ಸ್ವಯಂ ಪ್ರಕರಣ ದಾಖಲಿಸುವ ಮೂಲಕ ನಿಗಾ ವಹಿಸಲಾಗುತ್ತಿದೆ. ಬಿಬಿಎಂಪಿ ಅಧಿಕಾರಿಗಳಿಂದ ಸ್ವಚ್ಛತೆಗೆ ಆದ್ಯತೆ ನೀಡುವಂತೆ ತಿಳಿಸುವ ಮೂಲಕ ಸಾವಿರಾರು ಟನ್ ಕಸ ವಿಲೇವಾರಿ ಸರಿಯಾಗಿ ಆಗುವಂತೆ ನೋಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಆಡಳಿತದಲ್ಲಿ ಅವ್ಯವಹಾರ ಭ್ರಷ್ಟಾಚಾರ ನಡೆದಲ್ಲಿ ಅದನ್ನು ಸರಿಪಡಿಸಲು ಲೋಕಾಯುಕ್ತ ಸಂಸ್ಥೆಯನ್ನು 1984ರಲ್ಲಿ ಆರಂಭಿಸಲಾಗಿದೆ.

ಆಡಳಿತದಲ್ಲಿ ದುರಾಡಳಿತ ಕಂಡುಹಿಡಿಯಲು ಸಂಸ್ಥೆ ಸ್ವತಂತ್ರವಾಗಿದೆ. ಇದರ ಕಾರ್ಯ ವ್ಯಾಪ್ತಿ ಅಪರಮಿತವಾಗಿದ್ದು ಎಂದು ಹೇಳಿದರು.

ಲೋಕಾಯುಕ್ತನಾಗಿ ಅಧಿಕಾರ ವಹಿಸಿಕೊಂಡಾಗ ರಾಜ್ಯದಲ್ಲಿ ಒಟ್ಟು 9000 ಪ್ರಕರಣಗಳು ಪೆಂಡಿಂಗ್ ಇದ್ದವು, ನಂತರದಲ್ಲಿ ಹೊಸ ಪ್ರಕರಣಗಳ ನೊಂದಾವಣೆ ಅಧಿಕವಾಗುತ್ತಾ ಸಾಗಿತು, ಸದ್ಯ 24,000 ಪ್ರಕರಣಗಳಿದ್ದು, ಈಗಾಗಲೇ 11000 ಪ್ರಕರಣಗಳನ್ನು ವಿಲೇ ಮಾಡಲಾಗಿದೆ.

ಅಲ್ಲದೆ 400ಕ್ಕೂ ಅಧಿಕ ಪ್ರಕರಣಗಳಲ್ಲಿ ಸರ್ಚ್ ವಾರಂಟ್ ಜಾರಿ ಮಾಡುವ ಮೂಲಕ ಕ್ರಮ ವಹಿಸಲಾಗಿದೆ ಎಂದು ಲೋಕಾಯುಕ್ತ ಸಂಸ್ಥೆಯ ಕುರಿತು ಲೋಕಾಯುಕ್ತ ನ್ಯಾ. ಬಿ ಎಸ್ ಪಾಟೀಲ ಅವರು ತಿಳಿಸಿದರು.



ಉದಯವಾಹಿನಿ ಚಿತ್ರ

**ಅನಿರೀಕ್ಷಿತ ಭೇಟಿ**

**ಲೋಕಾಯುಕ್ತ ಸಂಸ್ಥೆಗಳನ್ನು ಬೇರೆ ರಾಜ್ಯಗಳಿಗೆ ಹೋಲಿಸಿದಲ್ಲಿ, ಕರ್ನಾಟಕದಲ್ಲಿ ಲೋಕಾಯುಕ್ತ ಸಂಸ್ಥೆಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಮೂರರಿಂದ ನಾಲ್ಕು ಪಟ್ಟು ಒದಗಿಸಲಾಗಿದೆ. 2022 ರಲ್ಲಿ ಲೋಕಾಯುಕ್ತರಾಗಿ ಅಧಿಕಾರ ಸ್ವೀಕರಿಸಿದ ಮೇಲೆ ನಾನು 26 ಅಂಶಗಳ ಮಾರ್ಗ ಸೂಚಿಗಳನ್ನು ನೀಡುವ ಮೂಲಕ ಸರ್ಕಾರಿ ಇಲಾಖೆಗಳಿಗೆ ನಿರೀಕ್ಷಿತ ಅನಿರೀಕ್ಷಿತ ಭೇಟಿ ನೀಡಿ ದುರಾಡಳಿತದ ಬಗ್ಗೆ ವರದಿ ಮಾಡುವಂತೆ ಜಿಲ್ಲಾ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.**

> **ಸಾಧನೆಗೆ ಕಠಿಣಶ್ರಮ 100% ಪ್ರಯತ್ನ ಇರಲಿ. ಲೋಕಾಯುಕ್ತರ ನ್ಯಾಯಮೂರ್ತಿ ಬಿ ಎಸ್ ಪಾಟೀಲ ಅವರ ಮಾತುಗಳು ನಿಮ್ಮೆಲ್ಲರಿಗೆ ಪ್ರೇರಣೆಯಾಗಿ, ಉತ್ತಮ ಆಡಳಿತದಲ್ಲಿ ನಾವೆಲ್ಲರೂ ಭಾಗಿಯಾಗೋಣ. ಗಾಂಧೀಜಿಯವರ ಗ್ರಾಮ ಸ್ವರಾಜ್ ಪರಿಕಲ್ಪನೆ ಸಾಕಾರಕ್ಕೆ ಪಾತ್ರರಾಗೋಣ ಎಂದರು. ವೇದಿಕೆಯಲ್ಲಿ ಲೋಕಾಯುಕ್ತ ಎಸ್.ಪಿ ಹನಮಂತರಾಯ, ವಿವಿ ಹಣಕಾಸು ಅಧಿಕಾರಿ ಪ್ರಶಾಂತ್ ಜೆಸಿ ಉಪಸ್ಥಿತರಿದ್ದರು. ವಿವಿ ಸಹಾಯಕ ನಿರ್ದೇಶಕ ಅಬ್ದುಲ್ ಅಜೀಜ ಮುಲ್ಲಾ ಸ್ವಾಗತಿಸಿದರು. ಉಪನ್ಯಾಸಕ ಮೆಹರ್ವಾಡೆ ವಂದಿಸಿದರು -ಪ್ರೊ. ಸುರೇಶ್ ನಾಡಗೌಡರ, ವಿಶ್ವವಿದ್ಯಾಲಯದ ಕುಲಪತಿ**

# ಮಿನಿ ನ್ಯೂಸ್

## ಅಯೋಧ್ಯೆಗೆ ತೆರಳಿದ್ದ ಕನ್ನಡಿಗರ ಕಾರಿನ ಗ್ಲಾಸ್ ಒಡೆದು ಕಳ್ಳತನ

• ಉದಯವಾಹಿನಿ ಧಾರವಾಡ

ಇಲ್ಲಿಂದ ಅಯೋಧ್ಯೆಗೆ ತೆರಳಿದ್ದಂತ ಕರ್ನಾಟಕದ ಎರಡು ಕುಟುಂಬಗಳ ಕಾರಿನ ಗ್ಲಾಸ್ ಒಡೆದಿರುವಂತ ಕಳ್ಳರು, 10 ಮೊಬೈಲ್, 20,000 ನಗದು ದೋಚಿ ಪರಾರಿಯಾಗಿರುವಂತ ಘಟನೆ ಅಯೋಧ್ಯೆಯಲ್ಲಿ ನಡೆದಿದೆ. ಉತ್ತರ ಪ್ರದೇಶದ ಅಯೋಧ್ಯೆಗೆ ಧಾರವಾಡದಿಂದ 2 ಕುಟುಂಬಗಳು ಕಾರಿನಲ್ಲಿ ತೆರಳಿದ್ದರು. ಧಾರವಾಡದ ಶೆಟ್ಟರ್ ಕಾಲೋನಿಯ ಅರುಣಕುಮಾರ ಬಡಿಗೇರ ಹಾಗೂ ಮಾಳಮಡ್ಡಿಯ ಬಸವರಾಜ್ ಕೋಟ್ಯಾಳ್ ಕುಟುಂಬಸ್ಥರು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳಕ್ಕೆ ತೆರಳಿ, ಪುಣ್ಯ ಸ್ನಾನ ಮಾಡಿದ್ದರು. ಇನ್ನೂ ಪ್ರಯಾಗ್ ರಾಜ್ ನಿಂದ ಅಯೋಧ್ಯೆಗೆ ತೆರಳಿದಂತ ಕುಟುಂಬಸ್ಥರು, ಕಾರು ಪಾರ್ಕಿಂಗ್ ಮಾಡಿ, ಅಯೋಧ್ಯೆ ರಾಮನ ದರ್ಶನಕ್ಕೆ ತೆರಳಿದ್ದರು. ಆ ಬಳಿಕ ಕಾರಿನ ಬಳಿ ಬಂದು ನೋಡಿದಾಗ ಗ್ಲ್ಯಾಸ್ ಹೊಡೆದು, 10 ಮೊಬೈಲ್, 20,000 ರೂ ಹಣ ಹಾಗೂ ಎಟಿಎಂ ಕಾರ್ಡ್ ಸೇರಿದಂತೆ ಬಟ್ಟೆಗಳನ್ನು ಕದೀಮರು ಕದ್ದೊಯ್ದಿದ್ದಾರೆ. ಅಯೋಧ್ಯೆಯಲ್ಲಿ ಮೊಬೈಲ್, ಹಣ ಕಳೆದುಕೊಂಡಿರುವಂತ ಧಾರವಾಡದ ಕನ್ನಡಿಗರ ಕುಟುಂಬಸ್ಥರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಲ್ಲದೇ ಕುಂಭಮೇಳಕ್ಕೆ ಹೋಗುವಂತ ಕನ್ನಡಿಗರು ಎಚ್ಚರಿಕೆಯಿಂದ ಇರುವಂತೆ ಮನವಿ ಮಾಡಿದ್ದಾರೆ.

**10 ಮೊಬೈಲ್, 20,000 ರೂ. ದೋಚಿದ ಖದೀಮರು**

## ಸಂತ ಶ್ರೀ ಶಿರೋಮಣಿ ರವಿದಾಸ ಮಹಾರಾಜ ರವರ 648 ನೇ ಜಯಂತಿ


• ಉದಯವಾಹಿನಿ ಬೀದರ

ಸಂತ ಶ್ರೀ ಶಿರೋಮಣಿ ರವಿದಾಸ ಮಹಾರಾಜ ರವರ 648 ನೇ ಜಯಂತಿಯ ಉತ್ಸವವನ್ನು ನಗರದ ಮಂಗಲಪೇಟ್‌ದಲ್ಲಿರುವ ಹರಳಯ್ಯ ಸಮಾಜದ ಭವನದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಸಂತ ಶ್ರೀ ಶಿರೋಮಣಿ ರವಿದಾಸ ಮಹಾರಾಜ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು ಹಾಗೂ ಅವರ ಜೀವನ ಚರಿತ್ರೆ ಬಗ್ಗೆ ಪ್ರವಚನ ನೀಡಲಾಯಿತು.

ಸಂದರ್ಭದಲ್ಲಿ ಸುಭಾಷ್ ಹಮಿಲ್ಪುರ,ಸಂಜು ದಾಮಾ,ರಾಜಕುಮಾರ ಟಿಳೆಕರ,ಗಾಂಧಿ ನಿನ್ನೆಕರ,ವಾಮನ ರಾವ್ ಕಾಂಬ್ಳೆ,ವಿದ್ಯಾ ತುಗಾವೆ, ಅಂಬಿಕಾ ದಾಮಾ, ಭಾನುದಾಸ್ ಕಾಂಬ್ಳೆ,ಸುಭಾಶ ಮದರ್ಸಾ, ಅಂಬದಾಸ ಹಮಿಲ್ಪುರ್ ಸೇರಿದಂತೆ ಹರಳಯ್ಯ ಸಮಾಜದ ಬಾಂಧವರು ಹಾಗೂ ಅಕ್ಕ, ತಂಗಿಯರು, ಕಿರಿಯರು ಮತ್ತು ಹಿರಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು.

# ಸೋಶಿಯಲ್ ಮೀಡಿಯಾದಲ್ಲಿ ಹವಾ ಮಾಡುತ್ತಿರುವ ಆಮಂತ್ರಣ ಪತ್ರಿಕೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ಯಾದಗಿರಿ

ಕೆಲವರು ಹಳ್ಳಿಯಲ್ಲಿ 2 ಪಕ್ಷಗಳಿಗೆ ಸಂಬಂಧಿಸಿದ ಜನರು ಪಕ್ಷದ, ಪ್ರಮುಖರ, ಪೂಜ್ಯರ ಹೆಸರನ್ನು ಬರೆದು ಆಮಂತ್ರಣ ಪತ್ರಿಕೆ ತಯಾರಿಸುವುದು ಉಂಟು. ಇನ್ನು ಚುನಾವಣೆ ಸಮೀಪಿಸಿದ ಮದುವೆಯಲ್ಲಿ ಕಡ್ಡಾಯ ಮತದಾನದ ವಾಕ್ಯ ಬಳಸುವುದುಂಟು. ಆದರೆ ಸಮಾಜಮುಖಿ ಯುವಕನಾದ ಸ್ಥಳೀಯ ಮಾಣಿಕರಾಜ ಬಡಿಗೇರ ಕೆಂಭಾವಿ ಅವರು ಇದೇ 19 ರಂದು ಜರುಗಲಿರುವ ತನ್ನ ಮದುವೆ ಆಮಂತ್ರಣ ಪತ್ರಿಕೆಯಲ್ಲಿ ಸಮಾಜದಲ್ಲಿ ಆಗಬೇಕಾದ ಪಂಚ ಪರಿವರ್ತನೆಗಳನ್ನು ವಿವರಗಳನ್ನು ಮುದ್ರಿಸಿ ಎಲ್ಲರನ್ನು ಮದುವೆಗೆ ಆಮಂತ್ರಿಸಿದ್ದಾನೆ. ಇದು ಎಲ್ಲರ ಗಮನ ಸೆಳೆಯುತ್ತಿದೆ.

ಪರಿಸರ ಸಂರಕ್ಷಣೆ, ಕುಟುಂಬ ಪ್ರಭೋದನಿ, ಸಮರಸತೆ, ಸ್ವದೇಶಿ ಜೀವನ ಶೈಲಿ, ನಾಗರಿಕ ಕರ್ತವ್ಯಗಳ ಕುರಿತು ಜಾಗೃತಿ ಮೂಡಿಸಿದ್ದಾನೆ. ಪ್ರತಿಯೊಬ್ಬ ಪ್ರಜೆಯ ಕರ್ತವ್ಯ, ರಾಷ್ಟ್ರಕ್ಕೆ ನೀಡುವ ಕೊಡುಗೆ, ಬೀದಿ ದೀಪ, ನಲ್ಲಿ ನೀರು, ನಾಮಫಲಕ, ರಸ್ತೆಗಳ ಬಳಕೆ, ರಾಷ್ಟ್ರೀಯ ಸಂಪತ್ತು ರಕ್ಷಣೆ ನಮ್ಮೆಲ್ಲರ ಕರ್ತವ್ಯ ಎನ್ನುವ ಸಂದೇಶ ಮೂಡಿಸುವ ಕೆಲಸ ಮದುವೆ ಆಮಂತ್ರಣ ಪತ್ರಿಕೆಯಲ್ಲಿ ಮಾಡಿದ್ದಾನೆ.

**ವಸುದೈವ ಕುಟುಂಬಕಂ;** ಕುಟುಂಬಗಳೂ ಸಮಾಜ ಹಾಗೂ ರಾಷ್ಟ್ರ ಜೀವನದ ಅವಿಭಾಜ್ಯ ಅಂಗವಾಗಿವೆ. ಹೀಗಾಗಿ ಕುಟುಂಬ ಬಲಿಷ್ಠವಾಗರಬೇಕು. ಪರಿಸರ ವಿಷಯದಲ್ಲಿ ಪ್ಲಾಸ್ಟಿಕ್ ಬಳಕೆ, ಕುಗ್ಗುತ್ತಿರುವ ಹಸಿರು ಹೊದಿಕೆ, ನೀರಿನ ಉಳಿಕೆ ಹಾಗು ಬಳಕೆಗೆ ಜಾಗೃತ ಸಮಾಜ ಪರಿಹಾರ ಕಂಡುಕೊಳ್ಳಬೇಕು ಎಂದು ತಮ್ಮ ಮದುವೆ ಆಮಂತ್ರಣದಲ್ಲಿ ತಮ್ಮ ಬಂಧುಗಳನ್ನು, ಆತ್ಮೀಯರನ್ನು ಆಹ್ವಾನಿಸಿದ್ದಾನೆ.

ಮದುವೆ ಆಮಂತ್ರಣ ನೋಡಿ ಯಾವಾಗ, ಸರಿ ಬರುತ್ತೇವೆ ಎಂದು ಕೆಳಗಡೆ ಇಡುವ ಹಾಗಿಲ್ಲಾ, ಎಲ್ಲರು ಒಂದು ಬಾರಿ ಕನ್ನಡಕ ಮೂಗಿಗೇರಿಸಿ, ನೋಡುವಂತೆ, ಯೋಚನೆಗೆ ಒಳಪಡಿಸುವ ಶ್ಲಾಘನೀಯ ಕೆಲಸ ಮಾಡಿದ್ದಾನೆ. ಇದೀಗ ಎಲ್ಲೆಡೆ ಮಾಣಿಕರಾಜ ಮದುವೆ ಆಮಂತ್ರಣ ಪತ್ರಿಕೆಯ ಚರ್ಚೆಯೆ ನಡೆದಿದೆ. ಇತ್ತೀಚಿನ ದಿನಗಳಲ್ಲಿ ಚುನಾವಣೆ ಯಾದಿಯಂತೆ ಮದುವೆ ಆಮಂತ್ರಣ ಮುದ್ರಿಸುವ ಬದಲು ಸಮಾಜಮುಖಿ ಮದುವೆ ಆಮಂತ್ರಣ ಪತ್ರ ಹೊರಬರಲಿ ಎಂಬುದೆ ಮಾಣಿಕರಾಜರ ಸದಾಶಯವಾಗಿದೆ. ಇವರ ಮದುವೆಗೊಂದು ಶುಭ ಹಾರೆಸೋಣ.

**ಉದಯ ವಾಹಿನಿ ಹೈಲೆಟ್ಸ್**

- ಮದುವೆ ಆಮಂತ್ರಣ ಪತ್ರಿಕೆಯಲ್ಲಿ ಪಂಚ ಪರಿವರ್ತನೆಗಳ ವಿವರ.
- ಪರಿಸರ ಸಂರಕ್ಷಣೆ, ಕುಟುಂಬ ಪ್ರಬೋಧನ್, ಸಮರಸತೆ, ಸ್ವದೇಶೀ ಜೀವನಶೈಲಿ, ನಾಗರಿಕ ಕರ್ತವ್ಯ, ಬಗ್ಗೆ ಮುದ್ರಣ..
- ಸಮಾಜಮುಖಿ ಯುವಕನಾದ ಮಾಣಿಕರಾಜ ಬಡಿಗೇರ ಮದುವೆ ಆಮಂತ್ರಣ ಪತ್ರಿಕೆ.
- ಹಲವಾರು ಕಡೆ ಗಮನ ಸೆಳೆಯುತ್ತಿರುವ ಆಮಂತ್ರಣ ಪತ್ರಿಕೆ.

# ಎಲ್ಲಾ ಸಮುದಾಯದ ಪ್ರೀತಿಯ ಅಭಿಮಾನಕ್ಕೆ ನಾನು ಎಂದಿಗೂ ಚಿರಋಣಿ: ಎಂ ಶಮಿವುಲ್ಲಾ

• ಉದಯವಾಹಿನಿ, ಅರಸೀಕೆರೆ

ಎಲ್ಲಾ ಸಮಾಜದ ಸಮುದಾಯದ ಪ್ರೀತಿ ಅಭಿಮಾನಕ್ಕೆ ನಾನು ಎಂದಿಗೂ ಚಿರಋಣಿಯಾಗಿರುತ್ತೇನೆ ಎಂದು ಅರಸೀಕೆರೆ ನಗರಸಭೆಯ ಅಧ್ಯಕ್ಷರಾದ ಎಂ ಶಮಿವುಲ್ಲಾರವರು ತಮ್ಮ ಸ್ನೇಹಿತರು ಅಭಿಮಾನಿಗಳು ಮತ್ತು ಹಲವಾರು ಮುಖಂಡರು ಆಯೋಜಿಸಿದ್ದ ತಮ್ಮ ಹುಟ್ಟು ಹಬ್ಬದ ಸಮಾರಂಭದಲ್ಲಿ ಭಾಗವಹಿಸಿ ಅರಸೀಕೆರೆ ನಗರಸಭೆ ಅಧ್ಯಕ್ಷರಾದ ಎಮ್ ಶಮಿವುಲ್ಲಾ ಮಾತನಾಡಿದರು

ಅರಸೀಕೆರೆ ನಗರದ ಹುಳಿಯಾರು ವೃತ್ತದಲ್ಲಿ ನಗರಸಭೆಯಲ್ಲಿ ಶೀಘ್ರ ಈ ಸ್ವತ್ತು ವಿತರಣೆ ಅರ್ಜಿಗಳ ವಿಲೇವಾರಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನಗರದಾದ್ಯಂತ ನಡೆಸುತ್ತಿರುವ ಅರಸೀಕೆರೆಯ ನಗರಸಭಾ ಅಧ್ಯಕ್ಷರಾದ ಎಂ ಶಮಿವುಲ್ಲಾರವರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಮುಖಂಡರು ಬೃಹತ್ ಪುಷ್ಪಮಾಲೆಯನ್ನ ಅರ್ಪಿಸುವ ಮೂಲಕ ಹಾಗೂ ಬೃಹತ್ ಕೇಕು ಕತ್ತರಿಸುವ ಮೂಲಕ ವಿಶಿಷ್ಟವಾಗಿ ಆಚರಿಸಿ ಸಂಭ್ರಮಿಸಿದರು

ಈ ಸಂದರ್ಭದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಗಿಜಿಹಳ್ಳಿ ಧರ್ಮ ಶೇಖರ್, ನಗರಸಭಾ ಸದಸ್ಯರಾದ ಜಿ.ಟಿ ಗಣೇಶ್, ತಿರುಪತಿ ವೆಂಕಟರಮಣಸ್ವಾಮಿ ದೇವಾಲಯದ ಅಭಿವೃದ್ಧಿ ಸಮಿತಿಯ ಸದಸ್ಯರಾದ ನಾಗರಾಜು, ಜಿಲ್ಲಾ ವರ್ಕ್ ಬೋರ್ಡ್ ಅಧ್ಯಕ್ಷರಾದ ಸೈಯದ್ ಸಿಕಂದರ್ ನೂತನ ಸದಸ್ಯರಾದ ಮೊಬೈಲ್ ದರ್ಶನ್ ಬಿಜಿ, ಹಂಚಗೊಡ್ನಳ್ಳಿ ಉಮೇಶ್ ನಗರಸಭಾ ಅಧ್ಯಕ್ಷರಾದ ಎಮ್ ಶಮಿವುಲ್ಲಾ ರವರ ಪುತ್ರ ಸುಫಿಯಾನ್, ಕೆಂಡದಗುಂಡಿ ಅಲ್ಲಭಕ್ಷಿ, ಆಶ್ರಯ ಸಮಿತಿ ಸದಸ್ಯರಾದ ಅಮ್ಜದ್ ಖಾನ್ ಪಾಂಡು, ಕಾರ್ ರಾಜು, ಗ್ಯಾರೆಂಟಿ ಯೋಜನಾ ಸಮಿತಿ ಸದಸ್ಯರಾದ ಶಿರಾಜ್ , ನಗರಸಭಾ ಸದಸ್ಯರಾದ ಯೂನಸ್ , ರೋಷನ್, ಮಾರುತಿ, ಅಪ್ಪು ಅನೀಫ್, ರಕ್ಷಾ ಸಮಿತಿ ಸದಸ್ಯರಾದ ವಿಭು, ನಗರಸಭಾ ನೂತನ ಸದಸ್ಯರಾದ ಯುವರಾಜ್, ಸುನಿ ಚೌಕ್ ಅಮೀದ್, ನಗರ ಯೋಜನಾ ಅಧಿಕಾರ ಸದಸ್ಯ ಬಾಲಮುರುಗನ್, ಪತ್ರಕರ್ತರಾದ ಆನಂದ್, ಆಂಧ್ರ ಮಿಲ್ ಅಭಿ, ಉಪಸ್ಥಿತರಿದ್ದು ಎಮ್ ಶಮಿವುಲ್ಲಾ ರವರನ್ನ ಅಭಿನಂದಿಸಿದರು.


ಉದಯವಾಹಿನಿ ಚಿತ್ರ

**ಹುಟ್ಟು ಹಬ್ಬದ ಸಮಾರಂಭ**

## ಗ್ಯಾರಂಟಿ ಸೌಲಭ್ಯ ಅರ್ಹರಿಗೆ ತಲುಪಿಸುವುದೇ ಜಾಗೃತಿ ಉದ್ದೇಶ

• ಉದಯವಾಹಿನಿ ಹುಮನಾಬಾದ್

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಿಂದ ತಾಲ್ಲೂಕಿನ ಚಂದನಹಳ್ಳಿ , ಘೋಡವಾಡಿ ಮತ್ತು ಸುಲ್ತಾ ನವಾದ, ಗ್ರಾಮದಲ್ಲಿ ಪಂಚ್ ಗ್ಯಾರಂಟಿ ಯೋಜನೆಗಳ ಅರಿವು ಕಾರ್ಯಕ್ರಮ ಜರುಗಿತು.

ಪಂಚ್ ಗ್ಯಾರಂಟಿ ಯೋಜನೆಯ ತಾಲ್ಲೂಕು ಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ಅಫ್ಸರಮಿಯ್ಯ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಚುನಾವಣೆ ಸಂದ ರ್ಭದಲ್ಲಿ ಕಾಂಗ್ರೇಸ್ ಪಕ್ಷ ಕೋಟ್ಟಿರುವ ಭರವಸೆಯಂತೆ ಪಂಚ್ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು, ಇದರಿಂದ ಮಧ್ಯಮ ಕುಟಂಬದ ಬಡ ಮಹಿಳೆ ಯರಿಗೆ ಹೆಚ್ಚಿನ ಅನುಕುಲವಾಗುತ್ತಿದ್ದು, ಪಂಚ್ ಗ್ಯಾರಂಟಿ ಯೋಜನೆ ಸದುಪಯೋಗ ಪಡೆದು ಸಂತೋಷದ ಜೀವನ ನಡೆಸಿ ಎಂದು ಕರೆ ನೀಡಿದರು.

ತಾಪಂ. ಇಒ ದೀಪಿಕಾ ನಾಯಕ ಪಂಚ್ ಗ್ಯಾರಂಟಿ ಯೋಜನೆಯ ತಾಲ್ಲೂಕು ಮಟ್ಟದ ಅನುಷ್ಠಾನ ಸಮಿತಿಯ ಸಮಿತಿ ಉಪಾಧ್ಯಕ್ಷೆ ಸುರೇಖಾ ರೆಡ್ಡಿ, ಅಶ್ವಿನಿ ಪಾಟೀಲ, ರಂಜೀತ ಮಾನಕರೆ, ಚಂದನಹಳ್ಳಿ ಗ್ರಾಮ ಪಂಚಾಯಿತಿ , ಅಭಿವೃದ್ಧಿ ಅಧಿಕಾರಿ ವೀರಣ್ಣ ಜಮಾದಾರ್, ಘೋಡವಾಡಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿದ್ದಾರ್ಥ್, ಸುಲ್ತಾನಾಬಾದ್ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ, ಸೇರಿದಂತೆ ಗ್ಯಾರಂಟಿ ಯೋಜನೆಯ ತಾಲ್ಲೂಕು ಮಟ್ಟದ ಅನುಷ್ಠಾನ ಸಮಿತಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

> **ಅಸಹಾಯಕ ಮತ್ತು ಬಡ ಕುಟುಂಬಗಳಿಗೆ ವರದಾನ ಆಗಿರುವ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಸಮಾಜದ ಹಿಂದುಳಿದ ವರ್ಗದ ಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಅವರ ಜೀವನ ಮಟ್ಟ ಸುಧಾರಿಸಲು ಹಲವಾರು ಜನಪರ ಯೋಜನೆ ಜಾರಿ ಮಾಡಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಿದೆ. ಈ ಕಾರ್ಯಕ್ಕೆ ಬೆಂಬಲವಾಗಿ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಹಾಗೂ ಶಕ್ತಿ ಯೋಜನೆಗಳು ಸಹಕಾರಿಯಾಗಿವೆ -ರಂಜೀತ ಮಾನಕರೆ**

# ವಾರ್ತಾ ಕಚೇರಿ ಕಟ್ಟಡ ವೀಕ್ಷಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ವಿಜಯನಗರ

ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿ ನೂತನ ಕಟ್ಟಡ ನಿರ್ಮಾಣ ಸ್ಥಗಿತವಾಗಿದ್ದು ಇದನ್ನು ತ್ವರಿತವಾಗಿ ಪೂರ್ಣಗೊಳಿಸಲು ಕೆಆರ್‌ಡಿಎಲ್ ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಲಾಗುತ್ತದೆ ಎಂದು ವಿಜಯನಗರ ಶಾಸಕರಾದ ಹೆಚ್.ಆರ್.ಗವಿಯಪ್ಪ ತಿಳಿಸಿದರು.

ಅವರು ಮುಖ್ಯರಸ್ತೆಗೆ ಹೊಂದಿಕೊಂಡಿರುವ ಪಟೇಲ್ ನಗರದಲ್ಲಿ ನಿರ್ಮಾಣವಾಗುತ್ತಿರುವ ನೂತನ ಕಟ್ಟಡ ಕಾಮಗಾರಿ ವೀಕ್ಷಣೆ ಮಾಡಿ ಮಾತನಾಡಿದರು. ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ಉಪವಿಭಾಗ ಆರಂಭವಾದಾಗಿನಿಂದ ಕಾರ್ಯನಿರ್ವಹಿಸುತ್ತಿದೆ. ಹಂಪಿ ವಿಶ್ವಪಾರಂಪಾರಿಕ ತಾಣವಾಗಿರುವುದರಿಂದ ವಾರ್ತಾ ಇಲಾಖೆ ಅನಿವಾರ್ಯವಾಗಿದ್ದು ಕಚೇರಿ ಮುಚ್ಚಬೇಕೆಂಬ ಆದೇಶವಾದರೂ ಇಲ್ಲಿನ ಪತ್ರಕರ್ತರ ಸತತ ಪ್ರಯತ್ನದ ಫಲವಾಗಿ ಉಪವಿಭಾಗ ಕಚೇರಿ ಉಳಿಯುವಂತಾಯಿತು ಎಂದು ಪತ್ರಕರ್ತರ ಕಾಳಜಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ವಿಜಯನಗರ ಜಿಲ್ಲೆಯಾಗಿದ್ದು ಎಲ್ಲಾ ಜಿಲ್ಲಾ ಮಟ್ಟದ ಕಚೇರಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಲು ಸ್ವಂತ ಕಟ್ಟಡ ಅನಿವಾರ್ಯವಾಗಿದೆ.

ವಾರ್ತಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ ಕಟ್ಟಡ ರೂ.71 ಲಕ್ಷ ಅಂದಾಜಿನಲ್ಲಿ ಕಳೆದ 2 ವರ್ಷಗಳಿಂದ ನಿರ್ಮಾಣವಾಗುತ್ತಿದೆ. ಕಟ್ಟಡ ನಿರ್ಮಾಣ ಅಂತಿಮ ಹಂತಕ್ಕೆ ಬಂದು ಸ್ಥಗಿತ ಮಾಡಲಾಗಿದೆ. ಮುಂದಿನ ಹದಿನೈದು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಕಚೇರಿ ಇಲ್ಲಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲು ಕೆಆರ್‌ಡಿಎಲ್ ಅಧಿಕಾರಿಗಳಿಗೆ ಸೂಚನೆ ನೀಡಲಾಗುತ್ತದೆ ಎಂದರು.

# ಪ್ರಗತಿ ಪರಿಶೀಲನಾ ಸಭೆ

• ಉದಯವಾಹಿನಿ ನವಲಗುಂದ

ಬೆಳೆ ಸಮೀಕ್ಷೆ ಹಾಗೂ ಬೆಳೆ ವಿಮೆಯಲ್ಲಿ ತಾಲ್ಲೂಕಿನ ರೈತರಿಗೆ ತೊಂದರೆಯಾಗದಂತೆ ರೈತರ ಹಿತ ಕಾಯುವಲ್ಲಿ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿ ಅವರಿಗೆ ತಲುಪಬೇಕಾದ ಸವಲತ್ತುಗಳನ್ನು ಸರಿಯಾದ ಸಮಯಕ್ಕೆ ತಲುಪಿಸುವ ಕಾರ್ಯವಾಗಲಿ ಎಂದು ಕೃಷಿಕ ಸಮಾಜದ ಅಧ್ಯಕ್ಷ ಸೋಮಲಿಂಗಪ್ಪ ಬಳಿಗೇರ ಹೇಳಿದರು

ಅವರು ಸ್ಥಳೀಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ 2024-25 ನೇ ಸಾಲಿನ ಕೃಷಿಕ ಸಮಾಜದ ಪ್ರಥಮ ಕಾರ್ಯಕಾರಿ ಸಮೀತಿ ಸಭೆಯಲ್ಲಿ ಇಲಾಖೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು ಯಾವುದೇ ಕಾರಣಕ್ಕೂ ಅಭಿವೃದ್ಧಿ ಕಾರ್ಯಗಳು ಕುಂಟಿತವಾಗದಂತೆ ಕ್ರಮ ವಹಿಸಿ.

ಕೃಷಿ ಹಾಗೂ ತೋಟಗಾರಿಕೆ ಇಲಾಖಾಧಿಕಾರಿಗಳು ಗೈರಾಗುವ ಮೂಲಕ ಸಾರ್ವಜನಿಕರಿಗೆ ಸರಿಯಾದ ಸಮಯಕ್ಕೆ ಸಿಗದೆ ಇರುವ ದೂರು ಪದೇ ಪದೇ ಕೇಳಿ ಬರುತ್ತಿರುವುದು ಮಾಮೂಲಿಯಾಗಿದೆ. ಇದನ್ನು ಸಹಿಸಲಾಗದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಸಹಾಯಕ ಕೃಷಿ ನಿರ್ದೇಶಕರಾದ ತಿಪ್ಪೇಸ್ವಾಮಿ ವಿ ಮಾತನಾಡಿ 2023-24 ನೇ ಸಾಲಿನ ಮುಂಗಾರು/ಹಿಂಗಾರು ಹಂಗಾಮಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ರೈತರ ಬೆಳೆ ವಿಮಾ ಪ್ರಸ್ತಾವನೆಗಳ ಬೆಳೆ ಸಮೀಕ್ಷೆಯಡಿ ದಾಖಲಾದ ಬೆಳೆ ಹಾಗೂ ಬೆಳೆ ವಿಮೆ ಮಾಡಿಸಿದ ಬೆಳೆಯು ಹೊಂದಾಣಿಕೆಯಾಗದೇ ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡಿರುತ್ತವೆ. ಅಂತಹ ತಿರಸ್ಕೃತಗೊಂಡಿರುವ ಬೆಳೆ ವಿಮಾ ಪ್ರಸ್ತಾವನೆಗಳ ರೈತರ ಯಾದಿಯನ್ನು ಗ್ರಾಮ ಪಂಚಾ ಯತಿ, ರೈತ ಸಂಪರ್ಕ ಕೇಂದ್ರ, ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಪ್ರದರ್ಶಿಸಲಾಗಿರುತ್ತದೆ. ಕೃಷಿಕ ಸಮಾಜಕ್ಕೆ ಪ್ರತ್ಯೇಕ ಕಟ್ಟಡ ನಿರ್ಮಿಸುವ ಕುರಿತು ಸಭೆಯಲ್ಲಿ ತೀರ್ಮಾನಿಸಲಾಯಿತು.



ಉದಯವಾಹಿನಿ ಚಿತ್ರ

> **ಸಂಬಂಧಪಟ್ಟ ರೈತರು ಅಕ್ಷೇಪಣೆಗಳಿದ್ದಲ್ಲಿ ಫೆ 28 ರ ಒಳಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ 2023-24 ರ ಪಹಣಿ ಪತ್ರಿಕೆಯಲ್ಲಿ ವಿಮೆಗೆ ನೋಂದಾಯಿಸಿದ ಬೆಳೆ ನಮೂದಾಗಿರುವ ಪಹಣಿ, ವಿಮೆ ಮಾಡಿಸಿದ ಬೆಳೆಗೆ ಬೆಂಬಲ ಬೆಲೆ ಪ್ರಯೋಜನ ಪಡೆದಲ್ಲಿ ರಶೀದಿ ಹಾಗೂ ವಿಮೆಗೆ ನೋಂದಾಯಿತ ಬೆಳೆಯ ಉತ್ಪನ್ನವನ್ನು ಎಪಿಎಂಸಿ ಮಾರುಕಟ್ಟೆಗೆ ಮಾರಾಟ ಮಾಡಿದಲ್ಲಿ ದಾಖಲೆಗಳೊಂದಿಗೆ ಸಲ್ಲಿಸುವಂತೆ ತಿಳಿಸಿದರು -ಸೋಮಲಿಂಗಪ್ಪ**

ಇದೆ ವೇಳೆ ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ ಪಡೆದ ಕುಂದಗೋಳ ತಾಲ್ಲೂಕಿನ ಗುರುವಿನಹಳ್ಳಿ ಗ್ರಾಮದ ಮಹೇಶ್ ಕುಲಕರ್ಣಿಯವರನ್ನು ಸನ್ಮಾನಿಸಲಾಯಿತು

ಉಪಾಧ್ಯಕ್ಷ ದಾವಲಸಾಬ ಖುದನ್ನವರ, ಜಿಲ್ಲಾ ಪ್ರತಿನಿಧಿ ಬಸಪ್ಪ ನಿ ಗುಡೆಣ್ಣವರ, ಪ್ರಧಾನ ಕಾರ್ಯದರ್ಶಿ ನಾಗನಗೌಡ ಪಾಟೀಲ ಖಜಾಂಚಿ ಪ್ರಕಾಶ ಶಿಗ್ಲಿ ಎಸ್ ಆರ್ ಅಂಬಲಿ, ಆರ್ ಎಚ್ ಕೋನರಡ್ಡಿ ಸೇರಿದಂತೆ ಎಲ್ಲಾ ಚುನಾಯಿತ ನಿರ್ದೇಶಕರು, ಅಧಿಕಾರಿಗಳು ರೈತರು ಸಭೆಯಲ್ಲಿ ಉಪಸ್ಥಿತರಿದ್ದರು.

# ಜಯಂತಿಗಳು ಒಂದೇ ಜಾತಿಗೆ ಸೀಮಿತವಲ್ಲ: ಮಂಜಾನಾಯ್ಕ್

• ಉದಯವಾಹಿನಿ ಹರಪನಹಳ್ಳಿ

ಸಂತ ಶ್ರೀ ಸೇವಾಲಾಲ್ ಮಹರಾಜ ಬರೇ ಒಂದು ಬಂಜಾರ್ ಸಮುದಾಯಕ್ಕೆ ಮಾತ್ರ ಸೀಮಿತರಾಗದೇ ಸರ್ವ ಸಮುದಾಯದ ಜೊತೆ ಒಡನಾಟ ಇದ್ದಂತಹ ಮಹಾನ್ ಸಂತ ಶ್ರೀ ಸೇವಾಲಾಲ್ ಮಹರಾಜರಾಗಿದ್ದರು ಎಂದು ಬಂಜಾರ್ ಸಮುದಾಯ ಯುವ ಮುಖಂಡ ಹಾಗೂ ಬ್ಲಾಕ್ ಕಾಂಗ್ರೇಸ್ ಪ್ರಧಾನ ಕಾರ್ಯದರ್ಶಿ ಎಲ್.ಮಂಜಾನಾಯ್ಕ್ ಹೇಳಿದರು.

ಪಟ್ಟಣದ ತಾಲೂಕು ಮಿನಿ ವಿಧಾನ ಸೌಧದಲ್ಲಿ ತಾಲ್ಲೂಕು ಕಛೇರಿ ವತಿಯಿಂದ ಆಯೋಜಿಸಲಾಗಿದ್ದ ಸಂತ ಶ್ರೀ ಸೇವಾಲಾಲ್ ಮಹಾರಾಜ 286 ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಭಾವ ಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಬಳಿಕ ಮಾತನಾಡಿದ ಅವರು ಬಂಜಾರ್ ಸಮುದಾಯವನ್ನು ಮುಖ್ಯವಾಹಿನಿಗೆ ತಂದಿದ್ದು ಸಂತೋಷದ ವಿಷಯ ಆದರೆ ಸರ್ಕಾರ ಇಂದು ಸರ್ವ ಧರ್ಮೀಯರ ಆರಾಧ್ಯರ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮಗಳನ್ನಾಗಿ ಆಚರಿಸಲು ಆದೇಶ ನೀಡಿದ್ದು ಸ್ವಾಗತಾರ್ಹ, ಆದರೆ, ಆಯಾ ಸಮುದಾಯದವರನ್ನೇ ಮುಂಚೂಣಿಯಲ್ಲಿ ಬಿಟ್ಟು ಅನ್ಯ ಧರ್ಮೀಯರು ಭಾಗವಹಿಸದೇ ಇರುವುದು ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಸಂತ ಶ್ರೀ ಸೇವಾಲಾಲ್ ಮಹಾರಾಜರು ಕೇವಲ ಬಂಜಾರ ಸಮಾಜವಲ್ಲದೇ ಎಲ್ಲಾ ಸಮುದಾಯದ ಜನ ಜಾನುವಾರುಗಳಿಗೆ ಒಳಿತನ್ನು ಬಯಸಿದವರು. ಕಲ್ಲುಬಂಡೆಯನ್ನೇ ನಗಾರಿಯನ್ನಾಗಿ, ಬಾದಾಮಿ ಗಿಡದ ಎಲೆಗಳನ್ನು ತಾಳವನ್ನಾಗಿ, ಕೆರೆ ಕಟ್ಟೆಗಳಲ್ಲಿನ ಕೆಸರನ್ನು ಪಾಯಸವನ್ನಾಗಿ ಪವಾಡಗಳನ್ನು ನಡೆಸಿದ ಪವಾಡ ಪುರುಷನನ್ನು ಇಂದು ನೆನೆದು ಮುಂದಿನ ಪೀಳಿಗೆಗೆ ಸಮುದಾಯದ, ಸಂತ ಶ್ರೀ ಸೇವಾಲಾಲ್ ರವರ ಆದರ್ಶಗಳನ್ನು ಉಳಿಸಿ, ಬೆಳೆಸುವ ಕೆಲಸ ಮಾಡೋಣ ಎಂದರು.ಯುವಕರಿಗೆ ಕರೆ ನೀಡಿದವರು.


ಉದಯವಾಹಿನಿ ಚಿತ್ರ

**ಸರ್ವ ಧರ್ಮೀಯರ ಆರಾಧ್ಯ**

# ಮೈಕ್ರೋ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣ ಕುರಿತ ಸುಗ್ರೀವಾಜ್ಞೆ ಅನುಷ್ಠಾನ

## ಸಾಲಗಾರರಿಗೆ ಕಿರುಕುಳ ಆಗದಂತೆ ಮತ್ತು ಸಾಲ ಕೊಡುವವರಿಗೂ ತೊಂದರೆಯಾಗದಂತೆ ಮುನ್ನೆಚ್ಚರಿಗೆ ವಹಿಸಿ: ಸಿಎಂ

• ಉದಯವಾಹಿನಿ ಚಿತ್ರದುರ್ಗ

ಕರ್ನಾಟಕ ಸರ್ಕಾರವು ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತರದ ಕ್ರಮಗಳ ಪ್ರತಿಬಂಧಕ) ಆಧ್ಯಾದೇಶ-2025 ಸುಗ್ರೀವಾಜ್ಞೆಯನ್ನು ಜಾರಿಗೊಳ್ಳಿಸಿದ್ದು, ಮೈಕ್ರೋ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣ ಕುರಿತು ಅನುಷ್ಠಾನದಲ್ಲಿರುವ ಸುಗ್ರೀವಾಜ್ಞೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಹೆಚ್ಚು ಅಧಿಕಾರಗಳನ್ನು ನೀಡಿದ್ದು, ಸಾಲಗಾರರಿಗೆ ಯಾವುದೇ ರೀತಿಯ ಕಿರುಕುಳ ಆಗದಂತೆ ಮುನ್ನೆಚ್ಚರಿಗೆ ವಹಿಸಬೇಕು. ಮತ್ತು ನಿಯಮಾನುಸಾರ ಸಾಲಕೊಡುವವರಿಗೂ ತೊಂದರೆಯಾಗದಂತೆ ಗಮನಹರಿಸಬೇಕೆಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಹೇಳಿದರು.

ವಿಡಿಯೋ ಕಾನ್ಫರೆನ್ಸ್ ಮೂಲಕ ಶನಿವಾರ ಜಿಲ್ಲಾಧಿಕಾರಿಗಳೊಂದಿಗೆ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣ ಕುರಿತು ಹೊರಡಿಸಲಾಗಿರುವ ಸುಗ್ರೀವಾಜ್ಞೆಯ ಅನುಷ್ಠಾನ ಕುರಿತು ಸಭೆ ಜರುಗಿಸಿ ಮಾತನಾಡಿದರು.

ಸುಗ್ರೀವಾಜ್ಞೆಯಿಂದ ನಿಯಮಾನುಸಾರ ಸಾಲ ನೀಡುವ ಲೇವಾದೇವಿಗಾರರಿಗೆ ಹಾಗೂ ಮನಿಲ್ಯಾಂಡರ್ ಅವರಿಗೆ ತೊಂದರೆ, ಕಿರುಕುಳ ಆಗದಂತೆ ಅಧಿಕಾರಿಗಳು ಗಮನ ಹರಿಸಬೇಕು. ಬಡವರು, ಮಹಿಳೆಯರು ಮತ್ತು ರೈತರಿಗೆ ಸಾಲ ವಸೂಲಾತಿಗಾಗಿ ಮೈಕ್ರೋ ಫೈನಾನ್ಸ್‌ದವರಿಂದ ಯಾವುದೇ ಕಿರುಕುಳ, ತೊಂದರೆ ಆಗದಂತೆ ಕ್ರಮ ಕೈಗೊಳ್ಳುವ ಉದ್ದೇಶದಿಂದ ಈ ಸುಗ್ರೀವಾಜ್ಞೆಯನ್ನು ಜಾರಿಗೆ ತರಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶಾಲಿನಿ ರಜನೀಶ ಅವರು ವಿಡಿಯೋ ಸಂವಾದ ನಿರ್ವಹಿಸಿ, ಡಿಸಿ, ಎಸ್‌ಪಿಗಳಿಗೆ ನಿರ್ದೇಶನ ನೀಡಿ, ಮುಖ್ಯಮಂತ್ರಿಗಳು ನೀಡಿದ ಸಲಹೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ಡಿ. ವೆಂಕಟೇಶ್ ಅವರು, ರಾಜ್ಯ ಸರ್ಕಾರ ಜಾರಿಗೊಳಿಸಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣ ಕುರಿತ ಸುಗ್ರೀವಾಜ್ಞೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುವುದು. ಮತ್ತು ಮೈಕ್ರೋ ಫೈನಾನ್ಸ್‌ದಾರರು, ಲೇವಾದೇವಿಗಾರರು, ಪಾನ್ ಬ್ರೋಕರ್‌ಗಳ ಸಭೆ ಕರೆದು ಮತ್ತೊಮ್ಮೆ ತಿಳುವಳಿಕೆ ನೀಡಲಾಗುವುದು. ಸಾರ್ವಜನಿಕರಲ್ಲಿ ಸುಗ್ರೀವಾಜ್ಞೆ ಕುರಿತು ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ವೆಂಕಟೇಶ್ ನಾಯ್ಕ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.


ಉದಯವಾಹಿನಿ ಚಿತ್ರ

**ಮತ ಎಣಿಕೆ ಕೊಠಡಿಯೊಳಗೆ ಮೊಬೈಲ್ ನಿಷೇಧ**


**ಸುಗ್ರೀವಾಜ್ಞೆಜಾರಿಗೆ**

**ಬೆಳಿಗ್ಗೆ 9 ಗಂಟೆಗೆ ಮೊದಲು ಮತ್ತು ಸಂಜೆ 6 ಗಂಟೆಯ ನಂತರ ಸಾಲಗಾರರ ಮನೆಗೆ ಸಾಲ ವಸೂಲಾತಿಗಾಗಿ ಹೊಗಬಾರದು. ಬಲವಂತದ ವಸೂಲಾತಿಯನ್ನು ತಡೆಯಲು ಈ ಕಾನೂನು ಜಾರಿ ಮಾಡಲಾಗಿದೆ. ರಾಜ್ಯದಲ್ಲಿ 2022 ರಿಂದ 2025ರವರೆಗೆ ಇಂತಹ ಪ್ರಕರಣಗಳನ್ನು ಗಮನಿಸಿದಾಗ ಕಳದ 2 ತಿಂಗಳಲ್ಲಿ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗಿವೆ. ಮೈಕ್ರೋ ಫೈನಾನ್ಸ್‌ಗಳಿಂದ ಸಾಲ ಪಡೆದವರಿಗೆ ಆಗುವ ಕಿರುಕುಳವನ್ನು ತಪ್ಪಿಸಲು ಸುಗ್ರೀವಾಜ್ಞೆ ಜಾರಿಗೆ ತರಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.**

**ಅನಗತ್ಯ ಕಿರುಕುಳ**

**ಸುಗ್ರೀವಾಜ್ಞೆಯನ್ನು ಅಧಿಕಾರಿಗಳು ಸರಿಯಾಗಿ ಅಧ್ಯಯನ ಮಾಡಿ, ಜಾರಿ ಮಾಡಬೇಕು. ಡಿಸಿ, ಎಸ್.ಪಿ ಅವರು ಆಸಕ್ತಿ ವಹಿಸಿ ಕಾರ್ಯನಿರ್ವಹಿಸಬೇಕು. ಮುಂದಿನ ದಿನಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಸಾಲ ವಸೂಲಾತಿಗಾಗಿ ಅನಗತ್ಯ ಕಿರುಕುಳ, ತೊಂದರೆ ಆಗುವಂತಹ ಪ್ರಕರಣಗಳನ್ನು ನಿಯಂತ್ರಿಸಿ, ಪ್ರಕರಣಗಳು ಶೂನ್ಯ ಆಗುವಂತೆ ಕ್ರಮಕೈಗೊಳ್ಳಲು ಮುಖ್ಯಮಂತ್ರಿಗಳು ನಿರ್ದೇಶಿಸಿದರು.**

# ಮಾದಕ ದ್ರವ್ಯಗಳ ಸೇವನೆ ವಿರುದ್ಧ ಜಾಗೃತಿ



ಉದಯವಾಹಿನಿ ಚಿತ್ರ

• ಉದಯವಾಹಿನಿ ಕೊಲ್ಹಾರ


ತಂಬಾಕು ಧೂಮಪಾನ,ಮಧ್ಯಪಾನ ಸೇವನೆ ವಿರುದ್ಧ ಜಾಗೃತಿ ಕಾರ್ಯಕ್ರಮವನ್ನು ಕೂಡಗಿ ಬಾಲ ಭಾರತಿ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸೇರಿ ಗೊಳಸಂಗಿ ಗ್ರಾಮದಲ್ಲಿ ಹಮ್ಮಿಕೊಂಡರು. ತಂಬಾಕು,ಧೂಮಪಾನ ಮತ್ತು ಮದ್ಯ ಸೇವನೆಯ ಹಾನಿಕಾರಕ ಪರಿಣಾಮಗಳು ಜನರಿಗೆ ತಿಳಿಸಲು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಮನೆ ಮನೆಗೆ ತೆರಳಿ ಕರಪತ್ರಗಳನ್ನು ಹಂಚಿದರು ಮತ್ತು ಗ್ರಾಮಸ್ಥರಿಗೆ ಮಾಹಿತಿ ನೀಡಿದರು ಜೊತೆಗೆ ತಂಬಾಕು ಬಳಕೆಯ ಅಪಾಯಗಳ ಕುರಿತುಪ್ರಭಾತ್ ಫೇರಿ (ಬೆಳಿಗ್ಗೆ ಜಾಗೃತಿ ರ‍್ಯಾಲಿ) ನಡೆಸಲಾಯಿತು, ಅಲ್ಲಿ ವಿದ್ಯಾರ್ಥಿಗಳು ಬೆಳಿಗ್ಗೆ

ಧೂಮಪಾನ ಮತ್ತು ಮದ್ಯಪಾನದ ದುಷ್ಪರಿಣಾಮಗಳ ಬಗ್ಗೆ ಘೋಷಣೆಗಳು ಮತ್ತು ಜಾಗೃತಿ ಮೂಡಿಸುವುದು. ಒಂದು ಪ್ರಮುಖ ಹೈಲೈಟ್ ಅಭಿಯಾನವು ಗ್ರಾಮದ ಎರಡು ಸ್ಥಳಗಳಲ್ಲಿ ಪ್ರದರ್ಶನಗೊಂಡ (ಬೀದಿ ನಾಟಕ) ಆಗಿತ್ತು. ಈ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳು ಕನ್ನಡ ಮತ್ತು ಹಿಂದಿಯಲ್ಲಿ ನಾಟಕವನ್ನು ಪ್ರಸ್ತುತಪಡಿಸಿದರು.

ಸಂದೇಶವು ವ್ಯಾಪಕವಾದ ಪ್ರೇಕ್ಷಕರನ್ನು ಪರಿಣಾಮಕಾರಿಯಾಗಿ ತಲುಪಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸರಕಾರಿ ಪ್ರೌಢಶಾಲೆ ಮುಖ್ಯಗುರು, ಗೊಳಸಂಗಿ, ವಿದ್ಯಾರ್ಥಿಗಳ ಪ್ರಯತ್ನವನ್ನು ಶ್ಲಾಘಿಸಿದರು ಮತ್ತು ಅವರ ಸಮರ್ಪಣೆಯನ್ನು ಶ್ಲಾಘಿಸಿದರು.ಅವರು ವಿಶೇಷವಾಗಿ

ಪ್ರಭಾವಶಾಲಿ ಬೀದಿ ನಾಟಕವನ್ನು ನಿರ್ದೇಶಿಸಿದ್ದಕ್ಕಾಗಿ ನವನೀತ್ ತ್ರಿಪಾಠಿ,ಮಾಧಬಿ ಬಿ,ಪ್ರಾಂಶುಪಾಲ ಸಂದೀಪ್ ಸೋಮಸೋಲೆ ಮತ್ತು ಓಖಿಕಅ ಆಡಳಿತ ಸಹಕಾರದಿಂದ ಗ್ರಾಮಸ್ಥರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದರು.


ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
|---|---|---|
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ತುಂಬಾ ಪ್ರಯಾಣ ನಿಮಗೆ ದಣಿವಾಗಿಸುತ್ತದೆ ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ ಆದರೆ ಇಂದು ನೀವು ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳಬಹುದು.

**ವೃಷಭ** ಸಹಭಾಗಿತ್ವ ಯೋಜನೆಗಳು ಲಾಭಕ್ಕಿಂತ ಹೆಚ್ಚಾಗಿ ಸಮಸ್ಯೆಗಳನ್ನು ಸೃಷ್ಟಿಸುತ್ತವೆ – ನೀವು ಯಾರಾದರೂ ನಿಮ್ಮ ದುರ್ಬಳಕೆ ಮಾಡಿಕೊಳ್ಳಲು ಅವಕಾಶ ನೀಡಿದ್ದಕ್ಕಾಗಿ ನಿಮ್ಮ ಮೇಲೆ ನೀವೇ ಕೋಪಗೊಳ್ಳುತ್ತೀರಿ.

**ಮಿಥುನ** ನೀವು ಇಂದು ಆರಾಮವಾಗಿ ವಿಶ್ರಾಂತಿ ಪಡೆಯಬೇಕು. ನೀವು ಆನಂದಿಸುವ ಮತ್ತು ಆಸಕ್ತಿಗಳು ಮತ್ತು ವಿಷಯಗಳಲ್ಲಿ ತೊಡಗಿಕೊಳ್ಳಿ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ.

**ಕರ್ಕಾಟಕ** ನಿಮ್ಮ ಪ್ರೀತಿಯ ಸಂಬಂಧ ಮಾಂತ್ರಿಕ ತಿರುವು ಪಡೆಯುತ್ತಿದೆ. ಸುಮ್ಮನೇ ಅದನ್ನು ಅನುಭವಿಸಿ. ಇಂದು ಮಾಡಿದ ಹೂಡಿಕೆ ಲಾಭದಾಯಕವಾಗಿದ್ದರೂ ನೀವು ಬಹುಶಃ ಪಾಲುದಾರರಿಂದ ವಿರೋಧ ಎದುರಿಸುತ್ತೀರಿ.

**ಸಿಂಹ** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ.

**ಕನ್ಯಾ** ಇಂದು ಶಾಂತವಾಗಿ ಒತ್ತಡ ಮುಕ್ತವಾಗಿರಿ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ದಿನದಲ್ಲಿ ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡೀ ಕುಟುಂಬಕ್ಕೆ ಸಂತೋಷ ಮತ್ತು ಆನಂದ ತೆರೆದಿಡುತ್ತದೆ.

**ತುಲಾ** ಮಕ್ಕಳ ಜೊತೆಗಿನ ನಿಮ್ಮ ಕಠಿಣ ವರ್ತನೆ ನಿಮಗೆ ಸಿಟ್ಟು ಬರಿಸಬಹುದು. ಇದು ನಿಮ್ಮ ನಡುವೆ ಕೇವಲ ಒಂದು ತಡೆಗೋಡೆಯನ್ನು ಮಾತ್ರ ಸೃಷ್ಟಿಸುವುದರಿಂದ ನೀವು ನಿಮ್ಮ ಮೇಲೆ ನಿಯಂತ್ರಣ ಹೊಂದಿರಬೇಕು.

**ವೃಶ್ಚಿಕ** ವಿದೇಶದಲ್ಲಿ ವ್ಯಾಪಾರ ಮಾಡುವ ಈ ರಾಶಿಚಕ್ರದ ಜನರಿಗೆ ಇಂದು ಸಾಕಷ್ಟು ಹಣದ ಲಾಭವನ್ನು ಪಡೆಯಬಹುದು. ಮನೆಯಲ್ಲಿ ನಿಮ್ಮ ಮಕ್ಕಳು ಅತಿಶಯೋಕ್ತಿಯಿರುವ ಸಂಧರ್ಭದಲ್ಲಿ ನಿಮ್ಮನ್ನು ಸಿಲುಕಿಸುತ್ತಾರೆ.

**ಧನಸ್ಸು** ಮನೆಯ ಅಗತ್ಯವಾದ ವಸ್ತುಗಳ ಮೇಲೆ ಹಣವನ್ನು ಖರ್ಚು ಮಾಡುವುದು ಖಂಡಿತವಾಗಿಯೂ ನಿಮಗೆ ಆರ್ಥಿಕ ತೊಂದರೆಗಳನ್ನು ನೀಡುತ್ತದೆ ಆದರೆ ಇದರಿಂದ ಭವಿಷ್ಯದ ಅನೇಕ ತೊಂದರೆಗಳಿಂದ ತಪ್ಪಿಸಿಕೊಳ್ಳಬಹದು.

**ಮಕರ** ಸಂಗಾತಿಯೊಡನೆ ಚಲನಚಿತ್ರ – ರಂಗಭೂಮಿ ಅಥವಾ ಊಟ ನಿಮ್ಮನ್ನು ಒಂದು ಶಾಂತ ಮತ್ತು ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ.

**ಕುಂಭ** ತೃಪ್ತಿಕರ ಫಲಿತಾಂಶಗಳನ್ನು ಪಡೆಯಲು ಸರಿಯಾಗಿ ಯೋಜನೆ ಹಾಕಿ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸುತ್ತಿದ್ದಂತೆ ಒತ್ತಡ ನಿಮ್ಮ ಮನಸ್ಸನ್ನು ಆವರಿಸುತ್ತದೆ. ಸಮಯವನ್ನು ಚೆನ್ನಾಗಿ ಬಳಸುವುದನ್ನು ಕಲಿಯಿರಿ.

**ಮೀನ** ಆರೋಗ್ಯ ಸಂಬಂಧಿತ ಸಮಸ್ಯೆಗಳು ಅಸ್ವಸ್ಥತೆಯನ್ನು ತರಬಹುದು. ದೊಡ್ಡ ಯೋಜನೆಗಳನ್ನು ಮತ್ತು ಕಲ್ಪನೆಗಳಿರುವ ಯಾರಾದರೂ ನಿಮ್ಮ ಗಮನ ಸೆಳೆಯುತ್ತಾರೆ.

## ಮೈಕ್ರೋ ಫೈನಾನ್ಸ್ ಕಿರುಕುಳ -ರಾಜ್ಯದಲ್ಲಿ ಮತ್ತೋರ್ವ ವ್ಯಕ್ತಿ ಸಾವು

• ಉದಯವಾಹಿನಿ ಬೆಳಗಾವಿ

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಅಟ್ಟಹಾಸಕ್ಕೆ ಬ್ರೇಕ್ ಹಾಕಲು ರಾಜ್ಯ ಸರ್ಕಾರ ಹೊಸ ಸುಗ್ರೀವಾಜ್ಞೆ ಕಾರ್ಯರೂಪಕ್ಕೆ ತಂದಿದ್ದು, ಇದರ ನಡುವೆ ಫೈನಾನ್ಸ್‌ಗಳ ಕಿರುಕುಳಕ್ಕೆ ಬೇಸತ್ತು ಯುವಕನೋರ್ವ ಸಾವನ್ನಪ್ಪಿದ ಘಟನೆ ಬೆಳಗಾವಿ ಜಿಲ್ಲೆಯಲ್ಲಿ ನಡೆದಿದೆ. ಜಿಲ್ಲೆಯ ರಾಯಬಾಗ ಪಟ್ಟಣದ ಬಸವರಾಜ್ ಎಂದು ಗುರುತಿಸಲಾಗಿದೆ. ಬಸವರಾಜ್ ನಾಲ್ಕು ಮೈಕ್ರೋ ಫೈನಾನ್ಸ್ ಕಂಪೆನಿಗಳಿಂದ ಸುಮಾರು 2.5 ಲಕ್ಷ ರೂಪಾಯಿ ಸಾಲ ಪಡೆದಿದ್ದರು, ಆದರೆ ವಾರದ ಕಂತು ಕಟ್ಟುವಂತೆ ಸಿಬ್ಬಂದಿಗಳು ಕಿರುಕುಳ ನೀಡಿದ್ದಾರೆ.

ಸಿಬ್ಬಂದಿಗಳ ಕಿರುಕುಳದಿಂದ ಬೇಸತ್ತ ಬಸವರಾಜ್ ಫೆ.11 ರಂದು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಕೂಡಲೇ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಸದ್ಯ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ರಾಯಬಾಗ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ತನಿಖೆ ನಡೆಸಲಾಗುತ್ತಿದೆ.


## ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ: ಎನ್.ವೈ.ಗೋಪಾಲಕೃಷ್ಣ

• ಉದಯವಾಹಿನಿ ನಾಯಕನಹಟ್ಟಿ

ಕೇಂದ್ರ ಸರ್ಕಾರದ ಅಮೃತ್-2.0 ಯೋಜನೆಯಡಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗುವುದು ಎಂದು ಶಾಸಕ ಎನ್.ವೈ.ಗೋಪಾಲಕೃಷ್ಣ ಹೇಳಿದರು.

ಪಟ್ಟಣದ ಫಿಲ್ಟರ್‌ಹೌಸ್ ಬಳಿ 16.46 ಕೋಟಿ ವೆಚ್ಚದ ಅಮೃತ್- 2.0 ಯೋಜನೆಯ 'ಹರ್‌ಘರ್ ಜಲ್ ಕುಡಿಯುವ ನೀರಿನ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಯೋಜನೆಯಡಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಹಳ್ಳಿಗಳಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸಲಾಗುವುದು. ಕೇಂದ್ರದ ಶೇ 50 ರಾಜ್ಯ ಸರ್ಕಾರದ ಶೇ 40 ಮತ್ತು ಸ್ಥಳೀಯ ಸಂಸ್ಥೆಗಳ ಶೇ 10ರ ಅನುದಾನದಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು ಡಿಸೆಂಬರ್ ವೇಳೆಗೆ ಕಾಮಗಾರಿ ಪೂರ್ಣಗೊಳಿಸುವ ಗುರಿ ನೀಡಲಾಗಿದೆ. ಸ್ಥಳೀಯ ಜನಪ್ರತಿನಿಧಿಗಳು ಕಾಮಗಾರಿಗೆ ಬೆಂಬಲವಾಗಿ ನಿಂತು ಪೂರ್ಣಗೊಳಿಸುವ ಉಸ್ತುವಾರಿ ವಹಿಸಬೇಕು ಎಂದು ಸಲಹೆ ನೀಡಿದರು.

'ಕೇಂದ್ರ ಸರ್ಕಾರ ಈಗಾಗಲೇ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ★ 5,300ಕೋಟಿ ಘೋಷಣೆ ಮಾಡಿದೆ. ಅದರ ಬಿಡುಗಡೆಗೆ ಕೆಲವು ಷರತ್ತುಗಳನ್ನು ಹಾಕಿದೆ. ಇವುಗಳನ್ನು ರಾಜ್ಯ ಸರ್ಕಾರ ಪೂರ್ಣಗೊಳಿಸಿದ ತಕ್ಷಣ ಕೇಂದ್ರ ಘೋಷಣೆ ಮಾಡಿದ ಹಣವನ್ನು ಬಿಡುಗಡೆ ಮಾಡಲಿದೆ' ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದರು. ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಟಿ. ಮಂಜುಳಾ ಶ್ರೀಕಾಂತ್, ಉಪಾಧ್ಯಕ್ಷೆ ಸರ್ವಮಂಗಳಾ, ಸದಸ್ಯರಾದ ಸೈಯದ್ ಅನ್ವರ್, ಜೆ.ಆರ್. ರವಿಕುಮಾರ್, ತಿಪ್ಪೇಶ್, ಎನ್.ಮಹಾಂತಣ್ಣ ಸುನೀತಾ, ಗುರುಶಾಂತಮ್ಮ, ಕೆ.ಪಿ. ತಿಪ್ಪೇಸ್ವಾಮಿ, ಮುಖ್ಯಾಕಾರಿ ಒ.ಶ್ರೀನಿವಾಸ್, ಮುಖಂಡರಾದ ಎಂ.ವೈ.ಟಿ.ಸ್ವಾಮಿ, ಕೊಂಡ್ಲಹಳ್ಳಿ ರೇವಣ್ಣ, ರಾಮದಾಸ್ ಇದ್ದರು.


ಉದಯವಾಹಿನಿ ಚಿತ್ರ

---

• ಬಾಕಿ ಪ್ರಕರಣ ತ್ವರಿತ ವಿಲೇವಾರಿಗೆ ನ್ಯಾಯಧೀಶರ , ವಕೀಲರ ಪಾತ್ರ ಮಹತ್ವ: ಹೆಚ್ ಕೆ ಪಾಟೀಲ್

# ಜನತೆ ನ್ಯಾಯಾಂಗದ ಮೇಲಿನ ವಿಶ್ವಾಸ ಕಳೆದುಕೊಂಡರೆ ನ್ಯಾಯದಾನ ವ್ಯವಸ್ಥೆ ನಿರುಪಯುಕ್ತ: ನ್ಯಾ.ಮೂ ಸಂದೇಶ

ಸರ್ಕಾರದ ಬೊಕ್ಕಸ ಖಾಲಿಯಾಗಿಲ್ಲ

ಕಾನೂನು ಸಮರ್ಪಕ ಬಳಕೆ

• ಉದಯವಾಹಿನಿ ಮುದ್ದೇಬಿಹಾಳ

ಕರ್ನಾಟಕ ನ್ಯಾಯಾಂಗ ವ್ಯವಸ್ಥೆಗೆ ದೇಶದಲ್ಲಿಯೇ ಒಳ್ಳೆಯ ಹೆಸರಿದೆ. ಬಾಕಿ ಪ್ರಕರಣಗಳ ಸಂಖ್ಯೆ ಹೆಚ್ಚಾದಲ್ಲಿ ನ್ಯಾಯದಾನ ವ್ಯವಸ್ಥೆ ಬಗ್ಗೆ ಬೆನ್ನು ಚಪ್ಪರಿಸಿಕೊಳ್ಳುವುದು ಹೇಗೆ ಸಾಧ್ಯ. ಹೀಗಾಗಿ ಬಾಕಿ ಪ್ರಕರಣಗಳ ತ್ವರಿತ ವಿಲೇವಾರಿಯಲ್ಲಿ ನ್ಯಾಯಾಧೀಶರ ಜೊತೆಗೆ ವಕೀಲರ ಪಾತ್ರವೂ ಮಹತ್ವದ್ದಾಗಿರುತ್ತದೆ ಎನ್ನುವುದನ್ನರಿತುಕೊಳ್ಳಬೇಕು ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಇಲ್ಲಿನ ಕೋರ್ಟ್ ಕಾಂಪ್ಲೆಕ್ಸ್‌ನಲ್ಲಿ ಭಾನುವಾರ ಏರ್ಪಡಿಸಿದ್ದ 5ನೇ ಹೆಚ್ಚುವರಿ ಜಿಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಲಾ ಛೇಂಬರ್ಸ್, ಸಹಾಯಕ ಸರ್ಕಾರಿ ಅಭಿಯೋಜಕರ ಕಚೇರಿ ಕಟ್ಟಡಗಳ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಜಯಪುರ ಜಿಲ್ಲೆಯಲ್ಲಿ 4 ಲಕ್ಷ 5 ಸಾವಿರ ಕುಟುಂಬಗಳಿವೆ. 66000 ಕೇಸ್ ಬಾಕಿ ಇವೆ. ಇದು ಪ್ರತಿ 6 ನೇ ಕುಟುಂಬಕ್ಕೆ ಒಂದು ಕೇಸ್‌ನಂತಾಗುತ್ತದೆ. ಜನರಿಗೆ ಕಾನೂನು ಪ್ರಜ್ಞೆ ಸರಿಯಾಗಿರುವುದಿಲ್ಲ, ವಕೀಲರು ವಕೀಲರು ಕ್ರಿಯಾಶೀಲರಾಗಿ ಕಾನೂನು ತಿಳಿಸಿಕೊಡಬೇಕು. ಕಕ್ಷಿದಾರರನ್ನು ಗೌರವದಿಂದ ಕಾಣಬೇಕು. ಮಾಜಿ ಸೈನಿಕರು, ಮಾಧ್ಯಮದವರು ಕಾನೂನು ತಿಳಿದುಕೊಂಡು ಮುನ್ನಡೆಯಬೇಕು. ಮುದ್ದೇಬಿಹಾಳದಲ್ಲಿ ಜಿಲ್ಲಾ ಕೋರ್ಟ ಸ್ಥಾಪನೆಯಾಗುವಲ್ಲಿ ವಕೀಲರ ಸಂಘದ ಅಧ್ಯಕ್ಷ ಎಸ್.ಎಸ್.ಮಾಲಗತ್ತಿಯವರ ಶ್ರಮ, ಪ್ರಯತ್ನ ಬಹಳಷ್ಟಿದೆ.

ಮೈಕ್ರೋಫೈನಾನ್ಸ್ ಹಾವಳಿ ನಿಯಂತ್ರಿಸಲು ಸರ್ಕಾರ ಸುಗ್ರಿವಾಜ್ಞೆ ಮೂಲಕ ಜಾರಿಗೊಳಿಸಿರುವ ಕಾನೂನು ಸಮರ್ಪಕ ಬಳಕೆಯಾಗಬೇಕು ಎಂದರು.

ಉದ್ಘಾಟನೆಯ ನೆರವೇರಿಸಿದ ಹೈಕೋರ್ಟ ನ್ಯಾಯಮೂರ್ತಿಗಳು, ವಿಜಯಪುರ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿ ಗಳಾದ ಎಂ.ಐ.ಅರುಣ್ ಅವರು ಮಾತನಾಡಿ, ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ವಕೀಲರು ಸಮಾಜದಲ್ಲಿ ನಾಯಕರಾಗಿರುತ್ತಿದ್ದರು. ಇವತ್ತು ನಾಯಕರಾಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇವರು ಜನನಾಯಕರಾಗಿ ಹೊರಹೊಮ್ಮಬೇಕಾದರೆ ಜನಗಳಿಗೆ ಸ್ಪಂದಿಸಬೇಕು. ಕಕ್ಷಿದಾರರಿಗೆ ಪ್ರಾಮಾಣಿಕ ಮಾರ್ಗದರ್ಶನ, ಮಹತ್ವ ಕೊಡಬೇಕು.

ಸಮಾಜ ಬದಲಾದಂತೆ ಕಾನೂನು ಅವಶ್ಯಕತೆ ಹೆಚ್ಚಾಗುತ್ತಿರುವುದನ್ನು ಅರಿತುಕೊಳ್ಳಬೇಕು. ಬದಲಾದ ಕಾಲಘಟ್ಟದಲ್ಲಿ ತಂತ್ರಜ್ಞಾನ ಬಳಸಿ ಕೊಂಡು ಅಧ್ಯಯನಶೀಲರಾಗಿ ವೃತ್ತಿ ಪಾಂಡಿತ್ಯ ಹೆಚ್ಚಿಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಹೈಕೋರ್ಟನ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ ಅವರು ಮಾತನಾಡಿ, ರೈತನ ಮಗನಾಗಿರುವ ನನಗೆ ರೈತರ ಸಂಕಷ್ಟದ ಅರಿವಿದೆ.

ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಇಡುವ ಕಕ್ಷಿದಾರನಿಗೆ ನ್ಯಾಯ ಒದಗಿಸಿದಾಗಲೇ ಕೋರ್ಟ್ ಸ್ಥಾಪನೆ ಸಾರ್ಥಕಗೊಳ್ಳುತ್ತದೆ. ನ್ಯಾಯ ಕೋರಿ ಬರುವ ಕಟ್ಟ ಕಡೆಯ ವ್ಯಕ್ತಿಗೂ ನ್ಯಾಯ ಸಿಗುವಂತಾಗಲು ವಕೀಲರು ಆತ್ಮಾವಲೋಕನ ಮಾಡಿಕೊಂಡು ನ್ಯಾಯಾಂಗದ ವಿಶ್ವಾಸ ಉಳಿಸಬೇಕು. ಸನ್ಯಾಸಿ ತರ ಜೀವಿಸಿ ಕುದುರೆ ತರ ಕೆಲಸ ಮಾಡಬೇಕು ಅನ್ನೋ ಮಾತು ಎಲ್ಲರಿಗೂ ಅನ್ವಯಿಸುತ್ತದೆ. ಹಿರಿಯ ವಕೀಲರು ಕಿರಿಯ ವಕೀಲರಲ್ಲಿ ಆತ್ಮವಿಶ್ವಾಸ ತುಂಬಬೇಕು.

ಹಂಚಿಕೊಂಡು ಬಾಳುವುದನ್ನು ಕಲಿಯಬೇಕು. ವಕೀಲೆಯರು ಸಮಾಜದ ಧ್ವನಿಯಾಗಬೇಕು ಎಂದು ಭಾವನಾತ್ಮಕವಾಗಿ ಮಾತನಾಡಿದರು.

ಅತಿಥಿಯಾಗಿದ್ದ ಶಾಸಕ ಸಿ.ಎಸ್.ನಾಡಗೌಡ, ಮುದ್ದೇಬಿಹಾಳ ವಕೀಲರ ಸಂಘದ ಅಧ್ಯಕ್ಷ ಎಸ್.ಎಸ್.ಮಾಲಗತ್ತಿ ಮಾತನಾಡಿದರು.

ಸ್ಥಳೀಯ ಜೆಎಂಎಫ್‌ಸಿ ಕೋರ್ಟ್‌ನ ಹಿರಿಯ ನ್ಯಾಯಾಧೀಶರಾದ ರವೀಂದ್ರ ಕುಮಾರ ಕಟ್ಟಿಮನಿ, ಜೆಎಂಎಫ್‌ಸಿ ನ್ಯಾಯಾಧೀಶರಾದ ಸಂಪತ್ತಕುಮಾರ ಬಳೂಲಗಿಡದ ಸೇರಿದಂತೆ ವಿಜಯಪುರ, ಬಾಗಲಕೋಟೆ ಜಿಲ್ಲೆಗಳ ಎಲ್ಲಾ ಜಿಲ್ಲಾ, ತಾಲೂಕು ನ್ಯಾಯಾಧೀಶರು, ವಕೀಲರುಗಳ ಸಂಘದ ಪದಾಧಿಕಾರಿಗಳು, ಸದಸ್ಯರು ಸೇರಿ ಹಲವರು ಉಪಸ್ಥಿತರಿದ್ದರು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶಿವಾಜಿ ನಲವಡೆ ಸ್ವಾಗತಿಸಿದರು. ಹಿರಿಯ ವಕೀಲರಾದ ಎನ್.ಆರ್. ಮೊಕಾಶಿ ನಿರೂಪಿಸಿದರು. ಎಂ.ಎ.ಲಿಂಗಸೂರ ವಂದಿಸಿದರು. ಕಾರ್ಯಕ್ರಮದ ನಂತರ ಸಚಿವ ಪಾಟೀಲರು ಶಾಸಕ ನಾಡಗೌಡರೊಂದಿಗೆ ಎಪಿಎಂಸಿಯಲ್ಲಿ ನಿರ್ಮಾಣ ಹಂತದಲ್ಲಿರುವ ದಿ ರಡ್ಡಿ ಸಹಕಾರಿ ಬ್ಯಾಂಕ್‌ಗೆ ಭೇಟಿ ನೀಡಿ ಪರಿಶೀಲಿಸಿದರು.




ಉದಯವಾಹಿನಿ ಚಿತ್ರ

> ಹೈಕೋರ್ಟನ 150 ಬೇಡಿಕೆಗಳಲ್ಲಿ 115 ಹೊಸ ಕೋರ್ಟ್ ಪ್ರಾರಂಭಿಸಿ ಸರ್ಕಾರ ಈಡೇರಿಸಿದೆ. 2200 ಹುದ್ದೆ ತುಂಬಿಕೊಳ್ಳಲಾಗುತ್ತಿದೆ. ಉಚಿತ ಭಾಗ್ಯಗಳಿಗೆ ಹಣ ಕೊಟ್ಟು ಸರ್ಕಾರದ ಬೊಕ್ಕಸ ಖಾಲಿ ಆಗಿದೆ ಎನ್ನುವ ಟೀಕಾಕಾರರು ಬೊಕ್ಕಸ ಖಾಲಿಯಾಗಿಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು -ಎಚ್.ಕೆ.ಪಾಟೀಲ, ಕಾನೂನು ಸಚಿವರು.

> ಜನತೆ ನ್ಯಾಯಾಂಗದ ಮೇಲೆ ವಿಶ್ವಾಸ ಕಳೆದುಕೊಂಡರೆ ನ್ಯಾಯದಾನ ವ್ಯವಸ್ಥೆಯೇ ನಿರುಪಯುಕ್ತವಾಗುತ್ತದೆ. ಫ್ರೀಬೀಸ್‌ಗಳಿಂದ ಜನ ಸೋಮಾರಿಗಳಾಗುತ್ತಿದ್ದಾರೆಂದು ಸುಪ್ರೀಂ ಕೋರ್ಟ್ ಹೇಳಿರುವುದು ವಾಸ್ತವ. ಜನರಿಗೆ ದುಡಿಯಲು ಹಚ್ಚಬೇಕು. ಬಸವಣ್ಣನವರ ಕಾಯಕವೇ ಕೈಲಾಸ ಎಲ್ಲ ಕಾಲದಲ್ಲೂ ಪ್ರಸ್ತುತವಾದದ್ದಾಗಿದೆ. -ಎಚ್.ಪಿ.ಸಂದೇಶ್, ನ್ಯಾಯಮೂರ್ತಿಗಳು, ಕರ್ನಾಟಕ ಹೈಕೋರ್ಟ್.

66000 ಕೇಸ್ ಬಾಕಿ

---

## ಶರಣರ ವಚನಗಳ ಮೂಲಕ ಸಮಾಜಕ್ಕೆ ಬೆಳಕು: ಪಟೇಲ್ ಯಲಗೋಡ

• ಉದಯವಾಹಿನಿ ಕೆಂಭಾವಿ

ಪಟ್ಟಣದಲ್ಲಿ ಇಂದು ಶಿವಯೋಗಿ, ಕಾಯಕಯೋಗಿ, ಕರ್ಮಯೋಗಿ ಶ್ರೀ ಸಿದ್ಧರಾಮೇಶ್ವರರ 852 ನೇ ಜಯಂತೋತ್ಸವದ ನಿಮಿತ್ತವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀ ಸಿದ್ಧರಾಮೇಶ್ವರರ ಹಾಗೂ ವಡ್ಡರ ಯಲ್ಲಣ್ಣನವರ ಭಾವಚಿತ್ರ ಮೆರವಣಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮಕ್ಕೆ ಪಟ್ಟಣದ ನೂತನ ಪುರಸಭೆ ಅಧ್ಯಕ್ಷ ರಹೀಮಾನ ಪಟೇಲ್ ಯಲಗೋಡ ಹಾಗೂ ಮಾಜಿ ಪುರಸಭೆ ಸದಸ್ಯ ಮಹಿಪಾಲರೆಡ್ಡಿ ಡಿಗ್ಗಾವಿ ಭಾವಚಿತ್ರಕ್ಕೆ ಮಾಲಾರ್ಪಣೆ ಹಾಗೂ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆ ಚಾಲನೆ ನೀಡಿ ಮಾತನಾಡಿದ ನೂತನ ಪುರಸಭೆ ಅಧ್ಯಕ್ಷ ರಹೀಮಾನ್ ಪಟೇಲ್ ಯಲಗೋಡ, ಶರಣರ ಯುಗಕ್ಕು ಮುನ್ನ ನಾಡಿನಲ್ಲಿ ಮೌಢ್ಯತೆ, ರಾಜ್ಯ ಪ್ರಭುತ್ವದೊಳಗೆ ಗುಲಾಮಗಿರಿಯ ಅಟ್ಟಹಾಸ ನಡೆದಿತ್ತು. ಜಾತಿ ವ್ಯವಸ್ಥೆ ತುಂಬಿ ಜನರು ಶೋಷಣೆಗೆ ಒಳಗಾಗಿದ್ದರು. ಬಸವಾದಿ ಶರಣರ ಹೋರಾಟದಿಂದ ಕಲ್ಯಾಣ ಕ್ರಾಂತಿ ಸಂಭವಿಸಿತು.

ಸಮಾಜ ಸುಧಾರಣೆಯ ಪ್ರತಿಫಲವಾಗಿ ವಚನ ಸಾಹಿತ್ಯ ಹುಟ್ಟಿಕೊಂಡಿತು. ಅನೇಕ ಶರಣರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಬೆಳಕು ನೀಡಿದ್ದಾರೆ. ಅಂತಹ ಮಹನೀಯರಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ವಿಶಿಷ್ಟ ವಚನಕಾರರಾಗಿ ರೂಪಗೊಂಡವರು ಮಹಾನ್ ಶರಣ ಶಿವಯೋಗಿ ಸಿದ್ಧರಾಮೇಶ್ವರ ಎಂದು ಹೇಳಿದರು. ಸಂಧರ್ಭದಲ್ಲಿ ರಂಗಪ್ಪ ವಡ್ಡರ, ಮಂಜುನಾಥ್ ಭೈರಮಡ್ಡಿ, ರಮೇಶ ಚಿಂಚೋಳಿ, ಶರಣಪ್ಪ ಯಾಳಗಿ, ಪರಶುರಾಮ ಯಾಳಗಿ, ಕುಮಾರ ಭೋವಿ, ಮುದಕಪ್ಪ ಚಂದಾಪುರ, ವಿಜಯಕುಮಾರ ಭೋವಿ, ಹಳ್ಳೆಪ್ಪ ವಡ್ಡರ ಮ್ಯಾಗೇರಿ, ದುರ್ಗಾ ಪ್ರಸಾದ್, ಸಮಾಜದ ಮುಖಂಡರು ಹಾಗೂ ಯುವಕರು, ಮಹಿಳೆಯರು, ಮುದ್ದು ಮಕ್ಕಳು ಸೇರಿದಂತೆ ಅರ್ಚಕ ಪ್ರಶಾಂತ ಹಿರೇಮಠ ಇತರರು ಹಾಜರಿದ್ದರು.


ಉದಯವಾಹಿನಿ ಚಿತ್ರ

**ಉದಯ ವಾಹಿನಿ ಹೈಲೆಟ್ಸ್**
- ಸಿದ್ದರಾಮೇಶ್ವರರ 852 ನೇ ಜಯಂತೋತ್ಸವದ ಆಚರಣೆ.
- ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ
- ನೂತನ ಪುರಸಭೆ ಅಧ್ಯಕ್ಷ ಪಟೇಲ್ ಚಾಲನೆ.

## ಸಾಧನೆಗೆ ಸತತ ಪರಿಶ್ರಮ ಮುಖ್ಯ: ದೊಡ್ಡಮೇಟಿ

• ಉದಯವಾಹಿನಿ, ನರೇಗಲ್

ಬಾಲಕಿಯರು ಸ್ಪರ್ಧಾ ಮನೋಭಾವ ಬೆಳೆಸಿಕೊಂಡು ಸಾಧನೆಯತ್ತ ಮುನ್ನುಗ್ಗಬೇಕು' ಎಂದು ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ ಹೇಳಿದರು. ಪಟ್ಟಣದ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಅನ್ನದಾನ ವಿಜಯ ಬಾಲಕಿಯರ ಪ್ರೌಢಶಾಲೆಯಲ್ಲಿ ನಡೆದ 10ನೇ ತರಗತಿ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಪರೀಕ್ಷೆ ಎಂದರೆ ಭಯಪಡುವ ಅಗತ್ಯವಿಲ್ಲ ಶಾಲೆಯಲ್ಲಿ ಪಾಠವನ್ನು ಏಕಾಗ್ರತೆ ಕೇಳಬೇಕು. ಪಠ್ಯಪುಸ್ತಕವನ್ನು ಶ್ರದ್ಧೆಯಿಂದ ಓದಬೇಕು. ಈ ಮೂಲಕ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಬಹುದು ಎಂದು ತಿಳಿಸಿದರು.

ಕಳೆದ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಮಿತಿ ಆಡಳಿತಾಧಿಕಾರಿ ಎನ್.ಆರ್. ಗೌಡರ, ಶಾಲಾ ಆಡಳಿತ ಮಂಡಳಿ ಚೇರ್ಮನ್ ವೀರಣ್ಣ ಹಳ್ಳಿ ಆಡಳಿತ ಮಂಡಳಿ ಸದಸ್ಯರಾದ ಆರ್.ಜಿ. ಪಾಟೀಲ, ನಿಂಗನಗೌಡ ಲಕ್ಕನಗೌಡ, ಷಣ್ಮುಖಪ್ಪ ಶಿಕೊಪ್ಪ, ಕೆ.ವಿ.ಬಿ.ಎಂ. ಉಚಿತ ಪ್ರಸಾದ ನಿಲಯದ ಚೇರ್ಮನ್ ಮಲ್ಲಿಕಾರ್ಜುನಪ್ಪ ಮೆಣಸಗಿ, ಶಿಕ್ಷಕ ಎಸ್.ಎನ್. ಹೂಲಗೇರಿ, ಕೆ.ಸಿ. ಜೋಗಿ, ಆರ್.ಎಂ. ಗುಳಬಾಳ, ಬಸಮ್ಮ ಅಸುಂಡಿ, ವೀರೇಶ ಚುಳಕಿ, ಸಂಗಮೇಶ ಕುರುಡಗಿ, ಬಿ.ಡಿ. ಯರಗೊಪ್ಪ, ಎ.ಟಿ. ಮಳ್ಳಳ್ಳಿ, ಸರೋಜಾ ಧರ್ಮಾಯತ, ಎಂ.ಎಸ್. ಅತ್ತಾರ ಇದ್ದರು.


ಉದಯವಾಹಿನಿ ಚಿತ್ರ

## ಸಂತ ಸೇವಾಲಾಲರ ಸಂದೇಶಗಳು ಸಮಾಜಕ್ಕೆ ಮಾದರಿ

• ಉದಯವಾಹಿನಿ ವಡಗೇರಾ

ಮಹಾನ್ ಶರಣ ಸಂತ ಸೇವಾಲಾಲರು ಪವಾಡ ಪುರುಷರು ಸತ್ಯ-ಹಿಂಸೆ ಮೂಲಕ ಸಮಾಜದಲ್ಲಿ ಉತ್ತಮ ಸಂದೇಶಗಳನ್ನು ನೀಡಿದ ಮಹಾನ್ ಶರಣರು ಎಂದು ವಡಗೇರಾ ತಹಶೀಲ್ದಾರ್ ಶ್ರೀನಿವಾಸ್ ಚಾಪೆಲ್ ಹೇಳಿದರು. ತಾಲ್ಲೂಕಿನ ಬೀರನಕಲ್ ತಾಂಡಾದಲ್ಲಿ ಸಂತ ಸೇವಾಲಾಲ ಜಯಂತಿ ಪ್ರಯುಕ್ತ ಲಂಬಾಣಿ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಸಮುದಾಯದ ಅಭಿವೃದ್ಧಿಗೆ ಶಿಕ್ಷಣ ಅತ್ಯಂತ ಮಹತ್ವದ್ದಾಗಿದೆ ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವಂತೆ ಸಲಹೆ ನೀಡಿದರು. ಸಂತ ಸೇವಾಲಾಲರು ಒಂದೇ ಸಮುದಾಯಕ್ಕೆ ಸೀಮಿತವಾಗದೆ ಜಾತಿ ಧರ್ಮ ಭೇದ ಭಾವವಿಲ್ಲದೆ ನಾವೆಲ್ಲರೂ ಸಮಾನರು ಎಂಬುದು ಅವರ ನೀತಿಯಾಗಿತ್ತು. ಅವರ ಸಂದೇಶಗಳು ಸಮಾಜಕ್ಕೆ ಮಾದರಿಯಾಗಿವೆ ಅವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮಕ್ಕೂ ಮೊದಲು ಸಂತ ಸೇವಾಲಾಲರ ಭಾವಚಿತ್ರದ ಮೆರವಣಿಗೆಯು ಕುಂಭ ಕಳಸದೊಂದಿಗೆ ಮಹಿಳೆಯರು ಮಕ್ಕಳು ಲಂಬಾಣಿ ಕುಣಿತದೊಂದಿಗೆ ಅದ್ದೂರಿಯಾಗಿ ಜರುಗಿತು . ಕಂದಾಯ ನಿರೀಕ್ಷಕ ಸಂಜೀವ ಕುಮಾರ್ ಕಾವಲಿ , ಗ್ರಾ ಪಂ ಸದಸ್ಯ ಚನ್ನಪ್ಪ ನಾಯಕ, ಕಿಶನ್ ರಾಠೊಡ್, ಯಂಕಪ್ಪ ರಾಠೊಡ್, ನ್ಯಾಮಣ್ಣ ನಾಯಕ್, ಶಾಂತಪ್ಪ ರಾಠೊಡ್, ಶಂಕರ್ ರಾಠೊಡ್ ದೇವರಾಜ್ ಚವಾಣ್, ತಿಪ್ಪಣ್ಣ, ಶಿವರಾಜ್ ರಾಠೊಡ್, ರವಿಕುಮಾರ್ ಚವಾಣ್, ದೇವು, ರೆಖು ನಾಯಕ್, ಗ್ರಾಮ ಪಂಚಾಯತಿ ಸದಸ್ಯರು ಗ್ರಾಮದ ಮುಖಂಡರು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

## ಪರಿಸರ ಸಂರಕ್ಷಣೆಯ ಅತ್ಯಂತ ಬಹುದೊಡ್ಡ ಜವಾಬ್ದಾರಿ ಯುವ ಸಮುದಾಯದ ಮೇಲಿದೆ

• ಉದಯವಾಹಿನಿ, ಚಿಂಚೋಳಿ

ಈಗಿನ ಆಧುನಿಕ ಯುಗದಲ್ಲಿ ಪರಿಸರ ಸಂರಕ್ಷಣೆ ಮಾಡುವ ಅತ್ಯಂತ ಬಹು ದೊಡ್ಡ ಜವಾಬ್ದಾರಿ ಯುವ ಸಮೂದಾಯ ಮೇಲಿದೆ, ಅರಣ್ಯ ಸಂರಕ್ಷಣೆ ಜೋತೆ ಪ್ರತಿಯೊಂದು ಮನೆಯ ಆವರಣದಲ್ಲಿ ಮತ್ತು ಶಾಲೆಯ ಆವರಣದಲ್ಲಿ ತಪ್ಪದೆ ಗಿಡಮರಗಳು ಬೆಳೆಸಿ ಪೋಷಿಸಬೇಕು ಆಗ ಮರವನ್ನು ಹೆಮ್ಮರವಾಗಿ ಬೆಳೆದು ಉತ್ತಮ ಗಾಳಿ ನೆರಳು ಜೋತೆ ಆಮ್ಲಜನಕ ಕೊಡುತ್ತದೆ ಎಂದು ಬಿ.ಆರ್.ಪಿ ಯಶ್ವಂತ್ ಪೂಜಾರಿ ಹೇಳಿದರು.

ತಾಲ್ಲೂಕಿನ ಅಣವಾರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಕೋ ಕ್ಲಬ್ ಕಾರ್ಯಕ್ರಮ ಹಾಗೂ ಪರಿಸರ ಸಂರಕ್ಷಣೆ ಜಾಗೃತಿ ಕಾರ್ಯಕ್ರಮವನ್ನು ಉಧ್ಘಾಟಿಸಿ ಮಾತನಾಡಿದ ಅವರು,ಆಧುನಿಕ ಜೀವನದಲ್ಲಿ ಮನುಷ್ಯನ ವೈಭವೋಪಿತ ಜೀವನಕ್ಕಾಗಿ ಪರಿಸರವನ್ನು ಮಲ್ಲಿನಗೊಳಿಸುತ್ತಿದ್ದಾನೆ,ಪರಿಸರದಲ್ಲಿನ ಗಾಳಿ,ನೀರು ಮಾಲಿನವಾಗಿ ಮನುಷ್ಯನ ಆರೋಗ್ಯಕ್ಕೆ ಹಾನಿ ಉಂಟಾಗುತ್ತಿದೆ.

ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಶಿವಪುತ್ರ ದೊಡ್ಡಮನಿ, ಗ್ರಾಮ ಪಂಚಾಯತ ಅಧ್ಯಕ್ಷೆ ಅನಿತಾ ಆನಂದ, ಗ್ರಾಪಂ. ಸದಸ್ಯರಾದ ಡಾ.ಶಿವಪ್ಪಾ, ಇಸ್ಮಾಯಿಲ್ ಪಟೇ ಲ್, ರಾಜೇಶ್ವರಿ ರೇವಣಸಿದ್ದಪ್ಪ, ಎಸ್ ಡಿಎಂಸಿ ಅಧ್ಯಕ್ಷ ಹಣಮಂತ ಗೌರಿ,ಸದಸ್ಯ ನಾಗಪ್ಪ ಗೌರಿ,ಶಾಲೆಯ ಮುಖ್ಯ ಗುರುಗಳಾದ ರತ್ನಮ್ಮ ಅಧ್ಯಕ್ಷತೆ ವಹಿಸಿದ್ದರು,ಅತಿಥಿ ಶಿಕ್ಷಕ ಬಸವ ರಾಜ ಸೈದಾಪುರ,ಸುಮ್ಮಯ್ಯ,ಶಾಲೆಯ ಮುದ್ದುಮಕ್ಕಳು ಇದ್ದರು.


ಉದಯವಾಹಿನಿ ಚಿತ್ರ

ಗಿಡಮರಗಳು ಬೆಳೆಸಿ ಪೋಷಿಸಬೇಕು

> ಅತಿಯಾದ ಪ್ಲಾಸ್ಟಿಕ್ ಬಳಕೆ,ಇಂಧನ ಬಳಕೆ ಇತ್ಯಾದಿ ಕಾರಣಗಳಿಂದಾಗಿ ಪರಿಸರ ಸಂರಕ್ಷಣೆಯಲ್ಲಿ ಮನುಷ್ಯ ದಾರಿ ತಪ್ಪುತ್ತಿದ್ದಾನೆ,ಮುಂದಿನ ಪೀಳಿಗೆಗಾಗಿ ಸಮಾಜದ ಭಾಗವಾದ ನಾವೆಲ್ಲರೂ ಪರಿಸರವನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು -ಯಶ್ವಂತ್ ಪೂಜಾರಿ

## ಮಹಿಳಾ ಅಧಿಕಾರಿಗೆ ನಿಂದಿಸಿದ ಆರೋಪ ಹೊತ್ತಿರೋ ಶಾಸಕರ ಪುತ್ರನಿಗೆ ಕ್ಷೀರಾಭಿಷೇಕ

• ಉದಯವಾಹಿನಿ ಭದ್ರಾವತಿ

ಮಹಿಳಾ ಅಧಿಕಾರಿಯೊಬ್ಬರಿಗೆ ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ ಎಂಬ ಆರೋಪವನ್ನು ಎದುರಿಸುತ್ತಿರುವ ಶಾಸಕರ ಪುತ್ರನಿಗೆ ಹಾಲಿನ ಅಭಿಷೇಕ ಮಾಡಿರುವ ಘಟನೆ ಭದ್ರಾವತಿಯಲ್ಲಿ ನಡೆದಿದೆ. ಅಕ್ರಮ ಮರಳು ಗಣಿಗಾರಿಕೆ ನಿಯಂತ್ರಣಕ್ಕೆ ಮುಂದಾದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಮಹಿಳಾ ಅಧಿಕಾರಿಗೆ ಭದ್ರಾವತಿಯ ಶಾಸಕ ಬಿ.ಕೆ.ಸಂಗಮೇಶ್ ಅವರ ಪುತ್ರ ಬಿ.ಎಸ್.ಬಸವೇಶ್ ಅವರು ನಿಂದಿಸಿದ್ದಾರೆ ಎಂಬ ಮಾತು ಕೇಳಿ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಬೇಕು ಎಂದು ಹಾಗೂ ಕಾನೂನು ಕ್ರಮ ಆಗ್ರಹಿಸಿ ಬಿಜೆಪಿ, ಜೆಡಿಎಸ್ ಶಾಸಕರು ಪ್ರತಿಭಟನೆ ನಡೆಸುತ್ತಿದ್ದಾರೆ. ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಈ ಸಂದರ್ಭ ಪ್ರತಿಭಟನೆ ನಡೆದಿತ್ತು. ಈ ಮಧ್ಯೆ, ನಗರಸಭೆ ಅಧ್ಯಕ್ಷರ ಚುನಾವಣೆ ಹಿನ್ನೆಲೆಯಲ್ಲಿ ಶನಿವಾರ ನಗರಸಭೆ ಮುಂಭಾಗ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಜಮಾಯಿಸಿದ್ದರು. ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಬೈಕ್ ರ್‍ಯಾಲಿ ಸಹ ನಡೆಸಿದ್ದರು.


ಉದಯವಾಹಿನಿ ಚಿತ್ರ

# ನಿವೃತ್ತ ಯೋಧರ ಬೇಡಿಕೆ ಈಡೇರಿಸಲು ಬದ್ಧ: ಕುಮಾರಸ್ವಾಮಿ

### ಗಡಿಯಲ್ಲಿನ ಅಕ್ರಮ ಚಟುವಟಿಕೆ, ನಕ್ಸಲ್ ಹಾವಳಿಯಲ್ಲಿ ಕೆಲಸ ಕಷ್ಟಕರವಾದದ್ದು ಸೇವೆಯನ್ನು ಸರ್ಕಾರಗಳು ಮರೆಯಬಾರದು

• ಉದಯವಾಹಿನಿ ಹಾಸನ

ಹಲವು ವಿಭಾಗದಲ್ಲಿ ನಿವೃತ್ತ ಯೋಧರು ದೇಶಕ್ಕೆ ಉತ್ತಮ ಸೇವೆ ಸಲ್ಲಿಸುತ್ತಿದ್ದು, ಅವರ ಹಲವಾರು ಬೇಡಿಕೆ ಬಗ್ಗೆ ಕೇಂದ್ರದ ಗೃಹ ಸಚಿವರು, ರಕ್ಷಣಾ ಸಚಿವರೊಂದಿಗೆ ಮಾತನಾಡಿ ಅಗತ್ಯ ಕ್ರಮಕ್ಕೆ ಪ್ರಯತ್ನ ಮಾಡಲಾಗುವುದು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದ ಹೊರವಲಯದ ಕೆಂಚಟ್ಟಹಳ್ಳಿಯಲ್ಲಿ ನಿವೃತ್ತ ಅರೆಸೇನಾ ಪಡೆಯ ಯೋಧರ ಭವನ ಉದ್ಘಾಟಿಸಿ ಅವರು ಮಾತನಾಡಿದರು. ಇಂದು ಸಂಘಕ್ಕೆ ಅಗತ್ಯವಾದ ಕಟ್ಟಡ ನಿರ್ಮಿಸಿದ್ದು ಉತ್ತಮ ಬೆಳವಣಿಗೆಯಾಗಿದೆ. ನಿವೃತ್ತ ಯೋಧರಿಗೆ ಸೂಕ್ತ ಸೌಲಭ್ಯ ಒದಗಿಸಲು ಭವನ ನಿರ್ಮಿಸಿದ್ದು ಶ್ಲಾಘನೀಯ ಅರೆಸೇನಾ ಯೋಧರ ಕರ್ತವ್ಯ ಹಾಗೂ ಗಡಿಯಲ್ಲಿನ ಅಕ್ರಮ ಚಟುವಟಿಕೆ, ನಕ್ಸಲ್ ಹಾವಳಿಯಲ್ಲಿ ಕೆಲಸ ಕಷ್ಟಕರವಾದದ್ದು ಅವರ ಸೇವೆಯನ್ನು ಸರ್ಕಾರಗಳು ಮರೆಯಬಾರದು. ಯೋಧರ ಕುಟುಂಬದೊಂದಿಗೆ ಸಮಾರಂಭದಲ್ಲಿ ಭಾಗವಹಿಸಿದ್ದು ಸಂತಸ ತಂದಿದೆ ಎಂದರು. ಅರೆಸೇನಾ ಯೋಧರ ವರ್ಗಾವಣೆ ವಿಚಾರದಲ್ಲಿ ನನಗೆ ಮನವಿ ಕೊಟ್ಟಾಗ. ಇದನ್ನು ಕಾರ್ಯಗತ ಮಾಡಲು ಕಷ್ಟಕರವಾಗಿತ್ತು. ನಿಮ್ಮ ಬೇಡಿಕೆಗಳ ಕುರಿತು ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸಲಾಗುವುದು.

ಎಚ್.ಡಿ. ದೇವೇಗೌಡರ ಸಹಾಯದೊಂದಿಗೆ ನಿಮ್ಮ ಬೇಡಿಕೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು. ಆರೋಗ್ಯ ಸಮಸ್ಯೆ ಇದ್ದರೂ ನಿಮ್ಮ ಪ್ರೀತಿಯ ಆಹ್ವಾನಕ್ಕೆ ಮಣಿದು ಬಂದಿದ್ದೇನೆ. ನಿಮ್ಮ ಜೀವ ಉಳಿಸಿಕೊಂಡು ದೇಶದ ರಕ್ಷಣೆಗೆ ನೀವು ಸಲ್ಲಿಸಿರುವ ಸೇವೆಗೆ ಸೆಲ್ಯೂಟ್ ಮಾಡಲು ಬಂದಿದ್ದೇನೆ ಎಂದರು. ನಾನು ಹೆಚ್ಚು ಅವಧಿ ಮುಖ್ಯಮಂತ್ರಿ ಆಗಿದ್ದರೆ ರಾಜ್ಯಕ್ಕೆ ಮತ್ತನ್ನು ಕಾರ್ಯಕ್ರಮ ರೂಪಿಸಲಾಗುತ್ತಿತ್ತು. ಆದರೆ ದುರಾದೃಷ್ಟ ಹಾಗಾಗಲಿಲ್ಲ.

ಇಂದು ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆ ಜಾರಿಗಾಗಿ 2.10 ಲಕ್ಷ ಕೋಟಿ ಸಾಲ ಮಾಡಿದೆ. ಈಗಾಗಲೇ ಸಾಲದ ಪ್ರಮಾಣ ಒಟ್ಟು 27 ಲಕ್ಷ ಕೋಟಿ ದಾಟಿದೆ. ಸರ್ಕಾರವೇ ಲಕ್ಷ ಕೋಟಿ ಸಾಲದಲ್ಲಿದೆ. ಕೇವಲ 2-3 ಲಕ್ಷ ಸಾಲಕ್ಕೆ ಹೆದರಿ ಆತ್ಮಹತ್ಯೆಗೆ ಶರಣಾಗುವುದು ಏಕೆ? ಯೋಚನೆ ಮಾಡಿ ತೀರ್ಮಾನಿಸಿ ಎಂದು ಹೇಳಿದರು.

ಸಂಘದ ಸದಸ್ಯ ವಿಜಯಕುಮಾರ್ ಪ್ರಾಸ್ತಾವಿಕವಾರಿ ಮಾತನಾಡಿದರು.ಇದೇ ವೇಳೆ ಕಿರುಮಾಹಿತಿ ಪುಸ್ತಕ ಬಿಡುಗಡೆ ಮಾಡಲಾಯಿತು.

ಶಾಸಕರಾದ ಎಚ್.ಡಿ.ರೇವಣ್ಣ, ಎ.ಮಂಜು, ಸಿ.ಎನ್. ಬಾಲಕೃಷ್ಣ, ಮಾಜಿ ಶಾಸಕರಾದ ಎಚ್.ಕೆ.ಕುಮಾರಸ್ವಾಮಿ, ಕೆ.ಎಸ್.ಲಿಂಗೇಶ್, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ನಗರಸಭೆ ಅಧ್ಯಕ್ಷ ಎಂ.ಚಂದ್ರೇಗೌಡ, ಎಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್, ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ, ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಪಿ. ಕೃಷ್ಣಗೌಡ, ಕಣದಳ್ಳಿ ಮಂಜೇಗೌಡ, ನಿವೃತ್ತ ಯೋಧರ ಒಕ್ಕೂಟದ ಜಿಲ್ಲಾ ಘಟಕದ ಅಧ್ಯಕ್ಷ ಪಿ.ವಿ. ನಾಗೇಶ್, ಉಪಾಧ್ಯಕ್ಷ ಎಂ.ಜಿ. ರಮೇಶ್, ನಾಗಪ್ಪ, ಗೌರವಾಧ್ಯಕ್ಷ ನವಾಬ್ ಖಾನ್, ಯು.ನಾರಾಯಣ್ ಇತರರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ


ಭವನ ನಿರ್ಮಿಸಿದ್ದು ಶ್ಲಾಘನೀಯ

**ಜನಪರ ಕೆಲಸ ಮಾಡುತ್ತಿದ್ದೇನೆ**

ನಿಮ್ಮ ಮನೆಯ ಮಗ ಕುಟುಂಬದ ಸದಸ್ಯನಾಗಿ ನನ್ನನ್ನು ಸ್ವೀಕರಿಸುತ್ತಿರೋ ಗೊತ್ತಿಲ್ಲ. ಆದರೆ ಜನಪರ ಕೆಲಸ ಮಾಡುತ್ತಿದ್ದೇನೆ. ನಮ್ಮ ತಂದೆಯೂ ಸಾಕಷ್ಟು ಕೆಲಸ ಮಾಡಿದ್ದಾರೆ. ದೇವೇಗೌಡರಿಗೆ 93 ವರ್ಷವಾದರೂ, ತೀವ್ರ ಜ್ವರ ಇದ್ದರೂ ಸದನದಲ್ಲಿ ಮಾತನಾಡಲು ಹೊರಡುತ್ತಾರೆ. ಕಾವೇರಿ ನದಿ, ರೈತರ ಪರವಾಗಿ ಮಾತನಾಡುತ್ತಾರೆ ಎಂದರೆ ಜನರ ಬಗ್ಗೆ ಕಾಳಜಿ ಎಷ್ಟಿದೆ ಎಂಬುದನ್ನು ಕಾಣಬಹುದು. ಜಿಲ್ಲೆಯ ಋಣವನ್ನು ತಂದೆ ದೇವೇಗೌಡರು ಜೀವಂತವಾಗಿರುವ ವೇಳೆಯಲ್ಲೇ ಪೂರೈಸುವ ನಿಟ್ಟಿನಲ್ಲಿ ಕೆಲಸ ಮಾಡವುದಾಗಿ ಭರವಸೆ ನೀಡಿದರು.

> ಹಾಸನ ಜಿಲ್ಲೆಯಲ್ಲಿ 6 ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜು, ಹಲವು ಡಿಪ್ಲೊಮಾ ಕಾಲೇಜುಗಳಿವೆ.ಇಲ್ಲಿನ ವಿದ್ಯಾರ್ಥಿಗಳಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಐಟಿ ಪಾರ್ಕ್ ಸ್ಥಾಪನೆಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಯತ್ನ ಮಾಡಲಿ ಎಂದು ಮನವಿ ಮಾಡಿದರು -ಸ್ವರೂಪ್ ಪ್ರಕಾಶ್, ಶಾಸಕ

# ಸಿದ್ಲಿಂಗು 2 ಚಿತ್ರದಲ್ಲೂ ಮುಂದುವರಿದ ಯೋಗಿ



ಸಿದ್ಲಿಂಗು 2. ನಿರ್ಮಾಣ: ಶ್ರೀಹರಿ, ರಾಜು ಶೇರೇಗಾರ್. ನಿರ್ದೇಶನ: ವಿಜಯ್ ಪ್ರಸಾದ್. ಪಾತ್ರವರ್ಗ: ಲೂಸ್ ಮಾದ ಯೋಗಿ, ಸೋನು ಗೌಡ, ಸುಮನ್ ರಂಗನಾಥ್, ಪದ್ಮಜಾ ರಾವ್, ಬಿ. ಸುರೇಶ ಮುಂತಾದವರು. ಸ್ಟಾರ್: 3/5 ನಿರ್ದೇಶಕ ವಿಜಯ್ ಪ್ರಸಾದ್ ಅವರು ಸಿನಿಮಾ ಮಾಡುವ ಶೈಲಿಯೇ ಭಿನ್ನ. ಜನರ ನಡುವಿನ ಸಂಬಂಧಗಳ ಎಳೆಯನ್ನೇ ಇಟ್ಟುಕೊಂಡು ಅವರು ನವಿರಾದ ಕಥೆ ಹೇಳುತ್ತಾರೆ. ಆದರೆ ಇತ್ತೀಚಿನ ಕೆಲವು ಸಿನಿಮಾಗಳಲ್ಲಿ ಕೊಂಚ ಹದ ತಪ್ಪಿತ್ತು. ಡಬಲ್ ಮೀನಿಂಗ್ ಸಂಭಾಷಣೆಗಳ ಬಳಕೆಯಿಂದ ನಿಜವಾದ ಫ್ಲೇವರ್ ಕಾಣೆ ಆಗಿತ್ತು. ಆದರೆ ಈಗ ವಿಜಯ್ ಪ್ರಸಾದ್ ಅವರು ಮತ್ತೆ ಸರಿಯಾದ ಹಳಿಗೆ ಮರಳಿದ್ದಾರೆ. ಅದು 'ಸಿದ್ಲಿಂಗು 2' ಸಿನಿಮಾ ಮೂಲಕ. ಈ ಸಿನಿಮಾದ ವಿಮರ್ಶೆ ಇಲ್ಲಿದೆ. ಕೇವಲ ಶೀರ್ಷಿಕೆ ಬೇಕು ಎಂಬ ಕಾರಣಕ್ಕೆ ವಿಜಯ್ ಪ್ರಸಾದ್ ಅವರು 'ಸಿದ್ಲಿಂಗು 2' ಸಿನಿಮಾ ಮಾಡಿಲ್ಲ. ಬದಲಿಗೆ ನಿಜವಾಗಿಯೂ 'ಸಿದ್ಲಿಂಗು' ಕಥೆಯನ್ನು 2ನೇ ಪಾರ್ಟ್‌ನಲ್ಲಿ ಮುಂದುವರಿಸಿದ್ದಾರೆ. ಕಾರಿಗಾಗಿ ಸಿದ್ಲಿಂಗು ನಡೆಸುವ ಹುಡುಕಾಟ, ಹೋರಾಟ ಈ ಬಾರಿಯೂ ಮುಂದುವರಿದಿದೆ. ಇಲ್ಲಿ ಕಾರು ಒಂದು ನೆಪವಷ್ಟೇ. ಅದನ್ನು ಇಟ್ಟುಕೊಂಡು ಸಂಬಂಧಗಳ ಮೌಲ್ಯವನ್ನು ತಿಳಿಸುವ ಪ್ರಯತ್ನವನ್ನು ಎಲ್ಲಾ ಪಾತ್ರಗಳ ಮೂಲಕ ಮಾಡಲಾಗಿದೆ. ಮೊದಲ ಪಾರ್ಟ್‌ನಲ್ಲಿ ಮಂಗಳಾ ಟೀಚರ್ ಪಾತ್ರವನ್ನು ರಮ್ಯಾ ಮಾಡಿದ್ದರು. ಈಗ 'ಸಿದ್ಲಿಂಗು 2' ಸಿನಿಮಾದಲ್ಲಿ ಅವರ ಪಾತ್ರ ಫ್ಲ್ಯಾಶ್ ಬ್ಯಾಕ್‌ಗೆ ಮಾತ್ರ ಸೀಮಿತವಾಗಿದೆ. ಆದರೆ ಆ ಪಾತ್ರದ ಛಾಯೆ ಕೊನೆವರೆಗೂ ಸಾಗಿ ಬಂದಿದೆ.

## ದರ್ಶನ್ ಹುಟ್ಟುಹಬ್ಬಕ್ಕೆ ಟ್ರೀಟ್: ದಿ ಡೆವಿಲ್ ಟೀಸರ್ ಬಿಡುಗಡೆ




ಅವರ ಮುಂಬರುವ ಚಿತ್ರ ದಿ ಡೆವಿಲ್ ಸಿನಿಮಾದ ಟೀಸರ್ ರಿಲೀಸ್ ಆಗಿದೆ. ನಟ ದರ್ಶನ್ ಅವರಿಗೆ ಇಂದು ಫೆ.16 ಜನ್ಮದಿನದ ಸಂಭ್ರಮ. ಎಂದಿನಂತೆ ತಮ್ಮ ನಿವಾಸದ ಹೊರಗೆ ಅವರು ಫ್ಯಾನ್ಸ್ ಜೊತೆ ಸಂಭ್ರಮಾಚರಣೆ ಮಾಡುತ್ತಿಲ್ಲ.

ಆದರೆ ಅಭಿಮಾನಿಗಳು ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬವನ್ನು ತಮ್ಮದೇ ರೀತಿಯಲ್ಲಿ ಸೆಲೆಬ್ರೇಟ್ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರ ಮುಂಬರುವ ಚಿತ್ರ 'ದಿ ಡೆವಿಲ್' ಸಿನಿಮಾದ ಟೀಸರ್ ರಿಲೀಸ್ ಆಗಿದೆ.

ಟೀಸರ್ ಬಿಡುಗಡೆಗೆ ಮುನ್ನವೇ 'ಡೆವಿಲ್' ಸಿನಿಮಾದ ಟೈಟಲ್‌ನಲ್ಲಿ ಬದಲಾವಣೆಯಾಗಿತ್ತು. ಸಿನಿಮಾ ಸೆಟ್ಟೇರಿದಾಗ 'ಡೆವಿಲ್ ದಿ ಹೀರೋ' ಅಂತಿದ್ದ ಟೈಟಲ್ ಈಗ 'ದಿ ಡೆವಿಲ್' ಎಂದು ಬದಲಾವಣೆಯಾಗಿದೆ. ದಿಢೀರ್ ಎಂದು ಟೈಟಲ್‌ನಲ್ಲಿ ಮಾರ್ಪಾಡು ಮಾಡಿದ್ಯಾಕೆ ಎಂದು ಚಿತ್ರತಂಡವಾಗಲಿ, ನಿರ್ದೇಶಕರಾಗಲಿ ಎಲ್ಲೂ ಸ್ಪಷ್ಟನೆ ಕೊಟ್ಟಿಲ್ಲ.

## ಅದ್ದೂರಿಯಾಗಿ ನಡೆದ ಡಾಲಿ, ಧನ್ಯತಾ ಮದುವೆ

ಸ್ಯಾಂಡಲ್‌ವುಡ್ ನಟ ಡಾಲಿ ಧನಂಜಯ್, ಡಾಕ್ಟರ್ ಧನ್ಯತಾ ಅವರ ಜೊತೆ ಭಾನುವಾರ ಶುಭ ಮುಹೂರ್ತದಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಹೊಸಜೀವನಕ್ಕೆ ಕಾಲಿಟ್ಟ ನವಜೋಡಿಗೆ ಸಿನಿತಾರೆಯರು, ಗಣ್ಯರು, ಆಪ್ತರು, ಅಭಿಮಾನಿಗಳು ಶುಭಹಾರೈಸಿದರು. ಮೈಸೂರಿನ ವಸ್ತುಪ್ರದರ್ಶನ ಮೈದಾನದಲ್ಲಿ ನಟ ಧನಂಜಯ್ ಮತ್ತು ಡಾಕ್ಟರ್ ಧನ್ಯತಾ ಜೋಡಿಯ ವಿವಾಹ ಅದ್ದೂರಿಯಾಗಿ ನೆರವೇರಿತು. ಬೆಳಗ್ಗೆ 8:30ರಿಂದ 10 ಗಂಟೆ ವರೆಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಮಾಂಗಲ್ಯ ಧಾರಣೆ ನಡೆಯಿತು.ಗೋಲ್ಡ್ ಕಲರ್ ಸೀರೆಯಲ್ಲಿ ಧನ್ಯತಾ ಮತ್ತು ಗೋಲ್ಡ್ ಕಲರ್ ಶೇರ್ವಾನಿಯಲ್ಲಿ ಧನಂಜಯ್ ಮಿಂಚಿದರು. ಧನ್ಯತಾ ಕುಟುಂಬದಿಂದ ಧಾರೆ ಶಾಸ್ತ್ರದ ಬಳಿಕ ಮಾಂಗಲ್ಯ ಧಾರಣೆ ನಡೆಯಿತು. ಡಾಲಿ ಮದುವೆಗೆ ಕುಟುಂಬಸ್ಥರು, ಮಠಾಧೀಶರು ಹಾಗೂ ಆಪ್ತರು ಸಾಕ್ಷಿಯಾದರು. ಜೋಡಿಗೆ ಅಕ್ಷತೆ ಹಾಕಿ ಹರಸಿದರು. ಡಾಲಿ ಮದುವೆಯಲ್ಲಿ ನಟ ಶಿವರಾಜ್‌ಕುಮಾರ್, ನಟಿ ರಮ್ಯಾ, ವಸಿಷ್ಠ ಸಿಂಹ, ಯುವರಾಜ್ ಕುಮಾರ್, ಕಾಂತಾರ ಸಿನಿಮಾ ನಟಿ ಸಪ್ತಮಿ ಗೌಡ, ವಿನಯ್ ರಾಜ್, ಬಿಗ್‌ಬಾಸ್ ಖ್ಯಾತಿಯ ದಿವ್ಯಾ ಉರುಡುಗ ಸೇರಿದಂತೆ ಅನೇಕ ಸಿನಿಮಾ ತಾರೆಯರು ಪಾಲ್ಗೊಂಡು ಜೋಡಿಗೆ ವಿಶ್ ಮಾಡಿದರು.





# ಕರ್ನಾಟಕದವಳು ಅಂತ ಹೇಳಿಕೊಳ್ಳೋಕೆ ಅಷ್ಟೊಂದು ಅವಮಾನವೇ



ಮಂದಣ್ಣರ ಛವಾ ಚಿತ್ರದ ಪೂರ್ವ ಬಿಡುಗಡೆ

ಕರ್ನಾಟಕದ ಕೂರ್ಗ್ ಮೂಲದ ರಶ್ಮಿಕಾ ಮಂದಣ್ಣ, ಕನ್ನಡ ಚಿತ್ರರಂಗದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಆದಾಗ್ಯೂ, ಅವರು ತೆಲುಗು ಚಲನಚಿತ್ರಗಳ ಮೂಲಕ ವ್ಯಾಪಕ ಮನ್ನಣೆಯನ್ನು ಗಳಿಸಿದರು.

ಕರ್ನಾಟಕದ ಕೂರ್ಗ್ ಮೂಲದ ರಶ್ಮಿಕಾ ಮಂದಣ್ಣ, ಕನ್ನಡ ಚಿತ್ರರಂಗದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಆದಾಗ್ಯೂ, ಅವರು ತೆಲುಗು ಚಲನಚಿತ್ರಗಳ ಮೂಲಕ ವ್ಯಾಪಕ ಮನ್ನಣೆಯನ್ನು ಗಳಿಸಿದರು. ಕಾಲಾನಂತರದಲ್ಲಿ, ಕೆಲವು ಕನ್ನಡ ಪ್ರೇಕ್ಷಕರು ಅವರು ತಮ್ಮ ಬೇರುಗಳಿಂದ ದೂರ ಸರಿದಿದ್ದಾರೆ ಎಂದು ಆರೋಪಿಸಿದ್ದರು. ಇನ್ನು ನಟಿಯ ಇತ್ತೀಚಿನ ಹೇಳಿಕೆ ಚರ್ಚೆಯನ್ನು ಮತ್ತೆ ಹುಟ್ಟುಹಾಕಿದೆ. ರಶ್ಮಿಕಾ ಮಂದಣ್ಣರ 'ಛವಾ' ಚಿತ್ರದ ಪೂರ್ವ-ಬಿಡುಗಡೆ ಕಾರ್ಯಕ್ರಮದ ವೀಡಿಯೊ ತುಣುಕು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ಈ ವೇಳೆ ಮಾತನಾಡಿದ ರಶ್ಮಿಕಾ, ನಾನು ಹೈದರಾಬಾದ್‌ನವಳು, ಮತ್ತು ನಾನು ಒಬ್ಬಂಟಿಯಾಗಿ ಬಂದಿದ್ದೇನೆ. ಇಂದು ನಾನು ನಿಮ್ಮ ಕುಟುಂಬದ ಭಾಗವಾಗುತ್ತೇನೆ ಎಂದು ಭಾವಿಸುತ್ತೇನೆ ಎಂದು ಹೇಳಿದರು. ಪ್ರೇಕ್ಷಕರು ಚಪ್ಪಾಳೆ ತಟ್ಟುವ ಮೂಲಕ ಪ್ರತಿಕ್ರಿಯಿಸಿದರು, ಅದಕ್ಕೆ ರಶ್ಮಿಕಾ ಮುಗುಳ್ನಗುತ್ತಾ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಇದಕ್ಕೆ ಆನ್‌ಲೈನ್‌ನಲ್ಲಿ ಪ್ರತಿಕ್ರಿಯೆಗಳ ಸುರಿಮಳೆಗೆ ಕಾರಣವಾಗಿದೆ. ಕೆಲವು ಸಾಮಾಜಿಕ ಮಾಧ್ಯಮ ಬಳಕೆದಾರರು ರಶ್ಮಿಕಾ ತೆಲುಗು ಉದ್ಯಮಕ್ಕೆ ತನ್ನನ್ನು ತಾನು ಸಮರ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದಾರೆ ಎಂದು ಟೀಕಿಸಿದ್ದಾರೆ. ಆಕೆ ತೆಲುಗು ಪ್ರೇಕ್ಷಕರು ಮತ್ತು ತೆಲುಗು ಚಲನಚಿತ್ರ ಭ್ರಾತೃತ್ವದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿದ್ದಾರೆ ಮತ್ತು ಅಂತಹ ಹೇಳಿಕೆಗಳನ್ನು ನೀಡುತ್ತಾರೆ ಎಂದು ನಾನು ಭಾವಿಸುತ್ತೇನೆ ಎಂದು ಬಳಕೆದಾರರೊಬ್ಬರು ಕಾಮೆಂಟ್ ಮಾಡಿದ್ದಾರೆ.


# ಅನುಷ್ಕಾಗೆ ಪ್ರಪೋಸ್ ಮಾಡಿದ್ರಾ ರಣಬೀರ್ ಕಪೂರ್

ಅನುಷ್ಕಾ ಶರ್ಮಾ ಹಾಗೂ ರಣಬೀರ್ ಕಪೂರ್ ಮಧ್ಯೆ ಒಳ್ಳೆಯ ಬಾಂಧವ್ಯ ಇದೆ. ಅವರು ಈ ಮೊದಲು 'ಏ ದಿಲ್ ಹೇ ಮುಷ್ಕಿಲ್' ಚಿತ್ರದಲ್ಲಿ ಒಟ್ಟಾಗಿ ನಟಿಸಿದ್ದರು. ಈ ಸಿನಿಮಾ ರಿಲೀಸ್ ಆಗಿದ್ದು 2016ರಲ್ಲಿ. ಅಂದರೆ ಚಿತ್ರ ಬಿಡುಗಡೆ ಆಗಿ 9 ವರ್ಷಗಳೇ ಕಳೆದು ಹೋಗಿವೆ. ಇಬ್ಬರ ಮಧ್ಯೆ ಒಳ್ಳೆಯ ಗೆಳೆತನ ಇದೆ. ರಣಬೀರ್ ಕಪೂರ್ ಅವರು ಈ ಮೊದಲು ಅನುಷ್ಕಾಗೆ ಪ್ರಪೋಸ್ ಮಾಡಿದ್ದರಂತೆ.

ರಣಬೀರ್ ಕಪೂರ್ ಅವರು ಆಲಿಯಾ ಭಟ್ನ ವಿವಾಹ ಆಗಿದ್ದಾರೆ. ಅದೇ ರೀತಿ ಅನುಷ್ಕಾ ಶರ್ಮಾ ಕ್ರಿಕೆಟರ್ ವಿರಾಟ್ ಕೊಹ್ಲಿಯನ್ನು ಮದುವೆ ಆಗಿ ಸುಖವಾಗಿದ್ದಾರೆ. ರಣಬೀರ್ ಕಪೂರ್ ಅವರು ಈ ಮೊದಲು ಸಾಕಷ್ಟು ನಟಿಯರ ಜೊತೆ ಆಪ್ತತೆ ಹೊಂದಿದ್ದರು. ಅನೇಕರ ಜೊತೆ ಅವರು ಡೇಟಿಂಗ್ ಮಾಡಿದ ಉದಾಹರಣೆ ಇದೆ. ಈ ಮೊದಲು ಮಾತನಾಡಿದ್ದ ಅನುಷ್ಕಾ ಶರ್ಮಾ ಅವರು, ನನಗೆ ಬಾಯ್ಸ್ ಫ್ರೆಂಡ್ಸ್ ಜಾಸ್ತಿ' ಎಂದು ಹೇಳಿದ್ದರು.

ಇದಕ್ಕೆ ರಣಬೀರ್ ಉತ್ತರಿಸಿದ್ದರು. 'ನಾನು ಇವರ ಜೊತೆ ಸಮಯ ಕಳೆದಿದ್ದೇನೆ. ಯಾರಿಗೆ ಇವರ ಜೊತೆ ಒಳ್ಳೆಯ ಗೆಳೆತನ ಬೆಳೆಯುತ್ತದೆಯೋ ಅವರಿಗೆ ಪ್ರೀತಿ ಉಂಟಾಗುತ್ತದೆ. ಆದರೆ, ಅನುಷ್ಕಾ ಆ ರೀತಿ ಏನೂ ಇಲ್ಲ, ಗೆಳೆತನ ಮಾತ್ರ ಎನ್ನುತ್ತಾರೆ. ಈ ರೀತಿ ಹೇಳಿದ ವ್ಯಕ್ತಿಯ ಸರ್ನೇಮ್ ಕಪೂರ್' ಎಂದಿದ್ದರು ರಣಬೀರ್. ಈ ವಿಚಾರ ಕೇಳಿದ ಬಳಿಕ ಅನೇಕರಿಗೆ ರಣಬೀರ್ ಕಪೂರ್ಗೂ ಅನುಷ್ಕಾ ಮೇಲೆ ಪ್ರೀತಿ ಮೂಡಿತ್ತೇ ಎನ್ನುವ ಪ್ರಶ್ನೆ ಮೂಡಿದೆ. ರಣಬೀರ್ ಕಪೂರ್ ಅವರು ಸಾಲು ಸಾಲು ಹಿಟ್ ಕಂಡಿದ್ದಾರೆ. 'ಅನಿಮಲ್' ಸಿನಿಮಾ ಸೂಪರ್ ಹಿಟ್ ಆಗಿದೆ. ಈಗ ಅವರು ರಾಮಾಯಣ ಚಿತ್ರದ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಈ ಚಿತ್ರದ ಬಗ್ಗೆ ಅಭಿಮಾನಿಗಳಿಗೆ ನಿರೀಕ್ಷೆ ಇದೆ. ಈ ಸಿನಿಮಾದಲ್ಲಿ ರಾಮನ ಪಾತ್ರದಲ್ಲಿ ರಣಬೀರ್ ಕಪೂರ್ ಕಾಣಿಸಿಕೊಳ್ಳುತ್ತಾ ಇದ್ದಾರೆ. ಇತ್ತ ಅನುಷ್ಕಾ ಶರ್ಮಾ ಅವರು ಸಿನಿಮಾ ಕೆಲಸಗಳಿಂದ ದೂರವೇ ಇದ್ದಾರೆ. ಅವರು ಯಾವುದೇ ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿಲ್ಲ.

# ಚಾಂಪಿಯನ್ಸ್ ಟ್ರೋಫಿ ಗೆಲ್ಲೋದು ಮುಖ್ಯ: ಪಾಕ್ ಉಪನಾಯಕ



ಚಾಂಪಿಯನ್ಸ್ ಟ್ರೋಫಿ ಆರಂಭಕ್ಕೆ ದಿನಗಣನೆ ಶುರುವಾಗಿದೆ. ಫೆಬ್ರವರಿ 19 ರಿಂದ ಆರಂಭವಾಗಲಿರುವ ಈ ಟೂರ್ನಿಗೆ ಪಾಕಿಸ್ತಾನ್ ಕ್ರಿಕೆಟ್ ಬೋರ್ಡ್ ಆತಿಥ್ಯವಹಿಸುತ್ತಿದೆ. ಇದಾಗ್ಯೂ ಈ ಟೂರ್ನಿಯು ಹೈಬ್ರಿಡ್ ಮಾದರಿಯಲ್ಲಿ ನಡೆಯಲಿದ್ದು, ಅದರಂತೆ ಬಹುತೇಕ ಪಂದ್ಯಗಳು ಪಾಕಿಸ್ತಾನದಲ್ಲಿ ನಡೆದರೆ, ಭಾರತದ ಪಂದ್ಯಗಳು ದುಬೈನಲ್ಲಿ ಜರುಗಲಿದೆ.

ಇನ್ನು ಫೆಬ್ರವರಿ 23 ರಂದು ದುಬೈ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆಯಲಿರುವ ಪಂದ್ಯದಲ್ಲಿ ಬದ್ಧ ವೈರಿಗಳಾದ ಭಾರತ ಮತ್ತು ಪಾಕಿಸ್ತಾನ್ ತಂಡಗಳು ಮುಖಾಮುಖಿಯಾಗಲಿದೆ. ಇಡೀ ವಿಶ್ವವೇ ಕಾತುರದಿಂದ ಕಾಯುತ್ತಿರುವ ಈ ಪಂದ್ಯದಲ್ಲಿ ಯಾರು ಗೆಲ್ಲುತ್ತಾರೆ ಎಂಬುದೇ ಈಗ ಕುತೂಹಲ. ಹೀಗಾಗಿಯೇ ಈ ಬಾರಿಯ ಟೂರ್ನಿಯಲ್ಲಿ ಭಾರತದ ವಿರುದ್ಧ ಪಾಕಿಸ್ತಾನ್ ಗೆಲ್ಲಲಿದೆಯಾ ಎಂಬ ಪ್ರಶ್ನೆಯನ್ನು ಪಾಕ್ ತಂಡದ ಉಪನಾಯಕ ಸಲ್ಮಾನ್ ಅಲಿ ಅಘಾ ಅವರಲ್ಲಿ ಕೇಳಲಾಗಿತ್ತು. ಭಾರತವನ್ನು ಸೋಲಿಸುವುದೇ ಅಥವಾ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಗೆಲ್ಲುವುದೇ ಪಾಕಿಸ್ತಾನ್ ತಂಡದ ಮುಖ್ಯ ಗುರಿ ಎಂಬ ಪ್ರಶ್ನೆಯನ್ನು ಪಿಸಿಬಿ ಪಾಡ್‌ಕಾಸ್ಟ್‌ನಲ್ಲಿ ಸಲ್ಮಾನ್ ಅಘಾ ಮುಂದಿಡಲಾಗಿತ್ತು. ಇದಕ್ಕೆ ಉತ್ತರಿಸಿದ ಪಾಕ್ ತಂಡದ ಉಪನಾಯಕ, ಪಾಕಿಸ್ತಾನ್-ಭಾರತ ಪಂದ್ಯ ಬಹಳ ಮುಖ್ಯವಾದದ್ದೇ/ ಆದರೆ ಚಾಂಪಿಯನ್ಸ್ ಟ್ರೋಫಿ ಗೆಲ್ಲುವುದು ಅದಕ್ಕಿಂತ ಮುಖ್ಯವಾದ ವಿಷಯ ಎಂದಿದ್ದಾರೆ. ನಾವು ಭಾರತವನ್ನು ಸೋಲಿಸಿ ಪಂದ್ಯಾವಳಿಯನ್ನು ಗೆಲ್ಲದಿದ್ದರೆ, ಆ ಗೆಲುವಿಗೆ ಯಾವುದೇ ಮೌಲ್ಯವಿಲ್ಲ. ಆದಾಗ್ಯೂ, ನಾವು ಭಾರತ ವಿರುದ್ಧ ಸೋತರೂ ಟ್ರೋಫಿಯನ್ನು ಎತ್ತಿ ಹಿಡಿದರೆ, ಅದು ದೊಡ್ಡ ಸಾಧನೆಯಾಗಲಿದೆ. ಹೀಗಾಗಿ ನನ್ನ ಪ್ರಕಾರ, ಭಾರತ ತಂಡವನ್ನು ಬಗ್ಗು ಬಡಿಯುವುದಕ್ಕಿಂತ, ಚಾಂಪಿಯನ್ಸ್ ಟ್ರೋಫಿ ಗೆಲ್ಲುವುದು ನಮಗೆ ಮುಖ್ಯ ಎಂದು ಸಲ್ಮಾನ್ ಅಲಿ ಅಘಾ ಹೇಳಿದ್ದಾರೆ.

### ಚಾಂಪಿಯನ್ಸ್ ಟ್ರೋಫಿಗೆ ಇಂಡೊ-ಪಾಕ್ ತಂಡಗಳು

**ಭಾರತ ತಂಡ: ರೋಹಿತ್ ಶರ್ಮಾ (ನಾಯಕ), ಶುಭ್‌ಮನ್ ಗಿಲ್ (ಉಪನಾಯಕ), ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆಎಲ್ ರಾಹುಲ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲ್ದೀಪ್ ಯಾದವ್, ಮೊಹಮ್ಮದ್ ಶಮಿ, ಅರ್ಷದೀಪ್ ಸಿಂಗ್, ರಿಷಭ್ ಪಂತ್ (ವಿಕೆಟ್ ಕೀಪರ್), ರವೀಂದ್ರ ಜಡೇಜಾ, ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ. ಪಾಕಿಸ್ತಾನ್ ತಂಡ: ಬಾಬರ್ ಆಝಂ, ಫಖರ್ ಝಮಾನ್, ಕಮ್ರಾನ್ ಗುಲಾಮ್, ಸೌದ್ ಶಕೀಲ್, ತಯ್ಯಬ್ ತಾಹಿರ್, ಫಹೀಮ್ ಅಶ್ರಫ್, ಖುಶ್ದಿಲ್ ಶಾ, ಸಲ್ಮಾನ್ ಅಲಿ ಅಘಾ (ಉಪನಾಯಕ), ಮೊಹಮ್ಮದ್ ರಿಝ್ವಾನ್ (ನಾಯಕ), ಉಸ್ಮಾನ್ ಖಾನ್, ಅಬ್ರಾರ್ ಅಹ್ಮದ್, ಹ್ಯಾರಿಸ್ ರೌಫ್, ಮೊಹಮ್ಮದ್ ಹಸ್ನೈನ್, ನಸೀಮ್ ಶಾ, ಶಾಹೀನ್ ಶಾ ಅಫ್ರಿದಿ.**

# ಬೇಕೇ ಬೇಕು... ಕೆಎಲ್ ರಾಹುಲ್ ಬೆಂಬಲಕ್ಕೆ ನಿಂತ ಗೌತಮ್ ಗಂಭೀರ್..!

ಜನವರಿ 19, 2025 ಚಾಂಪಿಯನ್ಸ್ ಟ್ರೋಫಿಗಾಗಿ ಭಾರತ ತಂಡದ ಘೋಷಣೆಗೆ ಸಮಯ ನಿಗದಿ ಮಾಡಲಾಗಿತ್ತು. ಮಧ್ಯಾಹ್ನ 12.30 ಕ್ಕೆ ಸುದ್ದಿಗೋಷ್ಠಿ ಕರೆದಿದ್ದರೂ, ಅಂದು ಭಾರತ ತಂಡದ ಘೋಷಣೆಯಾಗಿದ್ದು 3 ಗಂಟೆಗೆ. ಹೀಗೆ ಟೀಮ್ ಇಂಡಿಯಾ ಘೋಷಣೆ ವಿಳಂಬವಾಗಲು ಕೋಚ್ ಗೌತಮ್ ಗಂಭೀರ್ ಹಾಗೂ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ನಡುವಣ ಭಿನ್ನಾಭಿಪ್ರಾಯವೇ ಕಾರಣ ಎಂದು ವರದಿಯಾಗಿದೆ. ಕೆಲ ಆಟಗಾರರ ಆಯ್ಕೆಗೆ ಗೌತಮ್ ಗಂಭೀರ್ ಹಾಗೂ ಅಜಿತ್ ಅಗರ್ಕರ್ ನಡುವೆ ಭಿನ್ನಾಭಿಪ್ರಾಯಗಳಿದ್ದವು. ಹೀಗಾಗಿ ತಂಡದ ಘೋಷಣೆ ವಿಳಂಬವಾಗಿತ್ತು. ಇಲ್ಲಿ ಮುಖ್ಯವಾಗಿ ವಿಕೆಟ್ ಕೀಪರ್‌ಗಳ ಆಯ್ಕೆ ವಿಷಯದಲ್ಲಿ ಅಗರ್ಕರ್ ಹಾಗೂ ಗಂಭೀರ್ ಪರಸ್ಪರ ಭಿನ್ನ ನಿಲುವುಗಳನ್ನು ಹೊಂದಿದ್ದರು ಎಂದು ವರದಿಯಾಗಿದೆ.

**ಕೆಎಲ್ ರಾಹುಲ್ ರಿಷಭ್ ಪಂತ್:** ಟೀಮ್ ಇಂಡಿಯಾ ಆಯ್ಕೆ ಸಮಿತಿ ಮುಖ್ಯಸ್ಥ ರಿಷಭ್ ಪಂತ್ ಅವರನ್ನು ಮೊದಲ ಆಯ್ಕೆಯಾಗಿ ಪರಿಗಣಿಸಿದ್ದರು. ಆದರೆ ಅತ್ತ ಭಾರತ ತಂಡದ ಕೋಚ್ ಗೌತಮ್ ಗಂಭೀರ್ ಕೆಎಲ್ ರಾಹುಲ್ ಹಾಗೂ ಸಂಜು ಸ್ಯಾಮ್ಸನ್ ಆಯ್ಕೆಗೆ ಒಲವು ಹೊಂದಿದ್ದರು. ಇದಾದ ಬಳಿಕ ರಿಷಭ್ ಪಂತ್ ಹಾಗೂ ಕೆಎಲ್ ರಾಹುಲ್ ಅವರನ್ನು ಆಯ್ಕೆ ಮಾಡಲು ನಿರ್ಧರಿಸಲಾಗಿದೆ. ಆದರೆ ಇಲ್ಲಿ ಅಜಿತ್ ಅಗರ್ಕರ್ ರಿಷಭ್ ಪಂತ್ ಅವರನ್ನು ಮೊದಲ ಆಯ್ಕೆ ಎಂದು ಪರಿಗಣಿಸಿದ್ದಾರೆ. ಆದರೆ ಗೌತಮ್ ಗಂಭೀರ್ ಅವರು ಕೆಎಲ್ ರಾಹುಲ್ ಅವರನ್ನು ಮೊದಲ ಆಯ್ಕೆಯಾಗಿ ಪರಿಗಣಿಸಬೇಕೆಂದು ಪಟ್ಟು ಹಿಡಿದಿದ್ದರು ಎಂದು ವರದಿಯಾಗಿದೆ. ಚಾಂಪಿಯನ್ಸ್ ಟ್ರೋಫಿಗೂ ಮುನ್ನ ನಡೆದ ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಸರಣಿಯಲ್ಲಿ ಗೌತಮ್ ಗಂಭೀರ್, ರಿಷಭ್ ಪಂತ್ ಅವರನ್ನು ಒಂದೇ ಒಂದು ಪಂದ್ಯದಲ್ಲಿ ಕಣಕ್ಕಿಳಿಸಿರಲಿಲ್ಲ. ಅಲ್ಲದೆ ಮೂರು ಮ್ಯಾಚ್‌ನಲ್ಲೂ ವಿಕೆಟ್ ಕೀಪರ್ ಆಗಿ ಕೆಎಲ್ ರಾಹುಲ್ ಅವರಿಗೆ ಚಾನ್ಸ್ ನೀಡಿದ್ದರು.


ಅಷ್ಟೇ ಅಲ್ಲದೆ ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿ ಮುಕ್ತಾಯದ ಬೆನ್ನಲ್ಲೇ ಕೆಎಲ್ ರಾಹುಲ್ ಚಾಂಪಿಯನ್ಸ್ ಟ್ರೋಫಿಯಲ್ಲೂ ಟೀಮ್ ಇಂಡಿಯಾದ ವಿಕೆಟ್ ಕೀಪರ್ ಆಗಿರಲಿದ್ದಾರೆ ಎಂದು ದೃಢಪಡಿಸಿದ್ದಾರೆ. ಈ ಮೂಲಕ ಆಯ್ಕೆ ಸಮಿತಿ ಮುಖ್ಯಸ್ಥನ ನಿರ್ಧಾರದ ವಿರುದ್ಧ ಸೆಟೆದು ನಿಲ್ಲಲು ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್ ನಿರ್ಧರಿಸಿದ್ದಾರೆ.

ಭಾರತ ತಂಡದ ಕೋಚ್ ನಡೆಯಿಂದ ಚಾಂಪಿಯನ್ಸ್ ಟ್ರೋಫಿಯಲ್ಲಿ ಕನ್ನಡಿಗನಿಗೆ ನ್ಯಾಯ ಸಿಗಲಿದೆಯಾ ಎಂಬುದೇ ಈಗ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಸಿಗಬೇಕಿದ್ದರೆ ಚಾಂಪಿಯನ್ಸ್ ಟ್ರೋಫಿ ಆರಂಭದವರೆಗೆ ಕಾಯಲೇಬೇಕು.

### ಅಗರ್ಕರ್‌ಗೆ ಪರೋಕ್ಷ ಪಂಚ್

**ಭಾರತ ತಂಡದ ಘೋಷಣೆ ವೇಳೆ ಅಜಿತ್ ಅಗರ್ಕರ್ ಅವರು ರಿಷಭ್ ಪಂತ್ ಮೊದಲ ಆಯ್ಕೆಯ ವಿಕೆಟ್ ಕೀಪರ್ ಎಂದು ಹೇಳಿದ್ದರು. ಆದರೆ ಇದಕ್ಕೆ ಮೊದಲೇ ಅಸಮ್ಮತಿ ಹೊಂದಿದ್ದ ಗೌತಮ್ ಗಂಭೀರ್ ಇಂಗ್ಲೆಂಡ್ ವಿರುದ್ಧದ ಸರಣಿಯ ಮೂಲಕ ಉತ್ತರ ನೀಡಿದ್ದಾರೆ.**





# ಆರ್‌ಸಿಬಿ ತಂಡಕ್ಕೆ ಟೀಮ್ ಇಂಡಿಯಾ ಆಟಗಾರ್ತಿ ಎಂಟ್ರಿ

ವುಮೆನ್ಸ್ ಪ್ರೀಮಿಯರ್ ಲೀಗ್ 2025 ರಿಂದ ಕನ್ನಡತಿ ಶ್ರೇಯಾಂಕಾ ಪಾಟೀಲ್ ಹೊರಬಿದ್ದಿದ್ದಾರೆ.

ಕಳೆದ ಎರಡು ಸೀಸನ್‌ಗಳಲ್ಲಿ ಆರ್‌ಸಿಬಿ ಪರ 15 ಪಂದ್ಯಗಳನ್ನಾಡಿರುವ ಶ್ರೇಯಾಂಕಾ 19 ವಿಕೆಟ್ ಹಾಗೂ 81 ರನ್ ಕಲೆಹಾಕಿದ್ದರು. ಅದರಲ್ಲೂ ಕಳೆದ ಸೀಸನ್‌ನಲ್ಲಿ ಪರ್ಪಲ್ ಕ್ಯಾಪ್ ಗೆಲ್ಲುವ ಮೂಲಕ ಆರ್‌ಸಿಬಿ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸುವಲ್ಲಿ ಶ್ರೇಯಾಂಕಾ ಪಾಟೀಲ್ ಪ್ರಮುಖ ಪಾತ್ರವಹಿಸಿದ್ದರು. ವುಮೆನ್ಸ್ ಪ್ರೀಮಿಯರ್ ಲೀಗ್‌ನ ಮೊದಲ ಪಂದ್ಯದ ಬೆನ್ನಲ್ಲೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಆಘಾತ ಎದುರಾಗಿದೆ. ತಂಡದ ಸ್ಟಾರ್ ಆಟಗಾರ್ತಿ ಶ್ರೇಯಾಂಕಾ ಪಾಟೀಲ್ ಈ ಬಾರಿಯ ಢಕಐ ಟೂರ್ನಿಯಿಂದ ಹೊರಗುಳಿದಿದ್ದಾರೆ. ಅವರ ಬದಲಿಗೆ ಇದೀಗ ಟೀಮ್ ಇಂಡಿಯಾದ ಅನುಭವಿ ಆಟಗಾರ್ತಿ ಸ್ನೇಹ್ ರಾಣಾ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ. ಈ ಬಗ್ಗೆ ಆರ್‌ಸಿಬಿ ಅಧಿಕೃತ ಮಾಹಿತಿ ಪ್ರಕಟಿಸಿದ್ದು, ಅದರಂತೆ ಈ ಬಾರಿ ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಶ್ರೇಯಾಂಕಾ ಪಾಟೀಲ್ ಬದಲಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಲ್‌ರೌಂಡರ್ ಸ್ನೇಹ್ ರಾಣಾ ಕಾಣಿಸಿಕೊಳ್ಳಲಿದ್ದಾರೆ ಎಂದು ತಿಳಿಸಿದೆ. ಆರ್‌ಸಿಬಿ ತಂಡದ ಖಾಯಂ ಸದಸ್ಯೆಯಾಗಿರುವ ಶ್ರೇಯಾಂಕಾ ಪಾಟೀಲ್ ಮೊಣಕಾಲಿನ ಗಾಯದ ಸಮಸ್ಯೆಯಿಂದ ಬಳಲುತ್ತಿದ್ದಾರೆ.



# ಯಶಸ್ವಿ ಜೈಸ್ವಾಲ್ ಗಾಯಾಳು ನಿರ್ಣಾಯಕ ಪಂದ್ಯಕ್ಕೆ ಅಲಭ್ಯ

ರಣಜಿ ಟೂರ್ನಿಯ ಸೆಮಿಫೈನಲ್ ಪಂದ್ಯವು ಶುರುವಾಗಲಿದೆ. ಅಹಮದಾಬಾದ್‌ನಲ್ಲಿ ನಡೆಯಲಿರುವ ಮೊದಲ ಸೆಮಿಫೈನಲ್‌ನಲ್ಲಿ ಕೇರಳ ಮತ್ತು ಗುಜರಾತ್ ತಂಡಗಳು ಮುಖಾಮುಖಿಯಾದರೆ, ನಾಗ್ಪುರದಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲಿ ಮುಂಬೈ ಮತ್ತು ವಿದರ್ಭ ತಂಡಗಳು ಕಣಕ್ಕಿಳಿಯಲಿದೆ. ಈ ಪಂದ್ಯಕ್ಕೆ ಮುಂಬೈ ತಂಡದ ಸ್ಟಾರ್ ಆಟಗಾರ ಯಶಸ್ವಿ ಜೈಸ್ವಾಲ್ ಅಲಭ್ಯರಾಗಿದ್ದಾರೆ. ಝೂಹಿರ್ ಯೂಸುಫ್ ಟೀಮ್ ಇಂಡಿಯಾದ ಯುವ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ರಣಜಿ ಟೂರ್ನಿಯ ಸೆಮಿಫೈನಲ್ ಪಂದ್ಯದಿಂದ ಹೊರಗುಳಿಯಲಿದ್ದಾರೆ. ಚಾಂಪಿಯನ್ಸ್ ಟ್ರೋಫಿ ತಂಡದಿಂದ ಹೊರಬಿದ್ದ ಬೆನ್ನಲ್ಲೇ ಯಶಸ್ವಿ ಜೈಸ್ವಾಲ್ ಮುಂಬೈ ಪರ ರಣಜಿ ಪಂದ್ಯವಾಡಲಿದ್ದಾರೆ ಎನ್ನಲಾಗಿತ್ತು. ಆದರೀಗ ನಿರ್ಣಾಯಕ ಪಂದ್ಯದಿಂದ ಹೊರಗುಳಿಯಲು ಜೈಸ್ವಾಲ್ ನಿರ್ಧರಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣ ಯಶಸ್ವಿ ಜೈಸ್ವಾಲ್ ಗಾಯಗೊಂಡಿರುವುದು. ಎಡಗಾಲಿನ ಪಾದದ ನೋವಿನಿಂದ ಬಳಲುತ್ತಿರುವ ಅವರಿಗೆ ವೈದ್ಯರು ಹೆಚ್ಚಿನ ವಿಶ್ರಾಂತಿ ಸೂಚಿಸಿದ್ದಾರೆ. ಹೀಗಾಗಿ ವಿದರ್ಭ ವಿರುದ್ಧದ ರಣಜಿ ಟೂರ್ನಿಯ ಸೆಮಿಫೈನಲ್ ಪಂದ್ಯದಿಂದ ಯಶಸ್ವಿ ಜೈಸ್ವಾಲ್ ಹಿಂದೆ ಸರಿದಿದ್ದಾರೆ. ಇದಕ್ಕೂ ಮುನ್ನ ಯಶಸ್ವಿ ಜೈಸ್ವಾಲ್ ಚಾಂಪಿಯನ್ಸ್ ಟ್ರೋಫಿಗಾಗಿ ಆಯ್ಕೆಯಾಗಿದ್ದರು. ಆದರೆ ಕೊನೆಯ ಕ್ಷಣದಲ್ಲಿನ ಬದಲಾವಣೆಯಿಂದಾಗಿ ಅವರು ತಂಡದಿಂದ ಹೊರಬಿದ್ದಿದ್ದಾರೆ. ಅಲ್ಲದೆ ಅವರ ಬದಲಿಗೆ 15 ಸದಸ್ಯರ ಬಳಗಕ್ಕೆ ವರುಣ್ ಚಕ್ರವರ್ತಿ ಅವರನ್ನು ಆಯ್ಕೆ ಮಾಡಲಾಗಿದೆ. ಇದಾಗ್ಯೂ ಯಶಸ್ವಿ ಜೈಸ್ವಾಲ್ ಅವರನ್ನು ಚಾಂಪಿಯನ್ಸ್ ಟ್ರೋಫಿಗಾಗಿ ಮೀಸಲು ಆಟಗಾರರ ಪಟ್ಟಿಯಲ್ಲಿರಿಸಲಾಗಿದೆ. ಮೊಹಮ್ಮದ್ ಸಿರಾಜ್, ಯಶಸ್ವಿ ಜೈಸ್ವಾಲ್ ಹಾಗೂ ಶಿವಂ ದುಬೆ ಅವರನ್ನು ಪ್ರಯಾಣೇತರ ಬದಲಿ ಆಟಗಾರರಾಗಿ ಆಯ್ಕೆ ಮಾಡಲಾಗಿದ್ದು, ಭಾರತ ತಂಡದಿಂದ ಯಾರಾದರೂ ಯಾರಾದರೂ ಗಾಯಗೊಂಡರೆ, ಬದಲಿ ಆಟಗಾರರಾಗಿ ಇವರು ದುಬೈಗೆ ಪ್ರಯಾಣಿಸಲಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966